# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE    Vol XVII - 12    ಡಿಸೆಂಬರ್ 2000

### ಈ ಸಂಚಿಕೆಯಲ್ಲಿ


| | | | |
|---|---|---|---|
| ಅಸೋಸಿಯೇಷನ್ನಿನಲ್ಲಿ | | | |
| ಮಾಸ್ತಿ ಉತ್ಸವ | | | 2 |
| ಮಕ್ಕಳ ಕಾರ್ಯಕ್ರಮ : ನಾಟಕ - ಗುಮ್ಮ | | | 5 |
| ಶ್ರೀಮತಿ ಸುಧಾ ಮೂರ್ತಿಯವರ ಭೇಟಿ | | | 6 |
| ಮಾಸ್ತಿ ವೆಂಕಟೇಶ ಐಯ್ಯಂಗಾರ್ | • | ಕೀರ್ತಿನಾಥ ಕುರ್ತುಕೋಟಿ | 7 |
| ಮುತ್ತಣ್ಣಾಗೆ ಮುತ್ತು | • | ವಿಜಯವಲ್ಲಿ | 10 |
| ನಾಟಕ ವಿಮರ್ಶೆ<br>ಕರುಣಾರಸ ಮಡುಗಟ್ಟಿದ ಬೆಂದ ಕಾಳೂರು | • | ಡಾ. ಜಿ. ಎನ್. ಉಪಾಧ್ಯ | 14 |
| ಕರ್ನಾಟಕ ಸಾಂಸ್ಕೃತಿಕ ಪರಂಪರೆ - ೭ | • | ಸುಮಾ ದ್ವಾರಕನಾಥ | 16 |
| ರಾಜ್ಯೋತ್ಸವ ಪ್ರಶಸ್ತಿಗೆ ಪಾತ್ರವಾದ<br>ಮೈಸೂರು ಅಸೋಸಿಯೇಶನ್ | • | ಡಾ. ಜಿ.ಎನ್. ಉಪಾಧ್ಯ | 18 |
| ಡಾ. ಗಿರಿಜಾ ಶಾಸ್ತ್ರಿ ಅವರ 'ಕಥಾ ಮಾನಸಿ' - ಒಂದು ಸಮೀಕ್ಷೆ | • | ರಮಾಮಣಿ | 20 |
| ಸುತ್ತಮುತ್ತ | | | 22 |



**The Mysore Association, Mumbai**

393 Bhaudaji Road, Matunga, Mumbai-400 019

Tel 402 46 47 • Grams KARUNADU

# ಮಾಸ್ತಿ ಉತ್ಸವ

## ಮಾಸ್ತಿ ಸಣ್ಣ ಕತೆಗಳ ದೊಡ್ಡ ಸರದಾರ

ಮಾಸ್ತಿ ಅವರು ಗೈದ ಸಾಹಿತ್ಯ ಪರಿಚಾರಿಕೆ ವಿಶಿಷ್ಟ ಬಗೆಯದು. ಅವರ ಕತೆಗಳ ಈ ಮಣ್ಣಿನಿಂದ ಅರಳಿದವು.



ಸಚಿವ ಶ್ರೀ ಬಿ.ಕೆ. ಚಂದ್ರಶೇಖರ್ ಅವರು ಮಾಸ್ತಿ ಉತ್ಸವದ ಉದ್ಘಾಟನೆ ಮಾಡುತ್ತಿರುವುದು.

ಅವುಗಳಲ್ಲಿ ಪಾಶ್ಚಾತ್ಯ ಪ್ರಭಾವವಿಲ್ಲ. ಮಾಸ್ತಿ ಅವರು ಸಣ್ಣ ಕತೆಗಳ ದೊಡ್ಡ ಸರದಾರ ಎಂದು ಕರ್ನಾಟಕ ಸರಕಾರದ ವಾರ್ತಾ ಮತ್ತು ಪ್ರಚಾರ ಖಾತೆ ಸಚಿವ ಪ್ರೊ. ಬಿ. ಕೆ. ಚಂದ್ರಶೇಖರ ಅವರು ಅಭಿಪ್ರಾಯ ಪಟ್ಟರು.

ಅವರು ಮುಂಬಯಿಯಲ್ಲಿ ಮೈಸೂರು ಅಸೋಸಿಯೇಶನ್, ಮುಂಬಯಿ, ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ, ಮಾಸ್ತಿ ಅಧ್ಯಯನ ಪೀಠ, ಕರ್ನಾಟಕ ಸಾಹಿತ್ಯ ಅಕಾಡೆಮಿ ಇವರು ಸಂಯುಕ್ತವಾಗಿ ಆಯೋಜಿಸಿದ್ದ ಎರಡು ದಿನಗಳ ಮಾಸ್ತಿ ವೆಂಕಟೇಶ ಅಯ್ಯಂಗಾರ ಸಂಸ್ಮರಣೆಯ 'ಮಾಸ್ತಿ ಉತ್ಸವ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಮಾಸ್ತಿ ಅವರ ವ್ಯಕ್ತಿತ್ವ ಅಸಾಧಾರಣವಾದುದು. ಅವರ ಕತೆಗಳನ್ನು ಜನ ಓದಿ ಆನಂದ ಪಡುವಂತಾಗ ಬೇಕು. ಸಾಹಿತ್ಯ ಬದುಕಿಗೆ ನೀಡುವ ಪ್ರೇರಣೆ ಗಮನಾರ್ಹ. ಮುಂಬಯಿಯಲ್ಲಿ ಕನ್ನಡಿಗರು ಒಟ್ಟಾಗಿ ಕರ್ನಾಟಕ ಸಂಸ್ಕೃತಿಯನ್ನು ಬಿಂಬಿಸುವ ಕರ್ನಾಟಕ ಉತ್ಸವನ್ನು ನಡೆಸುವುದರಲ್ಲಿ ಸರಕಾರ ಅದಕ್ಕೆ ಬೇಕಾದ ನೆರವು ನೀಡುತ್ತದೆಂದು ಅವರು ನುಡಿದರು.

ಮಾಸ್ತಿಯವರ ಸಾರ್ವಜನಿಕ ಪ್ರೀತಿ ಅಪಾರವಾದುದು. ಸತ್ಯವನ್ನು ಬಿಡದ ಸೌಜನ್ಯ ಅವರದು. ಮಾಸ್ತಿ ಅವರ ಅಂತಃಕರಣ, ಮಾನವೀಯ ಕಾಳಜಿ, ಬದುಕನ್ನು ಪ್ರೀತಿಸುವ ಪರಿ ಯಾರನ್ನೂ ಬೆರಗುಗೊಳಿಸುತ್ತದೆ. ಅನೇಕ ಪ್ರತಿಭೆ ಗಳನ್ನು ಬೆಳಕಿಗೆ ತಂದ ಹಿರಿಯ ಚೇತನ ನಮ್ಮ ನಾಡಿನ ಸಾಂಸ್ಕೃತಿಕ ಜೀವನವನ್ನು ರೂಪಿಸಿದ ಹಿರಿಮೆಗೆ ಅವರು ಪಾತ್ರರಾಗಿದ್ದರೆಂದು ಆಶಯ ಭಾಷಣದಲ್ಲಿ ಪ್ರೊ. ಆ.ರಾ. ಮಿತ್ರ ಅವರು ಅಭಿಪ್ರಾಯಪಟ್ಟರು.

ಮಾಸ್ತಿ ಕುರಿತು ನಡೆದ ವಿಚಾರ ಸಂಕಿರಣ ಕಾರ್ಯಕ್ರಮ ದಲ್ಲಿ ಮಾಸ್ತಿ ಅವರ ವ್ಯಕ್ತಿತ್ವವನ್ನು ಕುರಿತು ಪ್ರೊ. ಎಂ. ರಾಮಚಂದ್ರ, ಮಾಸ್ತಿ ಕಾವ್ಯದ ಬಗ್ಗೆ ಡಾ. ತಾಳ್ತಜೆ ವಸಂತ ಕುಮಾರ, ಮಾಸ್ತಿ ಅವರ ಗದ್ಯ ಸಾಹಿತ್ಯದ ಬಗೆಗೆ ಡಾ. ಜಿ.ಎಂ. ಹೆಗಡೆ ಅವರು ಪ್ರಬಂಧ ಮಂಡಿಸಿದರು.

ಸಮಾರೋಪ ಭಾಷಣದಲ್ಲಿ ನ್ಯಾಯಮೂರ್ತಿ ಬಿ.ಎನ್. ಶ್ರೀಕೃಷ್ಣ ಅವರು ಮಾತನಾಡುತ್ತಾ ಮಾಸ್ತಿ ಅವರು ಬದುಕು ಸಮೃದ್ಧವಾದದು ಎಂದು ಹೇಳಿದರು.



ಸಚಿವ ಶ್ರೀ ಬಿ.ಕೆ. ಚಂದ್ರಶೇಖರ್ ಅವರು ಮಾತನಾಡುತ್ತಿರುವುದು.

ಇದೇ ಸಂದರ್ಭದಲ್ಲಿ ಮಾಸ್ತಿ ಅವರ ಸಣ್ಣ ಕತೆಯನ್ನು ಆಧರಿಸಿದ ಡಾ. ಮಂಜುನಾಥ ನಿರ್ದೇಶನದ ''ಬೆಂದಕಾಳೂರು'' ನಾಟಕವನ್ನು ಮೈಸೂರು ಅಸೋಸಿಯೇಶನ ಲಲಿತ ಕಲಾ ವಿಭಾಗದ ಮಿತ್ರರು ಸಾದರ ಪಡಿಸಿದರು. ಮಾಸ್ತಿ ಅವರ ಜೀವನ ಸಾಧನೆಯನ್ನು ಬಿಂಬಿಸುವ ಛಾಯ ಚಿತ್ರ ಪ್ರದರ್ಶನ, ವಿಶೇಷ ಸಂಚಿಕೆ, ಮಾಸ್ತಿಯವರ ಕಿರುಗತೆಗಳನ್ನು ಆಧರಿಸಿದ ಕಿರು ಚಿತ್ರಗಳನ್ನು ಪ್ರದರ್ಶಿಸಲಾಯಿತು. ಡೊಂಬಿವಲಿಯ ಅನುಜಾ ಮಹಿಳಾ ಸಂಘದವರಿಂದ ಮಾಸ್ತಿಯವರ ಗೀತ ಗುಂಜನ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಕಾರ್ಯಕ್ರಮದ ಆರಂಭದಲ್ಲಿ ಮೈಸೂರು ಅಸೋಸಿಯೇಶನ್ ಅಧ್ಯಕ್ಷ ದೊರೆಸ್ವಾಮಿ ಅವರು ಸ್ವಾಗತಿಸಿದರು. ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥ



ಪ್ರೊ| ಆ.ರಾ. ಮಿತ್ರ ಅವರು ನೇಸರುವಿನ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡುತ್ತಿರುವುದು.



ಅನುಜಾ ಮಹಿಳಾ ಸಂಘದವರಿಂದ ''ಮಾಸ್ತಿ ಗುಂಜನ'' ಕಾರ್ಯಕ್ರಮ



ಮಾಸ್ತಿಯವರ ಬಗ್ಗೆ ನಡೆದ ವಿಚಾರ ಸಂಕಿರಣದಲ್ಲಿ ವೇದಿಕೆಯ ಮೇಲೆ (ಎಡದಿಂದ) ದೊರೆಸ್ವಾಮಿ, ಹಾಳ್ತಜೆ ವಸಂತಕುಮಾರ್, ನ್ಯಾಯಮೂರ್ತಿ, ಶ್ರೀಕೃಷ್ಣ, ಪ್ರೊ| ಎಂ. ರಾಮಚಂದ್ರ ಮತ್ತು ಡಾ| ಜಿ. ಎಮ್. ಹೆಗಡೆ.



ಮಾಸ್ತಿಯವರ ಬಗ್ಗೆ ಏರ್ಪಡಿಸಿದ್ದ ಪ್ರದರ್ಶನದ ಒಂದು ನೋಟ.

ಡಾ. ಹಾಳ್ತಜೆ ಅವರು ಪ್ರಾಸ್ತಾವಿಕ ಭಾಷಣ ಮಾಡಿದರು. ಮಾಸ್ತಿ ಅವರ ಮೊಮ್ಮಗ ವೆಂ. ರಾಮಭದ್ರ ಉತ್ಸವದ ಹಿನ್ನೆಲೆಯಲ್ಲಿ ಮಾಸ್ತಿ ಅಧ್ಯಯನ ಪೀಠದ ಸಾಧನೆಗಳನ್ನು ವಿವರಿಸಿದರು. ಡಾ. ಜಿ. ಎನ್. ಉಪಾಧ್ಯ, ಶ್ರೀಮತಿ ರೇಖಾ ಎನ್.ವಿ. ಅವರು ಕಾರ್ಯಕ್ರಮ ನಿರೂಪಿಸಿದರು. ಮೈಸೂರು ಅಸೋಸಿಯೇಶನ್ನಿನ ಗೌರವ ಕಾರ್ಯದರ್ಶಿ ಶ್ರೀ ಎಂ.ಎ.ಎನ್. ಪ್ರಸಾದ್ ಅವರು ವಂದಿಸಿದರು.

## PROGRAMME

On 21st and 22nd December, 2000 at 7.15 p.m.

Prof. : **S. K. Ramachandra Rao** of Bangalore Will deliver lectures on

Rigveda & Vedanta
Bhagavadgita & Vedanta

Under the Mysore Association

**Golden Jubilee Endowment lectures – 2000**

At the Mysore Association Hall, 393, Bhaudaji Road, Matunga, Mumbai-400 019

*All are cordially invited*

**Grand New year Eve Gettogether**
**on 31st December, 2000**
**7-30 p.m. onwards**

- Prize Distribution to Winners in Sports & Talent Competitions
- Entertainment
- Games • Dinner • Grand Fun

*Contact Office for Details*

**FOR ALL YOUR DOMESTIC AND INTERNATIONAL TRAVEL ARRANGEMENTS**

*CONTACT*


**AUGUST TRAVEL SERVICE**


Agents For
INDIAN AIRLINES &
JET AIRLINES

**REGD. OFFICE :**
3/15, ASHIANA, SECTOR 17,
VASHI, NAVI MUMBAI
PHONES : 789 1970 * 789 1972
789 2451
GRAMS : AUGTRASERV

**ALSO AT :**
2/16, KABBUR HOUSE,
SION (E), MUMBAI-400 022.
PHONES : 407 2984 * 409 3573
407 7750

# ಬೆಂದಕಾಳೂರು ನಾಟಕದ ಕೆಲವು ದೃಶ್ಯಗಳು













# ಮಕ್ಕಳ ಕಾರ್ಯಕ್ರಮ ನಾಟಕ "ಗುಮ್ಮ"

ನವೆಂಬರ್ ತಿಂಗಳಲ್ಲಿ ಮಕ್ಕಳ ದಿನಾಚರಣೆ ಯನ್ನು ಆಚರಿಸಲಾಗುತ್ತದೆ. ಈ ವರ್ಷ ಮಕ್ಕಳ ದಿನಾಚರಣೆಯ ಅಂಗವಾಗಿ ಒಂದು ನೃತ್ಯ ಕಾರ್ಯಕ್ರಮ ಮತ್ತು ಒಂದು ನಾಟಕವನ್ನು ನಮ್ಮ ಪುಟಾಣಿಗಳು ನಡೆಸಿಕೊಟ್ಟರು. 25ನೇ ತಾರೀಖು ಶನಿವಾರ ಸಂಜೆ 7 ಘಂಟೆಗೆ ಕಾರ್ಯಕ್ರಮವು ಪ್ರಾರಂಭವಾಯಿತು. ಡಾ॥ ಮಂಜುನಾಥ್‌ರವರು ಕಾರ್ಯಕ್ರಮದ ಸಂಚಾಲಕರಾಗಿ ಕಲಾವಿದರ ಪರಿಚಯ ಮಾಡಿಕೊಟ್ಟರು. ಮೊದಲು ಕು॥ ಕ್ಷಮಾ ಉಪಾಧ್ಯ ಇವಳಿಂದ ಭರತ ನಾಟ್ಯವಾಯಿತು.

ಕ್ಷಮಾ ಉಪಾಧ್ಯಳಿಗೆ ನೃತ್ಯದಲ್ಲಿ ಆಸಕ್ತಿ ಹೀಗಾಗಿ ಚಿಕ್ಕ ವಯಸ್ಸಿಗೆ ಚೆನ್ನಾಗಿ ಕಲಿತಿದ್ದಾಳೆ. 3-4 ವರ್ಷಗಳಿಂದ ರಾಜರಾಜೇಶ್ವರಿ ನೃತ್ಯ ಶಾಲೆಯಲ್ಲಿ



ಗುಮ್ಮ ದಲ್ಲಿ ಪಂಕಜ್, ಪೂರ್ಣಿಮಾ ಮತ್ತು ಇತರರು.



ಗುಮ್ಮ ನಾಟಕದ ಮತ್ತೊಂದು ದೃಶ್ಯದಲ್ಲಿ ಪಂಕಜ್, ಪೂರ್ಣಿಮಾ, ಪ್ರಿಯಾಂಕ ದೇಸಾಯಿ ಮತ್ತು ಇತರರು.

ಗುರು ಕಲ್ಯಾಣ ಸುಂದರಂ ಅವರ ಮಾರ್ಗದರ್ಶನ ದಲ್ಲಿ ಅಭ್ಯಾಸ ಮಾಡುತ್ತಿದ್ದಾಳೆ. 3ನೇ ತರಗತಿಯಲ್ಲಿ ಓದುತ್ತಿರುವ ಕ್ಷಮಾ ಅನೇಕ ಚಟುವಟಿಕೆಗಳಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಾಳೆ.

ನೃತ್ಯದ ನಂತರ ಪುಟಾಣಿಗಳ ನಾಟಕ ನಡೆಯಿತು.

''ಗುಮ್ಮ'' ಗುಮ್ಮ..... ಎಂದರೆ ಏನು? ಯಾರೂ ಉತ್ತರಿಸಲಾಗದ ಪ್ರಶ್ನೆ. ಮಕ್ಕಳಿಗೆ ಹೆದರಿಸಲು ಬಳಸುವ ರೂಢಿಯಲ್ಲಿರುವ ಪದ, ಮಕ್ಕಳು ಗಲಾಟೆ ಮಾಡಿದಾಗ ಸಾಮಾನ್ಯವಾಗಿ ತಾಯಂದಿರು ಹೆದರಿಸಲು ಹೇಳುತ್ತಾರೆ. ''ಗುಮ್ಮನ ಕರಿತೀನಿ'' ಗುಮ್ಮಂಗೆ ಹಿಡಿಕೊಡ್ತೀನಿ''.... ಅಂತೆಲ್ಲಾ. ಆಗ ಮಕ್ಕಳಿಗೆ ಮಾನಸಿಕವಾಗಿ ಒಂದು ರೀತಿಯ ಭಯ ಆವರಿಸಿ ಸುಮ್ಮನಾಗುತ್ತವೆ. ಆದರೆ ಸ್ವಲ್ಪ ಬೆಳೆದ ಮಕ್ಕಳು ಗುಮ್ಮ ಅಂದ್ರೆ ಏನಮ್ಮಾ ಅಂತ ಕೇಳತ್ವೆ. ಅದಕ್ಕೆ ಉತ್ತರ ತಾಯಿ ಬಳಿ ಇಲ್ಲ. ಏನನ್ನು ತೋರಿಸಿ ''ಗುಮ್ಮ'' ಅನ್ನಬೇಕು, ಗುಮ್ಮದ ವರ್ಣನೆ ಹೇಗೆ? ಅನಾದಿಕಾಲದಿಂದಲೂ ಬಂದಿದೆ. ಈ ಗುಮ್ಮನ ಭೀತಿ. ಪುರಂದರದಾಸರ ಒಂದು ಪದದಲ್ಲಿ ''ಕೃಷ್ಣ'' 'ಯಶೋದೆ'ಗೆ ಹೇಳುತ್ತಾನೆ. ''ಗುಮ್ಮನ ಕರೆಯದಿರೆ ಅಮ್ಮ ನೀ''.... ಎಂದು. ಅಂದಿನಿಂದ ಇಂದಿನ ವರೆಗೂ 'ಗುಮ್ಮ' ಎಂದರೆ ಏನು ಎಂಬ ಪ್ರಶ್ನೆ.

ಆದರೆ ಗುಮ್ಮ ಅಂದರೆ ಏನೂ ಅಲ್ಲ. ಅದೊಂದು ಮಾನಸಿಕ ಭ್ರಮೆ ಎಂಬುದನ್ನು ಖ್ಯಾತ ನಾಟಕಕಾರ ಶ್ರೀ ಎ.ಎಸ್. ಮೂರ್ತಿ ಅವರು ತಮ್ಮ ''ಗುಮ್ಮ'' ನಾಟಕದ ಮೂಲಕ ತಿಳಿಸಿದ್ದಾರೆ. ನಾಟಕದಲ್ಲಿ ಬರುವ ಅಜ್ಜಿಯು ತನ್ನ ಮೊಮ್ಮಗನನ್ನು ಕಾಡುತ್ತಿರುವ ಗುಮ್ಮನ ಭ್ರಮೆಯನ್ನು, ಮನಸ್ಸಿನಲ್ಲಾ ವರಿಸಿರುವ ಭಯವನ್ನು ದೂರ ಮಾಡುತ್ತಾಳೆ. ನಂತರ ನಾಯಕ ಹರಿಯು ಧೈರ್ಯದಿಂದ ಉಸಿರಾಡುತ್ತಾನೆ.

ಡಾ॥ ಮಂಜುನಾಥರವರ ನೇತೃತ್ವದಲ್ಲಿ ಹಾಗೂ ಶ್ರೀಮತಿ ಸುಮಾ ದ್ವಾರಕನಾಥ್‌ರವರ ನಿರ್ದೇಶನ ದಲ್ಲಿ ನಾಟಕವು ಯಶಸ್ವಿಯಾಗಿ ಪ್ರಯೋಗ ಗೊಂಡಿತು.



ಗುಮ್ಮ ನಾಟಕ ಆಡಿದ ಪುಟಾಣಿಗಳು ಹಾಗೂ ನಿರ್ದೇಶಕಿ ಸುಮಾದ್ವಾರಕಾನಾಥ್‌ರೊಂದಿಗೆ.

# ಶ್ರೀಮತಿ ಸುಧಾಮೂರ್ತಿ ಅವರ ಭೇಟಿ

ಅಸೋಸಿಯೇಷನ್‌ನಲ್ಲಿ

ಶ್ರೀಮತಿ ಸುಧಾಮೂರ್ತಿಯವನ್ನು ಬಲ್ಲದ ವರು ಬಹಳ ಕಡಿಮೆ. ಕರ್ನಾಟಕ ಹಾಗೂ ಹೊರನಾಡಿನಲ್ಲಿ ಮತ್ತು ವಿದೇಶಗಳಲ್ಲಿ ಸಹ ಚಿರಪರಿಚಿತರಾಗಿದ್ದಾರೆ. ಪುರುಷ ಪ್ರಾಧಾನ್ಯವೇ ಮೇಲುಗೈಯಾಗಿರುವ ಸಮಾಜದಲ್ಲಿ ಪುರುಷರಿಗೆ ಸರಿಸಮಾನರಾಗಿ ಕೆಲವು ಸಲ ಪುರುಷರಿಗಿಂತ ಹೆಚ್ಚಾಗಿ ಶ್ರಮಿಸಿ ವಿದ್ಯೆ ಕಲಿತು ಕೆಲಸವನ್ನು ಗಳಿಸಿದ್ದಾರೆ. ಹೆಣ್ಣು ಮಕ್ಕಳ ವಿದ್ಯಾಭ್ಯಾಸ ಕೇವಲ ಮೆಟ್ರಿಕ್ ತನಕ ಎಂಬಂತಿದ್ದ ಕಾಲದಲ್ಲಿ ಛಲಸಾಧಿಸಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಓದಿ ಪ್ರಥಮ ರ್‍ಯಾಂಕ್ ಪಡೆದ ಈಕೆ 'ಟಾಟಾ' ಕಂಪೆನಿಯಲ್ಲಿ ಸವಾಲೆಸೆದು ಕೆಲಸ ಗಳಿಸಿಕೊಂಡ ಪ್ರಥಮ ಮಹಿಳೆ.


ಬಾಲ್ಯದಿಂದಲೂ ಇವರಿಗೆ ವಿದ್ಯೆಗೆ ಒಳ್ಳೆಯ ಪ್ರೋತ್ಸಾಹ ದೊರೆತಿದೆ, ಮದುವೆಯಾದ ನಂತರ ಪತಿಯ ಪ್ರೋತ್ಸಾಹ, 'ಇನ್‌ಫೋಸಿಸ್' ಸಂಸ್ಥೆಯನ್ನು ಹುಟ್ಟು ಹಾಕಿದ 'ಸಾಫ್ಟ್‌ವೇರ್' ಕ್ಷೇತ್ರದಲ್ಲಿ ಖ್ಯಾತ ಇಂಜಿನಿಯರ್ ಆಗಿರುವ 'ಶ್ರೀನಾರಾಯಣ ಮೂರ್ತಿ'ಯವರು ಇವರ ಪತಿ. ಸುಧಾ ಅವರಿಗೆ ಸಾಹಿತ್ಯದಲ್ಲಿ ಬಹಳ ಆಸಕ್ತಿ. ಶಾಸ್ತ್ರೀಯ ಗಾಯನದಲ್ಲಿಯೂ ಬಹಳ ಆಸಕ್ತಿ. ಅನೇಕ ಕಥೆಗಳನ್ನು ಬರೆದಿದ್ದಾರೆ. ಸಣ್ಣ ಕಥೆಗಳ ಮೂಲಕ ಜನರಿಗೆ 'ಕಂಪ್ಯೂಟರ್' ಬಗ್ಗೆ ತಿಳುವಳಿಕೆ ಕೊಟ್ಟಿದ್ದಾರೆ. ಗ್ರಾಮೀಣ ಜನರಿಗೆ ಮತ್ತು ಬಡಬಗ್ಗರಿಗೆ ಬಹಳ ಸಹಾಯ ಮಾಡುತ್ತಾರೆ. ಹಳ್ಳಿಗಳಿಗೆ ಭೇಟಿ ನೀಡಿ ಅಲ್ಲಿಗೆ ಬೇಕಾದಂತಹ ವಾಚನಾಲಯ ಹಾಗೂ ಆಸ್ಪತ್ರೆಗಳು, ವಿಜ್ಞಾನಕೇಂದ್ರ ಅನಾಥಾಶ್ರಮ ಹೀಗೆ ನಾನಾ ರೀತಿಯಲ್ಲಿ ಸಹಾಯ ಮಾಡುತ್ತಿದ್ದಾರೆ.



ಶ್ರೀಮತಿ ಸುಧಾ ಮೂರ್ತಿಯವರು ಸದಸ್ಯರೊಂದಿಗೆ ಮಾತನಾಡುತ್ತಿರುವುದು.

ಕೋಟ್ಯಾಧೀಶ್ವರರಾದರೂ, ಜೀವನ ಶೈಲಿ ಬಹಳ ಸರಳ, ಪತಿಪತಿಗಳಿಬ್ಬರ ಧ್ಯೇಯವೂ ಒಂದೇ. ಇಷ್ಟು ಕಲಿತರೂ ಸುಧಾಮೂರ್ತಿಯವರ ಮೊದಲ ಕರ್ತವ್ಯ ಮನೆ, ಮಕ್ಕಳ ಮತ್ತು ಮನೆಯ ಜವಾಬ್ದಾರಿ ಸುಧಾ ಅವರದೇ. ಬಿಡುವಿನ ವೇಳೆಯಲ್ಲಿ ಪ್ರವಾಸ, ಕ್ರೈಸ್ಟ್ ಕಾಲೇಜಿನಲ್ಲಿ ಕಂಪ್ಯೂಟರ್ ಬೋಧಿಸುತ್ತಾರೆ.

ಈ ತಿಂಗಳ 18ನೇ ತಾರೀಖು ಶನಿವಾರದಂದು ಶ್ರೀಮತಿ ಸುಧಾ ಮೂರ್ತಿಯವರು ನಮ್ಮ ಅಸೋಸಿಯೇಷನ್ನಿಗೆ ಭೇಟಿ ನೀಡಿದ್ದರು. ವೇಳೆಯ ಮಹತ್ವ ಅರಿತವರು. ಹೇಳಿದಂತೆ ಸರಿಯಾಗಿ 11 ಘಂಟೆಗೆ ಅಸೋಸಿಯೇಷನ್ನಿಗೆ ಬಂದರು. ಅಸೋಸಿಯೇಷನ್ನಿನ ಆಡಳಿತ ವರ್ಗದವರು ಸ್ವಾಗತ ನೀಡಿದರು. ಡಾ। ಮಂಜುನಾಥ್‌ರವರು ಅಸೋಸಿಯೇಷನ್ನಿನ ಪರಿಚಯವನ್ನು ಮಾಡಿಕೊಟ್ಟರು. ಹಾಗೂ ಅಲ್ಲಿಯ ಆಡಳಿತ ವರ್ಗದವರು, ಸದಸ್ಯರು ಎಲ್ಲರನ್ನೂ ಪರಿಚಯ ಮಾಡಿಕೊಟ್ಟರು. ''ಬಹುಶಃ ಹೊರನಾಡಿನಲ್ಲಿ ಕನ್ನಡಿಗರು ಬಹಳ ಆಸಕ್ತಿ ಮತ್ತು ಉತ್ಸಾಹದಿಂದ ಕನ್ನಡ ಏಳ್ಗೆಗಾಗಿ ಶ್ರಮಿಸುತ್ತಾರೆ ಎನಿಸುತ್ತದೆ'' ಎಂದರು. ಅಸೋಸಿಯೇಷನ್ನಿನ ಹೊಸ ಸಭಾ ಭವನವನ್ನು ನೋಡಿ ಬಂದರು. ನಮ್ಮ ಕಾರ್ಯ ಚಟುವಟಿಕೆಗಳು ಹಾಗೂ ಕಾರ್ಯದಕ್ಷತೆಯನ್ನು ಮೆಚ್ಚಿದರು. ತಾವು ಬರೆದ ಪುಸ್ತಕಗಳನ್ನು ನಮ್ಮ ಗ್ರಂಥಾಲಯಕ್ಕೆ ಕಾಣಿಕೆಯಾಗಿ ನೀಡಿದರು. ಬಡವರಿಗೆ ಸಹಾಯ ಮಾಡುವ ಉದ್ದೇಶದಿಂದ ಮುಂಬೈನಲ್ಲಿರುವ ರಾತ್ರಿ ಶಾಲೆಗಳ ಪಟ್ಟಿಯನ್ನು ಕೇಳಿದರು ನಂತರ ಮಹಾಲದಲ್ಲಿರುವ ನ್ಯಾಶನಲ್ ಕನ್ನಡ ವಿದ್ಯಾಸಂಸ್ಥೆಗೆ ಭೇಟಿ ನೀಡಿ ಅಲ್ಲಿಂದ ತಮ್ಮ ಮುಂದಿನ ಕಾರ್ಯಕ್ರಮಗಳಿಗೆ ತೆರಳಿದರು.



ಶ್ರೀಮತಿ ಸುಧಾಮೂರ್ತಿಯವರು ಅಸೋಸಿಯೇಷನ್ನಿನ ವಿವಿಧ ಭಾಗಗಳನ್ನು ನೋಡುತ್ತಿರುವುದು.

## ಅಭಿನಂದನೆ

ಮುಂಬೈಯಿನವರೇ ಆದ, ಈಗ ಬೆಂಗಳೂರಿನಲ್ಲಿ ನೆಲೆಸಿರುವ ಶ್ರೀಮತಿ ಉಮಾರಾವ್ ಅವರ ''ನೂರುಸ್ವರ'' ಎಂಬ ಕಾದಂಬರಿಗೆ 1999ನೇ ಸಾಲಿನ 'ಗೊರೂರು ಸಾಹಿತ್ಯ ಪ್ರಶಸ್ತಿ' ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ''ಮಹಿಳಾ ವರ್ಷದ ದತ್ತಿ ನಿಧಿ ಪ್ರಶಸ್ತಿ''ಯು ದೊರಕಿದೆ. ಈ ಬೃಹತ ಸಾಧನೆಗೆ ಉಮಾ ಅವರಿಗೆ ನೇಸರುವಿನ ಅಭಿನಂದನೆಗಳು.

ಇದಲ್ಲದೆ ಸದ್ಯದಲ್ಲೇ ಇವರ ಮತ್ತೆರಡು ಕೃತಿಗಳು ಹೊರಬರಲಿವೆ. ಇವು ''ರಾಕಿ ಪರ್ವತಗಳ ನಡುವೆ ಕ್ಯಾಬರೆ'' ಎಂಬ ಪ್ರವಾಸ ಲೇಖನ ಮತ್ತು ''ಮುಂಬೈ ಡೈರಿ'' ಎಂಬ ಲಂಕೇಶ್ ಪತ್ರಿಕೆಗೆ ಅವರು ಮುಂಬೈಯಿಂದ ಬರೆಯುತ್ತಿದ್ದ ಲೇಖನಗಳ ಸಂಕಲನ.

ಕಥೆ ಕಾದಂಬರಿ ಬರೆಯುವುದಲ್ಲದೇ, ಉಮಾರಾವ್ ಮತ್ತು ಗೀತಾ ವಿಶ್ವನಾಥ್ ಇಬ್ಬರೂ ಜೊತೆಗೂಡಿ ಕನ್ನಡದ ಈ ಟಿ.ವಿ.ಗೆ ಒಂದು ಸೀರಿಯಲ್ ತಯಾರಿ ಮಾಡುತ್ತಿದ್ದಾರೆ. ಮಹಿಳಾ ಸಮಸ್ಯೆಗಳ ಬಗ್ಗೆ ಇರುವ ಈ ಸೀರಿಯಲ್ ಶೀಘ್ರದಲ್ಲಿಯೇ ಪ್ರಸಾರವಾಗಲಿದೆ ಎಂದು ಅವರು ತಿಳಿಸಿದರು.

# ಮಾಸ್ತಿ ವೆಂಕಟೇಶ ಅಯ್ಯಂಗಾರ್

✍ ಕೀರ್ತಿನಾಥ ಕುರ್ತಕೋಟಿ

ಒಂದು ದೊಡ್ಡ ಮನೆತನದಲ್ಲಿ ಹುಟ್ಟಿದರೂ ಮಾಸ್ತಿಯವರು ಬಾಲ್ಯದಲ್ಲಿ ಬಡತನವನ್ನು ಅನುಭವಿಸಬೇಕಾಗಿ ಬಂತು. ಕಲಿಯುವಾಗ ವಾರಾನ್ನದ ಮನೆಗಳಲ್ಲಿ ಅಪಮಾನವನ್ನು ಎದುರಿಸಬೇಕಾಗಿ ಬಂದ ಅವರು ಮುಂದೆ ತಮ್ಮ ಜೀವನದಲ್ಲಿ ಅಂಥ ಪ್ರಸಂಗ ಮತ್ತೊಮ್ಮೆ ಬಾರದಿರುವಂತೆ ಗೌರವವನ್ನೂ, ಕೀರ್ತಿಯನ್ನೂ ಸಂಪಾದಿಸಿದರು. ತೊಂಬತ್ತೈದು ವರ್ಷಗಳ ತುಂಬು ಜೀವನವನ್ನೂ ಕಳೆದರು. ಮಾಸ್ತಿಯವರ ಮನೆತನದ ಈ ಕತೆ ನಮ್ಮ ದೇಶದ ಇತಿಹಾಸವನ್ನು ಪ್ರತಿಬಿಂಬಿಸುತ್ತದೆ. ಕಳೆದುಕೊಂಡದ್ದನ್ನು ತಿರುಗಿ ಪಡೆದುಕೊಳ್ಳುವ ಒಂದು ಜೀವನಕ್ರಮ ಈ ಶತಕದಲ್ಲಿ ಇಡೀ ನಾಡಿನ ನಿರಂತರವಾದ ಕಾಯಕವಾಗಿದೆ. ಹಳೆಯ ಮೌಲ್ಯಗಳು ಕಳೆದು ಹೊಸ ಮೌಲ್ಯಗಳು ಹುಟ್ಟಿಕೊಂಡಿವೆ. ಇದರ ಲೆಕ್ಕಾಚಾರ ನಮಗೆ ದೊರೆಯಬೇಕಾದರೆ ಈ ಕಾಲದ ಕಥಾನಕಗಳಲ್ಲಿ ದೊರೆಯಬೇಕು. ಕಳೆದು ಹೋಗಿದ್ದ ನಾಡಿನ ಸ್ವಾತಂತ್ರ್ಯ ಈ ಶತಮಾನದಲ್ಲಿ ಮರಳಿ ನಮಗೆ ಬಂದಿತು. ಐತಿಹಾಸಿಕ ಮಹತ್ವವುಳ್ಳ ಈ ಸಂಗತಿಗಾಗಿ ನಾವು ತೆರಬೇಕಾದ ದಂಡವೆಷ್ಟು, ಅದರಿಂದಾದ ಲಾಭ ಹಾನಿಗಳೇನು ಮತ್ತು ತಿರುಗಿ ಪಡೆದ ಸ್ವಾತಂತ್ರ್ಯ ನಿಜವಾಗಿಯೂ ಸ್ವಾತಂತ್ರ್ಯವೇ ಎಂಬ ನಿರ್ಣಯ ಸ್ಪಷ್ಟವಾಗಿ ನಮಗಿನ್ನೂ ಆಗಬೇಕಾಗಿದೆ. ಮಾಸ್ತಿಯವರಂಥ ಲೇಖಕರ ಬರವಣಿಗೆ ಇತಿಹಾಸದ ಬಗ್ಗೆ ನಮಗೆ ಸ್ಪಷ್ಟವಾದ ಕಲ್ಪನೆಯನ್ನು ನೀಡಬಹುದು.

ಇದಕ್ಕೆಲ್ಲ ಮುಖ್ಯವಾದ ಕಾರಣವೆಂದರೆ ಮಾಸ್ತಿಯವರು ಸಮಕಾಲೀನ ಇತಿಹಾಸ ಪುರುಷರ ಬಗ್ಗೆ ಅಷ್ಟೊಂದಾಗಿ ಬರೆದಿಲ್ಲ. ವಿಚಿತ್ರವಾದ ಮಾತೆಂದರೆ ೧೯೪೭ರ ವರೆಗೆ ಮಾಸ್ತಿಯವರು ಸಮಕಾಲೀನ ರಾಜಕಾರಣದ ಬಗ್ಗೆ ಬರೆದಿಲ್ಲ. ಆದರೆ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಅವರು ತಮ್ಮ 'ಜೀವನ' ಪತ್ರಿಕೆಯ ಸಂಪಾದಕೀಯ ಪ್ರಸಂಗಗಳಲ್ಲಿ ರಾಜಕೀಯ ಟಿಪ್ಪಣಿಗಳನ್ನು ಬರೆದರು. ಅವರ ಸೃಜನಶೀಲ ಸಾಹಿತ್ಯದಲ್ಲಿಯ ಮೃದುವಾದ ಶೈಲಿ ಮತ್ತು ಮಾನವೀಯ ಸಹಾನುಭೂತಿ ಅವರ ರಾಜಕೀಯ ಬರವಣಿಗೆಯಲ್ಲಿ ಇಲ್ಲ. ಬ್ರಿಟಿಷರ ಆಡಳಿತದಲ್ಲಿ ಕಣ್ಣಿಗೆ ಕಾಣದಿದ್ದ ಬ್ರಿಟಿಷ್ ರಾಜಕೀಯ ಮೌಲ್ಯಗಳು ಸ್ವಾತಂತ್ರ್ಯೋತ್ತರ ಕಾಲದಲ್ಲಿ ಕೆಲವರಿಗಾದರೂ ಮಹತ್ವವಾಗಿ ಕಂಡವು. ಪಾಶ್ಚಾತ್ಯ ದೇಶಗಳ ರಾಜಕೀಯ ಸಂಸ್ಕೃತಿ ನಮ್ಮ ದೇಶದಲ್ಲಿ ಕಾಣುವದಿಲ್ಲವೆಂಬ ಹಳಹಳಿಕೆ ಕೆಲವು ಸುಶಿಕ್ಷಿತರಲ್ಲಾದರೂ ಇದೆ. ಮಾಸ್ತಿಯವರ ರಾಜಕೀಯ ಬರವಣಿಗೆಯಲ್ಲಿ ಹಳಹಳಿಕೆ ಇಲ್ಲವಾದರೂ ಸಮಕಾಲೀನ ರಾಜಕೀಯದ ಸದ್ದು ಗದ್ದಲ, ಭ್ರಷ್ಟಾಚಾರ ಬೇಸರವನ್ನು ತರಿಸಿದವು. ಸ್ವಾತಂತ್ರ್ಯ ಪೂರ್ವ ಕಾಲದಲ್ಲಿ ದೇಶದ ಮನಸ್ಸು ಒಂದಾಗಿದ್ದಂತೆ ನಂತರ ಆಗಲಿಲ್ಲ. ಆದ್ದರಿಂದ ಮಾಸ್ತಿಯವರ ರಾಜಕೀಯ ಟಿಪ್ಪಣಿಗಳ ಮೌಲ್ಯಮಾಪನಕ್ಕೆ ಹದವಾದ ಕಾಲ ಇನ್ನೂ ಒದಗಿ ಬಂದಿಲ್ಲ.

ಆದರೆ ಮಾಸ್ತಿಯವರ ಲಲಿತ ಸಾಹಿತ್ಯದ ಮಾತು ಬೇರೆ. ಮಾಸ್ತಿಯವರು ಧಾರ್ಮಿಕರು. ಸಂಪ್ರದಾಯ ನಿಷ್ಠರು. ಎಂದೆಲ್ಲ ಹೆಸರು ಪಡೆದವರು. ಧರ್ಮ ಮತ್ತು ಸಂಪ್ರದಾಯಗಳಲ್ಲಿ ಅವರಿಗೆ ಆಳವಾದ ಶ್ರದ್ಧೆಯಿದ್ದದ್ದೂ ಸುಳ್ಳಲ್ಲ. ಆದರೆ ಮುಖ್ಯವಾಗಿ ಅವರ ಲಲಿತ ಸಾಹಿತ್ಯ ಮಹತ್ವ ಕೊಟ್ಟಿದ್ದು ಸಾಮಾನ್ಯ ಮನುಷ್ಯನ ಸ್ಥಿತಿಗತಿಗಳಿಗೆ. ಸ್ವಂತದ ದೈವಿಕ ಶ್ರದ್ಧೆ ಮತ್ತು ಧರ್ಮಶ್ರದ್ಧೆಗಳಿಗೆ ಅವರು ತಮ್ಮ ಕವಿತೆಗಳಲ್ಲಿ ಅಭಿವ್ಯಕ್ತಿಯನ್ನು ಕೊಟ್ಟಿದ್ದಾರೆ. ಆದರೆ ಅವರ ಕತೆ, ಕಾದಂಬರಿಯ ಪಾತ್ರಗಳಲ್ಲಿ ನಂಬುವವರೂ ಇದ್ದಾರೆ. ನಂಬಿಕೆ ಇಲ್ಲದವರೂ ಇದ್ದಾರೆ. 'ಹಳೆಯ ಕಥೆ', ಮತ್ತೊಂದು 'ಹಳೆಯ ಕಥೆ', ಸಾರಿಪುತ್ರನ ಕೊನೆಯ ದಿನಗಳು, 'ಆಚಾರ್ಯರ ಪತ್ನಿ', 'ಮಂತ್ರೋದಯ' ಮುಂತಾದ ಕೆಲವು ಕತೆಗಳಲ್ಲಿ ಇಂಥ ಕೆಲ ಪಾತ್ರಗಳು, ಘಟನೆಗಳು ಇದ್ದರೂ ಕತೆಯ ವಸ್ತು ಮತ್ತೇನನ್ನೋ ಹೇಳಬಯಸುತ್ತದೆ. ಅದನ್ನು ಹೇಳುವುದಕ್ಕಾಗಿಯೇ ವಸ್ತು ಕತೆಯ ಆಕಾರವನ್ನು ತಳೆಯುತ್ತದೆ.

ಮಾಸ್ತಿಯವರನ್ನು ಸಣ್ಣಕತೆಯ ಜನಕರೆಂದೇ ಗುರುತಿಸಲಾಗುತ್ತದೆ. ಅವರು ಕವಿತೆಗಳನ್ನು ಬರೆದಿದ್ದಾರೆ. ಕಾದಂಬರಿ ಮತ್ತು ನಾಟಕಗಳನ್ನೂ ಬರೆದಿದ್ದಾರೆ. ಅವರ ಎರಡೂ ಕಾದಂಬರಿಗಳ ವಸ್ತು ಇತಿಹಾಸದ ಬಿಕ್ಕಟ್ಟನ್ನು ಸೂಚಿಸುತ್ತ ಅದನ್ನು ಬಿಡಿಸಿ ತೋರಿಸುತ್ತದೆ. ಮಾಸ್ತಿಯವರ ಕಾವ್ಯದ 'ಗದ್ಯತನ' ಕಾವ್ಯವನ್ನೂ, ಗದ್ಯವನ್ನೂ ಕೂಡಿಯೆ ಶ್ರೀಮಂತಗೊಳಿಸುತ್ತದೆ. **'ಕಾಕನಕೋಟೆ'** **'ತಾಳಿಕೋಟೆ'** ಯಂಥ ನಾಟಕಗಳಲ್ಲಿಯ ಕಥಾನಕ ತತ್ವ ನಾಟಕದ ಸ್ವರೂಪಕ್ಕೆ ಇನ್ನೊಂದು ಆಯಾಮವನ್ನು ಒದಗಿಸುತ್ತದೆ. ಅದೇನೇ ಇದ್ದರೂ ಮಾಸ್ತಿಯವರ ಮುಖ್ಯವಾದ ಸಾಹಿತ್ಯಿಕ ಮಾಧ್ಯಮವೆಂದರೆ ಕಥನ. ಕಾಳಿದಾಸ **'ಶಾಕುಂತಲ'** ನಾಟಕದ ಅಂಕುಗಳ ನಡುವೆ ನಡೆದಿರಬಹುದಾದ್ದನ್ನು ಮಾಸ್ತಿಯವರ ಗೌತಮಿ ಹೇಳಿದ ಕಥೆ, ಕಥೆ ಮಾಡಿ ಹೇಳುತ್ತದೆ. **'ಶಾಕುಂತಲ'** ವರ್ತಮಾನವಾದರೆ ಈ ಕತೆ ಗತಕಾಲಕ್ಕೆ ಸಂಬಂಧಿಸಿದ್ದು, ಗೌತಮಿ ಮತ್ತು ಕಾಶ್ಯಪರ ಬಾಳಿನಲ್ಲಿ ಒಮ್ಮೆ ನಡೆದು ಹೋದ ಈ ಘಟನೆ ಗೌತಮಿಯ ನೆನಪುಗಳಲ್ಲಿ ಪುನರ್ಜನ್ಮವನ್ನು ಪಡೆಯುತ್ತದೆ. ಗೌತಮಿ ಯಾರದೋ ಕತೆ ಎನ್ನುವಂತೆ ತನ್ನ ಕತೆಯನ್ನೇ ಹೇಳುತ್ತಾಳೆ. ಅವಳು ಹೇಳುವ ಕತೆಯಲ್ಲಿಯ ಹುಡುಗಿಯ ಹೆಸರು ಮಾಲಿನಿ. ಕತೆಯನ್ನು ಕೇಳಿದ ಪ್ರಿಯಂವದೆ ಹೇಳುತ್ತಾಳೆ. ''ವಿವರಗಳನ್ನು ನೋಡಿದರೆ ಸ್ವಂತವೆಂಬಂತಿದೆ. ಹೇಳುತ್ತಿರುವುದು. ಅನ್ಯವೆಂಬಂತೆ'' ಈ ಮಾತು ಮಾಸ್ತಿಯವರ ಕತೆಗಾರಿಕೆಯ ರಹಸ್ಯವನ್ನು ಕುರಿತು ಹೇಳುವಂತಿದೆ. ಗೌತಮಿ ಹೇಳುವುದು ಚರಿತ್ರೆಯೋ, ಕತೆಯೋ ಎನ್ನುವದು, ಅದನ್ನು ಕೇಳುವವರಿಗೆ ಕೂಡಲೇ ತಿಳಿಯುವುದಿಲ್ಲ. ಆದೇ ರೀತಿಯ ನೋವನ್ನು ಅನುಭವಿಸಿದ 'ಶಕುಂತಲೆಗೆ ಅದು ತಿಳಿಯುತ್ತದೆ. ಕತೆಯ ವಿವರಗಳು ದೇಶ ಕಾಲಗಳೊಡನೆ ಒಂದಾಗುತ್ತವೆ. ಗೌತಮಿ ಒಬ್ಬ ಹುಡುಗಿಯ ಕತೆಯನ್ನು ಹೇಳುತ್ತಾಳೆ. ಆ ಹುಡುಗಿಯ ಹೆಸರು 'ಮಾಲಿನಿ'. ನಮ್ಮ ನದಿಯದೇ ಹೆಸರು ! ಕತೆಯೊಳಗಿನ ಹುಡುಗಿ ಮಾಲಿನಿಯಾಗದೆ ಗೌತಮಿಯಾದರೆ ಉಳಿದ ವಿವರಗಳು ಕತೆಯಲ್ಲಿ ತಪ್ಪಿಹೋಗುತ್ತವೆ. ಚರಿತ್ರೆಯ ಸತ್ಯ ಕತೆಯ ವಿವರಗಳಲ್ಲಿ ಜೀವಂತವಾಗುತ್ತದೆ. ಮಾಲಿನಿ ಹುಲ್ಲೆಗಳನ್ನು ಮಕ್ಕಳಂತೆ ಸಾಕಿದವಳು, ಚಕ್ರವಾಕ ಪಕ್ಷಿಯ ಸಖಿ. ''ಚಕ್ರವಾಕ ವಧೂ ಆಮಂತ್ರಯಸ್ವ ಸಹಚರಮ್, ಉಪಸ್ಥಿತಾ ರಜನೀ'' ಕಾಳಿದಾಸನ ನಾಟಕದಲ್ಲಿ ಈ ವಾಕ್ಯವನ್ನು ನುಡಿದವಳು ಗೌತಮಿ. ಅವಳು ಚಿಗರೆಗಳೊಂದಿಗೆ, ಪಕ್ಷಿಗಳೊಂದಿಗೆ ಸಂವಾದವನ್ನು ನಡೆಸುತ್ತಾಳೆಂಬ ಸೂಚನೆ ಕಾಳಿದಾಸನ ನಾಟಕದಲ್ಲಿ ದೊರೆಯುತ್ತದೆ.

ಗೌತಮಿ ಮಾಲಿನಿಯಾಗುವ ಅನಿವಾರ್ಯತೆ ಮಾಸ್ತಿಯವರ ಕಥೆಯ ಕಲೆಯ ಸ್ವಭಾವವನ್ನು ಸರಿಯಾಗಿ ಸೂಚಿಸುತ್ತದೆ. ಅವರ ಯಾವ

ಕತೆಯಲ್ಲಿಯೂ ಪ್ರಾದೇಶಿಕತೆ ಕತೆಯ ವಿವರಗಳಲ್ಲಿ ಹಾಸು ಹೊಕ್ಕಾಗಿರುತ್ತದೆ. ನಮ್ಮ ಪ್ರಾದೇಶಿಕ ಕಾದಂಬರಿಯಲ್ಲಿಯಂತೆ ಮಾಸ್ತಿಯವರ ಕತೆಗಳಲ್ಲಿಯ ಪ್ರಾದೇಶಿಕತೆ ಕೇವಲ ಕೃತಿಯ ವಸ್ತುವಿಗೆ ಒಂದು ವಾಸ್ತವತೆಯ ಹಿನ್ನೆಲೆಯನ್ನು ಒದಗಿಸಲು ಬಂದದ್ದಲ್ಲ. 'ಆಚಾರ್ಯರ ಪತ್ನಿ' ಕತೆಯ ಪ್ರಾರಂಭದ ಈ ವರ್ಣನೆಯನ್ನು ನೋಡಬೇಕು.

ಗ್ರಾಮ, ಅದರ ಬೀದಿಗಳು; ಕೆರೆ, ಬಳಿಯ ಗದ್ದೆ. ತೋಟ; ಆಲಯ ಬಸತಿ; ಅವುಗಳ ಮುಂದಣ ಹೊಂಡ, ಮಂಟಪ; ಎಲ್ಲದರ ಮೇಲೆ ಎಂಟುನೂರು ವರ್ಷದ ಹಳೆಯ ಬೆಳಕೊಂದು ಮೆದುವಾಗಿ ಮಲಗಿದೆ. ಇಂಥ ಸ್ಥಳದಲ್ಲಿ ಕಾಲ ಇನ್ನಿಲ್ಲ. ಹಿರಿಮೆಯನ್ನು ಮರೆಯಿಸುತ್ತದೆ; ಅದಕ್ಕೆ ಪ್ರತಿಯಾಗಿ ತನ್ನದೊಂದು ಮಹಿಮೆಯನ್ನು ಪಾವುಡದಂತೆ ಹೊದಿಸುತ್ತದೆ.

ಈ ಬಣ್ಣನೆಯಲ್ಲಿ ಕಾಲ ದೇಶಗಳು ಒಂದಾಗುತ್ತವೆ. ಅವು ಒಂದನ್ನೊಂದು ಅಪ್ಪಿಕೊಂಡು ಕತೆಯ ಅವತಾರಕ್ಕೆ ಕಾಯುತ್ತವೆ. ಕತೆ ಮುಗಿದ ಮೇಲೆ ಇಂಥದೇ ಇನ್ನೊಂದು ಬಣ್ಣನೆ ಇದೆ.

ಅದು ಹೊಂಡದ ಪಕ್ಕದ ಒಂದು ಅರಳಿಯ ಮರದ ಅಡಿ. ದೇವಾಲಯದ ಕಡೆ, ಊರ ಕಡೆ ನೋಡಿದೆನು. ಮುಳುಗುವ ಯೋಚನೆಯಲ್ಲಿದ್ದ ಸೂರ್ಯನ ಬೆಳಕು ಶತಮಾನಗಳ ಚರಿತ್ರೆಯ ಮೇಲೆ, ಮೊಟ್ಟೆಗೆ ಕಾವು ಕೊಡುವ ಹಕ್ಕಿಯ ರೆಕ್ಕೆಯಂತೆ, ಕೋಟ್ಯಾಂತರ ಜೀವದ ಬದುಕನ್ನು ಹೊದೆದಿರುವ ಕಡಲ ತೆರೆಯಂತೆ, ಕವಿದು ಮೊಳಗುತ್ತಿತ್ತು.... ಒಬ್ಬ ಯತಿ, ಒಬ್ಬ ಸುಮಂಗಲಿ; ಒಬ್ಬ ಭಕ್ತ, ಅವನ ಪತ್ನಿ, ಇವರ ಮಗ; ಇವರ ಮೂರ್ತಿಗಳನ್ನು ಕಲ್ಪಿಸಿಕೊಳ್ಳುತ್ತ ನಾನು ಆ ಸ್ಥಳದಿಂದ ಕದಲಿ ಬಂದೆನು.

ಮೊದಲನೆಯದು ಕತೆ ಬರುವುದಕ್ಕಿಂತ ಮೊದಲಿನ ಕಾಲದೇಶಗಳ ವರ್ಣನೆಯಾದರೆ ಎರಡನೆಯದು ಕತೆ ಹೊರಟು ಹೋದ ಮೇಲಿನ ವರ್ಣನೆ. ನಡುವೆ ಕತೆ ಇದೆ. ಕಾಲದೇಶಗಳನ್ನು ಕತೆಯ ವಿವರಗಳು ತುಂಬಿಕೊಂಡಿವೆ. ರಾಮಾನುಜಾಚಾರ್ಯರ ಚರಿತ್ರೆ ಹೇಳಲಾರದ್ದನ್ನು ಈ ಕತೆ ಹೇಳುತ್ತದೆ. ಚರಿತ್ರೆಯ ವಿವರಗಳಿಗೆ, ಅದರ ಪ್ರಕ್ರಿಯೆ ಪರಿಣಾಮಗಳಿಗೆ ಭಂಗಬಾರದಂತೆ ಕತೆ ವ್ಯಾಪಿಸುತ್ತದೆ. ಎರಡೂ ವರ್ಣನೆಗಳಲ್ಲಿಯ ಮೃದುವಾದ ಬೆಳಕಿನಂತೆ ಕತೆ ಚರಿತ್ರೆಯ ಕಾಲ ದೇಶಗಳ ಮೇಲೆ ಮೊಟ್ಟೆಗೆ ಕಾವು ಕೊಡುವ ಹಕ್ಕಿಯ ರೆಕ್ಕೆಯಂತೆ ಮಲಗಿಬಿಡುತ್ತದೆ. ಕಾಲ ದೇಶಗಳಲ್ಲಿ ನಡೆದ ಚರಿತ್ರೆಗೆ ಕತೆ ಬೆಳಕಾಗುತ್ತದೆ. 'ವೆಂಕಟಿಗನ ಹೆಂಡತಿ' ಕತೆಯ ಮೊದಲು ಮತ್ತು ಕೊನೆಗಳಲ್ಲಿ ಶ್ರೀ ರಾಮ್ ಕತೆ ಹೇಳುವವರೆಗೆ ಅವರು ಕುಳಿತಿದ್ದ ಅರಳಿಯ ಮರದ ಮೇಲೆ ಒಂದು ಹದ್ದು ಕುಳಿತಿದ್ದು, ಕತೆ ಮುಗಿದ ಮೇಲೆ ಹಾರಿ ಹೋಗುತ್ತದೆ. ಈ ಹದ್ದಿನಿಂದ ಕತೆ ಹುಟ್ಟಿಲ್ಲ, ಹದ್ದು ಕತೆಯ ಯಾವ ಘಟನೆಯ ಪ್ರತೀಕವೂ ಅಲ್ಲ. ಹದ್ದು, ಸೂರ್ಯನ ಬೆಳಕು, ಕೃಷ್ಣಮೂರ್ತಿಯ ಹೆಂಡತಿ ಕತೆಯಲ್ಲಿಯ ಹೂವುಗಳ ಸುಗಂಧ ಇವೆಲ್ಲ ಸನ್ನಿಧಿಗಳು, ಏನೋ ಇದೆ ಎಂಬುದರ ಸುಳಿವು ಕೊಡುವ ಪ್ರತಿಮೆಗಳು ಮಾತ್ರ. ಮಾಸ್ತಿಯವರ ಕತೆಯೇ ಆಗಲಿ, ಕಾದಂಬರಿಯೇ ಆಗಲಿ ಅಥವಾ ಕವಿತೆಯೇ ಆಗಲಿ, ಅವುಗಳ ಮಾಧ್ಯಮ ಭಾಷೆಯಾದರೂ ಅವುಗಳು ಅವತರಿಸುವುದು ಪ್ರಾದೇಶಿಕ ವಿವರಗಳಲ್ಲಿಯೇ. 'ಕೊಂಬು' ಹೆಸರಿನ ಅವರ ಒಂದು ಕವಿತೆ ಊರ ಹೆಸರುಗಳನ್ನು ಪೋಣಿಸಿ ಹೇಳುತ್ತದೆ. ಒಂದೊಂದು ಹೆಸರೂ ತನ್ನ ಕತೆಯನ್ನು ಹೇಳಲೆಂದೇ ಬಂದದ್ದು. ಊರಿನ ಬದಲಾಗಿ ಊರ ಹೆಸರು ಬರುವುದು ಕತೆಗೆ ಅನಿವಾರ್ಯ. ಊರ ಹೆಸರಿಗೆ ಇತಿಹಾಸವಿದೆ, ಅದರಂತೆ ವರ್ತಮಾನವೂ ಇದೆ. ಇತಿಹಾಸ ಮತ್ತು ವರ್ತಮಾನಗಳು ಇವುಗಳ ನಡುವೆ ಮುಂದುವರಿಕೆಯಿರಬಹುದು. ವಿರೋಧವೂ ಇರಬಹುದು. ಅವೆರಡರ ನಡುವೆ ಕತೆ ಹುಟ್ಟಿಕೊಳ್ಳುತ್ತದೆ. ಊರ ಹೆಸರಿಗೆ ಭಾವ (ಸನ್ನಿಧಿ) ಇರುತ್ತದೆ. ಆ ಭಾವದಿಂದ ಕತೆ ಹುಟ್ಟಿಕೊಳ್ಳುತ್ತದೆ. 'ಉಗ್ರಪ್ಪನ ಉಗಾದಿ' ಎಂಬ ಕತೆಯಲ್ಲಿ ಉಗ್ರಪ್ಪ ಬೆಳಗಿನ ಹೊತ್ತು ತನ್ನ ಊರ ಹೊರಗಿನ ತೋಟವನ್ನು ನೋಡುತ್ತ ನಿಲ್ಲುತ್ತಾನೆ. ಆ ವರ್ಣನೆಯಲ್ಲಿಯ ಒಂದು ವಾಕ್ಯವೆಂದರೆ ಇದು, 'ಇನ್ನೂ ಕೆಂಪಾಗಿದ್ದ ತಳಿರು ಗಾಳಿ ಸೋಕಿದರೂ ಶಬ್ದ ಮಾಡುತ್ತಿರಲಿಲ್ಲ. ಭಾವವಿದ್ದರೂ ಮಾತನ್ನರಿಯದ ಹಸುಳೆಯಂತೆ ಉಗ್ರಪ್ಪನಿಗೆ ತನ್ನ ಊರಿನ ಇಪ್ಪೆಯ ತೋಪಿನ ಕಂಪು ಯಾವುದು, ಹೊಸ ಹಳ್ಳಿಯ ತೋಪಿನ ಕಂಪು ಯಾವುದು ಎಂದು ಗೊತ್ತಾಗುತ್ತದೆ. ಊರ ಸುತ್ತಲಿನ ನಿಸರ್ಗವನ್ನು ಕಂಡರೆ ಅವನಿಗೆ ಮಾತರಿಯದ ಹಸುಳೆಯನ್ನು ಕಂಡ ಪ್ರೀತಿ ಉಕ್ಕುತ್ತದೆ. ಉಗ್ರಪ್ಪ ಉಗಾದಿಯ ದಿನ ಊರನ್ನು ಮಾತಾಡಿಸಿದಾಗ ಕತೆ ಹುಟ್ಟುತ್ತದೆ.

ಮಾಸ್ತಿಯವರ ಬರವಣಿಗೆಯಲ್ಲಿ ಪ್ರಾದೇಶಿಕ ವಿವರಗಳ ಸಮೃದ್ಧಿ ಅವರ ಪ್ರತಿಭೆಯ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತದೆ. ಅವರ ಪ್ರತಿಭೆ ಈ ಲೋಕವನ್ನು ದೂರ ಮಾಡುವುದಿಲ್ಲ ಅಥವಾ ಅದನ್ನು ರೂಪಾಂತರಗೊಳಿಸುವುದೂ ಇಲ್ಲ. ಅದು ಎಲ್ಲವನ್ನೂ ಒಳಗೊಳ್ಳುವ ಪ್ರತಿಭೆ, ಭಾವದೊಂದಿಗೆ ಭಾವದ ಪ್ರತಿಷ್ಠಾನವನ್ನೂ ಅವರ ಪ್ರತಿಭೆ ಗುರುತಿಸುತ್ತದೆ. ಈ ಪ್ರತಿಷ್ಠಾನವೆಂದರೆ ಕತೆಯಲ್ಲಿಯ ಪ್ರಾದೇಶಿಕತೆ ಸಾಲಿಗ್ರಾಮದ ಆಚಾರ್ಯರ ಕತೆಯಾಗಬಹುದು, ಕಲ್ಮಾಡಿಯಲ್ಲಿಯ ಕೋಣನ ಕತೆಯಾಗಬಹುದು. ಮದರಂಗಿಯ ಉಗ್ರಪ್ಪನ ಕತೆಯಾಗಬಹುದು, ಕತೆಯ ದೈವ ಕತೆಯ ಪ್ರತಿಷ್ಠಾನದಲ್ಲಿ ಅಡಗಿರುತ್ತದೆ. ಪ್ರಾದೇಶಿಕತೆ ಎನ್ನುವದು ಬುದ್ಧ ಜ್ಞಾನವನ್ನು ಪಡೆದ ಬೋಧಿವೃಕ್ಷದಂತೆ, ಅಶೋಕನ ಕೈಯ್ಯಲ್ಲಿ ಸೋತು ಹಾಳಾಗಿ ಹೋದ ಕಲಿಂಗರಾಜ್ಯದಂತೆ, ಕತೆ ಹುಟ್ಟಿ ಬೆಳೆದು ಸತ್ಯದರ್ಶನವನ್ನು ಮಾಡಿಸುವ ಭೂಮಿ ಅದಾಗಿದೆ. ಆದರೆ ಇಷ್ಟಕ್ಕೇ ಕತೆಯ ಕೆಲಸ ಮುಗಿಯುವುದಿಲ್ಲ. ಅದು ಸತ್ಯವನ್ನು ಒಳಗೊಳ್ಳಬೇಕು. ಸತ್ಯವನ್ನು ಹಿಡಿಯುವುದಕ್ಕಾಗಿಯೇ ಕತೆಯ ರಚನೆಯಾಗುವುದು. ಆದರೆ ಕತೆಯೂ ಮೋಸ ಮಾಡಬಲ್ಲದು. 'ಜೋಗ್ಯೋರ ಅಂಜಪ್ಪ ಕೋಳಿ ಕದ್ದ ಕತೆ'ಯಲ್ಲಿ ಕಾಳಾಪುರದ ಹುಡುಗಿಯೊಬ್ಬಳು ಅಂಜಪ್ಪನ ಜೋಳಿಗೆಯಲ್ಲಿ ಕೋಳಿಯನ್ನು ಹಾಕುತ್ತಾಳೆ. ಯಾರಿಗೂ ಹೇಳಬಾರದೆಂದು ತಾಕೀತು ಮಾಡುತ್ತಾಳೆ. ಪ್ರತಿಯೊಂದು ಕತೆಯೂ ಅಂಜಪ್ಪನ ಜೋಳಿಗೆಯಂತೆ ಕತೆಯೊಡನೆ ಕತೆಯ ರಹಸ್ಯವನ್ನೂ ರಕ್ಷಿಸಿಕೊಂಡಿರುತ್ತದೆ. ಭಿಕ್ಷೆ ಹಾಕಿದ ಹುಡುಗಿ ಕೋಳಿಯ ಸುತ್ತ ಕತೆಯನ್ನು ಕಟ್ಟುತ್ತಾಳೆ. ಅವನೇ ಕೋಳಿಯನ್ನು ಕದ್ದುಕೊಂಡು ಹೋದನೆಂದು ಅತ್ತೆಗೆ ದೂರು ಹೇಳುತ್ತಾಳೆ. ಅಂಜಪ್ಪ ತಾನು ಕದಿಯಲಿಲ್ಲ ಎಂದು ವಿಚಾರಣೆಯ ಹೊತ್ತಿಗೆ ಹೇಳಿದರೆ ಯಾರೂ ಕೇಳುವುದಿಲ್ಲ. ಪದ ಹೇಳುವಾಗ ಜೋಳಿಗೆಯಲ್ಲಿ ಬೆಚ್ಚಗೆ ಬಂದು ಕುಳಿತಿರಬೇಕು ಎನ್ನುತ್ತಾನೆ. ಅದನ್ನು ಯಾರೂ ನಂಬುವುದಿಲ್ಲ. ಅವನು ಕದ್ದನೆಂಬುದಕ್ಕೆ ಸಾಕ್ಷಿಗಳಿದ್ದಾರೆ, ಅಂಜಪ್ಪನಿಗೆ ಮಾತ್ರ ದೇವರೇ ಸಾಕ್ಷಿ. ದೊಡ್ಡ ಮಾತು ನಿಜ, ಆದರೆ ಸಾಕ್ಷಿ ಹೇಳಲು ದೇವರೇ ಬಂದರೂ ಜನ ಕೇಳುವವರಿಲ್ಲ.

ಕತೆ ಕೂಡ ಮೋಸ ಮಾಡಬಹುದೆಂಬುದಕ್ಕೆ ಕಾಳಾಪುರದ ಹುಡುಗಿ ಕಟ್ಟಿದ ಕತೆ ಉದಾಹರಣೆಯಾಗಿದೆ. ಅಂಜಪ್ಪನ ಜೋಳಿಗೆಯಲ್ಲಿ ಕೋಳಿಯೇನೋ ಇದೆ, ಆದರೆ ಅವನು ಕದ್ದು ತಂದದ್ದಲ್ಲ. ಅಂಜಪ್ಪ ಈ ಕತೆಯನ್ನು ಕತೆಗಾರನಿಗೆ ಅವನು ಸತ್ಯವನ್ನು ಕಾಣಲೆಂದು ನಿಯಮಿತವಾದ

ಮ್ಯಾಜಿಸ್ಟ್ರೇಟ್ - ಹೇಳಿದಾಗ ಒಂದು ಮಾತನ್ನು ಹೇಳುತ್ತಾನೆ. ನ್ಯಾಯ ನೀಡುವ ಮ್ಯಾಜಿಸ್ಟ್ರೇಟ್ ದೇವರ ಕೆಲಸ ಮಾಡುತ್ತಾನೆ. ಸತ್ಯದ ಆವಿಷ್ಕಾರಕ್ಕಾಗಿ ದೇವರು ಕತೆ ಕಟ್ಟುತ್ತಾನೆ. ಕತೆ ಮುಗಿಯುವ ಮುಂದೆ ಅಂಜಪ್ಪನಿಗೆ ಸತ್ಯವೂ ಬೇಕಾಗಿಲ್ಲ. ಸುಳ್ಳೂ ಬೇಕಾಗಿಲ್ಲ. ಅವನು ತನ್ನನ್ನು ತಿರುಪತಿಯ ತಿಮ್ಮಪ್ಪನಿಗೆ ಒಪ್ಪಿಸಿಕೊಂಡಿದ್ದಾನೆ. ಕೋಳಿಯನ್ನು ತಂದು ಭಿಕ್ಷೆ ಹಾಕಿದ ಹುಡುಗಿ ಏನು ಹೇಳಿದರೂ ಸತ್ಯ ಸುಳ್ಳಾಗುವುದಿಲ್ಲ. ಸುಳ್ಳಿನಂತೆ ಸತ್ಯವೂ ಒಂದು ಹೇಳಿಕೆಯಾದಾಗ ಅದರಲ್ಲಿ ಅರ್ಥವೇನೂ ಇಲ್ಲ.

ಮಾಸ್ತಿಯವರ ಕತೆಗಳಲ್ಲಿ ವೈವಿಧ್ಯ ಬೇಕಾದಷ್ಟಿದೆ. ಆದರೂ ಅವರು ಮೂರು ನಾಲ್ಕು ವಸ್ತುಗಳನ್ನು ಕೇಂದ್ರದಲ್ಲಿ ಇಟ್ಟುಕೊಂಡಿರುತ್ತಾರೆ. ಮನುಷ್ಯ ಸಂಬಂಧಗಳ ಮಾತು ಬಂದಾಗ ಅವರ ವಸ್ತುವೆಂದರೆ ಹೆಂಡತಿ. 'ಕೃಷ್ಣಮೂರ್ತಿಯ ಹೆಂಡತಿ', 'ವೆಂಕಟಿಗನ ಹೆಂಡತಿ', 'ಆಚಾರ್ಯರ ಪತ್ನಿ', 'ನಮ್ಮ ಮೇಷ್ಟರು'. 'ಕಾಮನ ಹಬ್ಬದ ಒಂದು ಕತೆ', 'ಮೊಸರಿನ ಮಂಗಮ್ಮ' ಇಂಥ ಕತೆಗಳಲ್ಲಿರುವ ವಸ್ತುವೆಂದರೆ ಹೆಂಡತಿ. ತನ್ನದಲ್ಲದ ಹೆಣ್ಣನ್ನು ತನ್ನದಾಗಿಸಿಕೊಂಡು ಬದುಕುವ ಪ್ರಕ್ರಿಯೆಯಲ್ಲಿ ಕಾಣುವುದು ಜೀವನ ಸಂಸ್ಕಾರ. ಸ್ವಂತ ಮತ್ತು ಇತರ ಎಂಬ ಎರಡು ಭಿನ್ನವಾದ ತತ್ವಗಳ ನಡುವೆ ನಡೆಯುವ ಸಾಮರಸ್ಯ ಇಲ್ಲವೆ ಸಂಘರ್ಷ ಬದುಕಿನ ಸತ್ಯವನ್ನು ತೆರೆದು ತೋರಿಸಬಲ್ಲದು. ರಾಮಾನುಜಾಚಾರ್ಯರ ಪತ್ನಿ ಸುಮಂಗಲಿಯಾಗಿ ಬಾಳಿ ಸತ್ತಳು ಎಂಬ ಕತೆಯಲ್ಲಿ ಗಂಡನೆಂಬ ವಸ್ತು ಕೇವಲ ಒಂದು ತತ್ವವಾಗಿ ಉಳಿಯಬಾರದು, ಹಾಗೆ ಉಳಿದರೆ ಪಾಪ ಎಂಬ ಅನುಭವ ಮೂಡಿ ಬಂದಿದೆ. ಮಲಗಿದ್ದ ಆಚಾರ್ಯರ ಮೈಯೊಳಗಿನ ಜ್ವರವನ್ನು ತನ್ನೊಳಗೆ ತಂದುಕೊಂಡು ಅವರ ಅಲೌಕಿಕದ ಅನ್ವೇಷಣೆಯನ್ನು ಸುಗಮವಾಗಿಸಿದಳು ಎಂಬ ಸಂಗತಿಯಲ್ಲಿ ಅವಳ ತ್ಯಾಗಕ್ಕಿಂತ ಹೆಚ್ಚಾಗಿ ಗಂಡನ ಸಾನ್ನಿಧ್ಯದ ಉತ್ಕಟವಾದ ಹಸಿವು ಕಾಣುತ್ತದೆ. ಆಚಾರ್ಯರಿಂದ ದೂರವಿದ್ದರೂ ತೀರ ಹತ್ತಿರವಾಗಿದ್ದ ಅವರ ಪತ್ನಿ ಅವರ ಮೈಯ ಜ್ವರವನ್ನು ತಾನು ಸೆಳೆದುಕೊಂಡಳು. ಅವಳ ಸೌಭಾಗ್ಯ ಮತ್ತು ಅವಳ ವೈಧವ್ಯ ಇವರೆಡೂ ಸಾಪೇಕ್ಷ ಸ್ಥಿತಿಗಳೇ, ಜೀವ ಮಾತ್ರ ಏಕಾಕಿ, ನಿರಪೇಕ್ಷ. ಪತ್ನಿಯ ಜೀವದ ಲಕ್ಷ್ಯ ಯಾವ ಕಡೆಗಿತ್ತು? ಕತೆ ಉತ್ತರ ಹೇಳುವುದಿಲ್ಲ. ಆದರೆ ಸತ್ಯದ ಇನ್ನೊಂದು ಮಗ್ಗುಲನ್ನು, ನೋವಿನ ಮಗ್ಗುಲನ್ನು ತೋರಿಸುತ್ತದೆ.

ಕೃಪೆ : ನೂರು ಮರ ನೂರು ಸ್ವರ

ಜಿ.ಪಿ. ರಾಜರತ್ನಂರವರು ಎಂ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ಉದ್ಯೋಗವಿಲ್ಲದೆ, ಪ್ರಯತ್ನಗಳೆಲ್ಲ ವಿಫಲವಾಗಿ ಮಾಸ್ತಿಯವರ ಬಳಿಗೆ ಬಂದರು. ಆಗ ಮಾಸ್ತಿಯವರು ಜನಗಣತಿಯ ಶಾಖಾಧಿಕಾರಿಗಳು.

ರಾಜರತ್ನಂ : ಏನಾದರೂ ಕೆಲಸ ಕೊಡುತ್ತೀರಾ?

ಮಾಸ್ತಿ : ಇಲ್ಲಿ ಇರುವ ಕೆಲಸ ಕಡೆಯ ಮಟ್ಟದ್ದು. ಸಂಬಳ ಇಪ್ಪತ್ತೈದು ರೂಪಾಯಿ. ಎಂ. ಎ. ಆಗಿರುವ ನಿಮಗೆ ಇದು ಸ್ವಲ್ಪ.

ರಾಜರತ್ನಂ : ನನಗೆ ಜೀವನಕ್ಕೆ ಕಾಸುಬೇಕು. ಬೇರೆ ಎಲ್ಲಿಯೂ ಕೆಲಸ ದೊರೆಯಲಿಲ್ಲ. ನಿಮ್ಮಲ್ಲಿ ಈ ಕೆಲಸವನ್ನೇ ಮಾಡುತ್ತೇನೆ.

ಮಾಸ್ತಿ : ನಿಮಗೆ ಇಪ್ಪತ್ತೈದು ರೂಪಾಯಿ ಕೆಲಸ ಕೊಟ್ಟು ಈ ಚೀಟಿಗಳನ್ನು ವಿಂಗಡಿಸುವ ಕೆಲಸವನ್ನು ನಿಮ್ಮಿಂದ ಮಾಡಿಸುವುದು ನನಗೆ ರುಚಿಸುತ್ತಿಲ್ಲ. ನಿಮಗೆ ಬೇರೆ ಒಂದು ಯೋಜನೆ ಹೇಳುತ್ತೇನೆ ಒಪ್ಪಿಗೆಯೆ, ಹೇಳಿ.

ರಾಜರತ್ನಂ : ಅಪ್ಪಣೆ.

ಮಾಸ್ತಿ:ನಾನು ಫಾಹಿಯನ್, ಹುಯೆನ್‌ತ್ಸಾಂಗ್, ನಮ್ಮ ದೇಶದಲ್ಲಿ ಸಂಚಾರಮಾಡಿ ಬರೆದ ವರದಿಗಳನ್ನು ಕನ್ನಡಕ್ಕೆ ತರಬೇಕೆಂದು ಎಂದೋ ಯೋಚಿಸಿದೆ. ಲೋಕದ ಬೇರೆ ಭಾಷೆಗಳ ಉತ್ತಮ ಗ್ರಂಥಗಳನ್ನು ಕನ್ನಡಕ್ಕೆ ತರುವ ಕೆಲಸ ಆಗ ಬೇಕಾಗಿದೆ. ಈಚೆಗೆ ನಾನು ವಾಲ್ಟೇರವರ 'ಕ್ಯಾಂಡಿಡ್' ಪುಸ್ತಕವನ್ನು ಓದಿದೆನು. ಅದನ್ನು ಕನ್ನಡಕ್ಕೆ ತಂದರೆ ಚೆನ್ನ ಆದೀತು ಎನ್ನಿಸಿತು. ನೀವು ಮನೆಯಲ್ಲಿ ಕುಳಿತು ಈ ಭಾಷಾಂತರ ಕೆಲಸವನ್ನು ಮಾಡಿ. ನಾನು ನಿಮಗೆ ತಿಂಗಳಿಗೆ ಇಪ್ಪತ್ತೈದು ರೂಪಾಯಿ ಕೊಡುತ್ತೇನೆ.

ರಾಜರತ್ನಂ : ಆಗಲಿ, ಈ ಕೆಲಸ ಮಾಡುತ್ತೇನೆ.

ರಾಜರತ್ನಂರವರು ಈ ಕೆಲಸವನ್ನಾರಂಭಿಸಿದರು. ಚೀನಾ ಯಾತ್ರಿಕರ ಎರಡು ಪುಸ್ತಕಗಳನ್ನೂ, 'ಪ್ರಬುದ್ಧ ಕರ್ನಾಟಕ'ದಲ್ಲಿ ಭಾಗಭಾಗವಾಗಿ ಪ್ರಕಟಿಸಿದರು. ಎ.ಆರ್. ಕೃಷ್ಣ ಶಾಸ್ತ್ರಿಗಳು. ಪ್ರತಿಫಲ ರೂಪವಾಗಿ ಶಾಸ್ತ್ರಿಗಳು ರಾಜರತ್ನಂರವರಿಗೆ ನೂರ ಐವತ್ತು ರೂಪಾಯಿಗಳನ್ನು ಕೊಟ್ಟರು. ಮಾಸ್ತಿಯವರಿಂದ ಆರು ತಿಂಗಳು ಪಡೆದ (೧೫೦ ರೂ.) ಹಣವನ್ನು ರಾಜರತ್ನಂ ಅವರಿಗೆ ಹಿಂತಿರುಗಿ ಕೊಡಲು ಹೋದರು.

''ನಾನು ಕೊಟ್ಟದ್ದು ಸಂಬಳ ಅಲ್ಲ, ಮಾಸಾಶನ, ಈ ಹಣ ಅದರ ಮೇಲೆ ಸಂಪಾದಿಸಿದ್ದು ಎಂದು ಇಟ್ಟುಕೊಳ್ಳಿ. ಈ ಕೆಲಸವನ್ನು ಇನ್ನಷ್ಟು ಮಾಡಿ. ನಾನು ನಿಮಗೆ ಇಪ್ಪತ್ತೈದು ತಿಂಗಳು ತಿಂಗಳೂ ಕೊಡುತ್ತೇನೆ ಅಂದರು. ಮಾಸ್ತಿ. ರಾಜರತ್ನಂ ರವರಾದರೋ,

''ಕೃಷ್ಣ ಶಾಸ್ತ್ರಿಗಳು ಕೊಟ್ಟ ಕಾಸು ಕೈಯಲ್ಲಿದೆ, ಜೀವನ ನಡೆಯುತ್ತಿದೆ. ಕಾಸು ಬೇಕಾದಾಗ ಬಂದು ಕೇಳುತ್ತೇನೆ'' ಅಂದರು ! ಅನಂತರ ರಾಜರತ್ನಂ ಪಾಲಿಭಾಷೆ ಕಲಿತು, ಬೌದ್ಧ, ಜೈನ, ಸಾಹಿತ್ಯದಲ್ಲಿ ಪ್ರವೀಣರಾದರು. ಕನ್ನಡ ಸಾಹಿತ್ಯಕ್ಕೆ ಮಹತ್ತಾದ ಸೇವೆ ಸಲ್ಲಿಸುತ್ತಿದ್ದಾರೆ.

''ಇವರ ಮನಸ್ಸನ್ನು ಈ ಕೆಲಸದತ್ತ ಮೊದಲು ತಿರುಗಿಸಿದ ಭಾಗ್ಯ ನನ್ನದು''. ಇದು ಮಾಸ್ತಿಯವರ ಹೇಳಿಕೆ.

ಮಾಸ್ತಿಯವರು 'ಜನರಲ್ ಸೆಕ್ರಟರಿ' ಆದರು. ಕಾಲೇಜೊಂದರಲ್ಲಿ ಕನ್ನಡ ಪಂಡಿತರ ಸ್ಥಾನ ತೆರವಾಗಲು ರಾಜರತ್ನಂರವರು ಆ ಸ್ಥಾನವನ್ನ ಪೇಕ್ಷಿಸಿದರು. ಆ ಸ್ಥಾನದ ಸಂಬಳ ನಲವತ್ತು ರೂಪಾಯಿಗಳು. ಹಣಕಾಸಿನ ಶಾಖೆಯವರು ಎಂ.ಎ. ಮಾಡಿದವರಿಗೆ ''ನಲವತ್ತು ರೂ.ಗಳನ್ನು ಕೊಡುವುದು ಸರಿಯಲ್ಲ'' ಅಂದರು ಮಾಸ್ತಿಯವರು.

''ರಾಜರತ್ನಂರವರನ್ನು ನಾನು ಸ್ವತಃ ಬಲ್ಲೆ. ಅವರು ಮೇಧಾವಿಗಳು. ಅಗ್ರ ಪಂಕ್ತಿಯ ಕವಿ, ಅಗ್ರ ಪಂಕ್ತಿಯ ಲೇಖಕರು. ಆದರೂ ಈ ಕೆಲಸಕ್ಕೆ ಬರಬೇಕಾಗಿರುವುದು ದುರ್ದೈವ. ಅವರ ಯೋಗ್ಯತೆಗೆ ಅರವತ್ತು ರೂಪಾಯಿ ಸಂಬಳ ಬಹಳ ಕಡಿಮೆ. ಯೂನಿವರ್ಸಿಟಿ ಸೂಚಿಸಿರುವ ಈ ಸಂಬಳವನ್ನು ಕೊಡಬಹುದು.''

ಎಂದು ಬರೆದರು. ಸರಕಾರ ಒಪ್ಪಿತು.

ಕೃಪೆ : ಶ್ರೀನಿವಾಸ

# ಮುತ್ತಣ್ಣಾಗೆ ಮುತ್ತು

✍ ವಿಜಯವಲ್ಲಿ

''ಮುತ್ತಣ್ಣ'' ಈ ಮುದ್ದಾದ ಹೆಸರನ್ನು ನಮ್ಮ ತಂದೆಯವರಿಗೆ ನಾಮಕರಣ ಮಾಡಿದವಳು ನಮ್ಮಕ್ಕ, ಇಂದಿರ. ಅವಳೇ ನಮಗೆಲ್ಲ ಹಿರಿಯಳು: ನಾವಾರುಜನ ಅಕ್ಕ ತಂಗಿಯರು.

ಈಗ ಹಾಗೆ ನೆನೆಸಿಕೊಂಡರೆ ನಮ್ಮ ಮನೆ, ನಮ್ಮ ಚಿಕ್ಕಂದಿನಲ್ಲಿ ಹೇಗೆ ಜನರಿಂದ ತುಂಬಿತುಳುಕುತ್ತಿತ್ತು ! ಅಷ್ಟು ಮಂದಿಯನ್ನೂ, ಜೊತೆಗೆ ಆಗಾಗ್ಗೆ ಬೆಂಗಳೂರಿಗೆ ಬರುವ, ನಮ್ಮಲ್ಲೇ ನಾಲ್ಕಾರು ದಿನ ತಂಗುವ, ಇನ್ನಷ್ಟು ಮಂದಿಯನ್ನು ನಮ್ಮ ಮನೆ ಹೇಗೆ ಸುಧಾರಿಸಿತು? ಎಂದು ಆಶ್ಚರ್ಯವಾಗುತ್ತದೆ. ಆಗ ನಮ್ಮಜ್ಜಿ ಮನೆಯ ಯಜಮಾನಿ. ನಮ್ಮ ತಾಯಿಯವರಿಗೆ ಎಲ್ಲವನ್ನು ಕಲಿಸಿದವರೇ ಆಕೆ. ಆಗಾಗ್ಗೆ ಅಜ್ಜಿ ಹೇಳುವರು, ''ನಿಮ್ಮಮ್ಮ ಹದಿನಾಲ್ಕು ವರ್ಷ ವಯಸ್ಸಿನ ಹುಡುಗಿ ಈ ಮನೆಗೆ ಬಂದಾಗ, ಏನೂ ಅರಿಯದ ಹುಡುಗಿ ಪಾಪ; ತಾಯಿಲ್ಲದ ಮಗು. ನಾನೂ ಹೆಣ್ಣು ಮಕ್ಕಳನ್ನು ಹಡೆಯುವ ಭಾಗ್ಯ ಪಡೆದು ಬರಲಿಲ್ಲ, ಹಾಗೆಂದೇ ನಿಮ್ಮಮ್ಮನಿಗೆ ಮನೆಯ ಎಲ್ಲ ಆಡಳಿತವನ್ನು ಹೇಗೆ ಸುಧಾರಿಸಬೇಕು. ಬಂದಿರುವುದು ನಾಳೆಗಿರಲಿ ಎಂದು ಹೇಗೆ ಒಪ್ಪ ಓರಣ ಮಾಡಬೇಕು, ಎಂದೆಲ್ಲ ನಿಧಾನವಾಗಿ ಕಲಿಸಿದೆ. ಅವಳೂ ಬಲು ಜಾಣೆ; ಬಲು ತಾಳ್ಮೆ. ಎಲ್ಲವನ್ನು ಚಾಚೂ ತಪ್ಪದೆ ಕಲಿತಳು. ಈಗ ನನ್ನದೇನು ಇನ್ನು? ಅವಳೇ ಎಲ್ಲವನ್ನೂ ಸುಧಾರಿಸಬಲ್ಲಳು'' - ಎಂದು.

ಇದು ನಾನು ನಮ್ಮಕ್ಕ ಆರೇಳು ವರ್ಷ ವಯಸ್ಸಿನ ಮಕ್ಕಳಾಗಿದ್ದಾಗ ಹೇಳುತ್ತಿದ್ದ ಮಾತು. ಇನ್ನು ಸ್ವಲ್ಪ ದಿನಗಾದಮೇಲೆ ಅಮ್ಮನೇ ಎಲ್ಲವನ್ನೂ ನಿರ್ವಹಿಸುತ್ತಿದ್ದರು. ಅಜ್ಜಿ ''ಹೀಗೆ ಮಾಡೋಣವೆ, ಪಂಕಜ?'' ಎಂದು ತಮ್ಮ ಸೊಸೆಯನ್ನು ಕೇಳುತ್ತಿದ್ದರು; ಈ ಎಲ್ಲ ಕಾಲದಲ್ಲಿಯೂ ಇಷ್ಟು ದೊಡ್ಡ ಮನೆಯ, ಹೊಣೆಯ ಭಾರ ವಹಿಸಿದವರು ನಮ್ಮ ತಂದೆ - ಮುತ್ತಣ್ಣ, ಮುತ್ತಣ್ಣ ನಮಗೆ ಮಾತ್ರ ಮುತ್ತಣ್ಣ ಅಲ್ಲ, ಊರೂರಿಗೇ ಅವರು ಮುತ್ತಣ್ಣ ಹಾಗೂ ಶೀನಣ್ಣ. ನಮ್ಮ ತಾಯಿ ಮನ್ನಿ.

ದೊಡ್ಡಮನೆ ಎಂದು ಏಕೆ ಹೇಳಿದೆನೆಂದರೆ, ನಮ್ಮದು ''ಪೆರಿಯಾತ್ತ್'' ಎಂದರೆ ''ಹಿರಿಮನೆ'' ಎಂದು ಪೂರ್ವಿಕರ ಕಾಲದಿಂದಲೂ ಬಂದ ಹೆಸರದು. ನನಗೆ ಜ್ಞಾಪಕವಿದ್ದ ದಿನದಿಂದ ಮನೆಯಲ್ಲಿ ನಮ್ಮ ತಾಯಿ-ತಂದೆ, ಅಜ್ಜಿ, ಇಬ್ಬರು ಚಿಕ್ಕಪ್ಪಂದಿರು, ಮೂವರೋ ನಾಲ್ವರೋ ಓದುವ ಹುಡುಗರು ಇಷ್ಟು ನಮ್ಮ ಸಂಸಾರ ಯಾರದಾದರೂ ಸಂಸಾರ. ಇದಕ್ಕಿಂತ ಚಿಕ್ಕದಾಗಿರುತ್ತದೆ ಎನ್ನುವುದು ನಮಗೆ ಗೊತ್ತೇ ಇಲ್ಲ. ನಮ್ಮ ತಾತ - ಎಂದರೆ ನಮ್ಮ ತಾಯಿಯವರ ತಂದೆ - ಅವರ ಮನೆಯಲ್ಲೂ ಮನೆತುಂಬ ಜನ.

ಮುತ್ತಣ್ಣ ಬಹಳ ಆದರ್ಶವಾದಿ. ಯಾರಲ್ಲೂ ತಪ್ಪು ಸುಳ್ಳು ಮುಂತಾದ ದುರ್ಗುಣಗಳನ್ನು ಅವರು ಸಹಿಸರು. ತಮ್ಮ ಮಕ್ಕಳಲ್ಲಂತೂ ತೀರ ಸಹಿಸರು. ಅದೇ ವೇಳೆಗೆ ದೇವರ ಸ್ತೋತ್ರ. ಇದೇ ವೇಳೆಗೆ ಪಾರಾಯಣ ಮುಗಿಸಿ, ಅಷ್ಟೇ ವೇಳೆಗೆ ಊಟಕ್ಕೆ ಕುಳಿತು ಕಚೇರಿಗೆ ತೆರಳುವರು ಮುತ್ತಣ್ಣ. ಅವರಿಗಿಂತ ಮುಂಚೆ ಕಾಲೇಜು ಸ್ಕೂಲುಗಳಿಗೆ ಹೋಗುವವರ ಊಟವೆಲ್ಲ ಮುಗಿದಿರುತ್ತಿತ್ತು, ಮನೆಯಲ್ಲಿ ನಮ್ಮ ತಾಯಿ, ನಮ್ಮಜ್ಜಿ ಇಬ್ಬರೂ ಬಹಳ ಮಡಿಯಿಂದ ಅಷ್ಟೇ ಗಡಿಬಿಡಿಯಿಂದ ಅಡಿಗೆ ಮನೆಯಲ್ಲಿ ಈ ಎಲ್ಲ ಪೂರೈಕೆಗೆ ತಯಾರು ನಡೆಸಿರುವರು. ಮನೆಯಲ್ಲಿ ಆಳು ಕಾಳು ಎಲ್ಲ ಅನುಕೂಲ ಉಂಟು. ಹೆಣ್ಣು ಮಕ್ಕಳು ತಮ್ಮ ತಾಯಿಗೆ ಸಹಾಯಮಾಡುತ್ತಾರ, ಮನೆಗೆಲಸದಲ್ಲಿ ಎಂದು ನಮಗೆ ಗೊತ್ತೇ ಇಲ್ಲ.

ನಾವು ದೊಡ್ಡವರಾಗುತ್ತ, ಸ್ಕೂಲು, ಪಾಠ, ಸಂಗೀತ, ಇವೆಲ್ಲಾ ನಮ್ಮ ದೈನಂದಿನ ಕೆಲಸಕಾರ್ಯಗಳಾದುವು. ಆಟಕ್ಕಂತೂ, ನಮ್ಮನ್ನು ಹಿಡಿದುಹಾಕುವವರೇ ಇಲ್ಲ; ಅಷ್ಟು ಆಟಪಾಟ ನಮ್ಮದು. ಸದಾ ಸಂಪಿಗೆಮರದ ಮೇಲೆಯೇ ಇರುತ್ತಿದ್ದೆವು. 'ನಮ್ಮ ತಂದೆ ಹೀಗಂದರು, ನಮ್ಮ ತಂದೆ ಹಾಗಂದರು ಎಂದೆಲ್ಲ ನಮ್ಮ ಗೆಳತಿಯರು ಶಾಲೆಯಲ್ಲಿ ಹೇಳಿದಾಗ, ನಮ್ಮ ತಂದೆಯವರೇಕೆ ನಮ್ಮನ್ನು ಹಾಗೆಲ್ಲ ಮಾತಾಡಿಸುವುದಿಲ್ಲ' ಎಂದು ನಾವು ನೊಂದದ್ದುಂಟು. ನಮಗೆ ಮಕ್ಕಳಾದ ಮೇಲೆಯೆ ನಮಗೆ ತಿಳಿದದ್ದು, ಮುತ್ತಣ್ಣಾಗೆ ತಮ್ಮ ಮಕ್ಕಳ ಮೇಲೆ ಎಷ್ಟು ಪ್ರೀತಿ ಎಂದು. ಮನೆಯ ಎಲ್ಲ ಕೆಲಸಗಳನ್ನು ನಮ್ಮ ತಾಯಿಯವರೇ ತೂಗಿಸಿಕೊಂಡು ಹೋಗುವರು. ಅದಕ್ಕೆಂದು ಅವರು ಏನು ಮಾತಾಡಿಕೊಳ್ಳುವರೋ, ಎಷ್ಟು ವಾಗ್ವಾದ ಮಾಡುವರೋ, ಇಲ್ಲವೆ ಎಲ್ಲವೂ ಸುಸೂತ್ರವಾಗಿ ನಡೆಯುತ್ತಿತ್ತೋ, ನಮಗೆ ಗೊತ್ತಿಲ್ಲ.

ಕನ್ನಡ, ಕತೆಗೆ - ಪದ್ಯ - ಬರಹ ವಿಮರ್ಶೆ - ನಾಟಕ, ಎಂದು ಮಾತಾಡಲು ಯಾರೇ ಬರಲಿ, ನಮ್ಮ ಮನೆಯಲ್ಲಿ ಅವರಿಗೆ ಸುಸ್ವಾಗತ. ಹಾಗೆಂದು ಬೇರೆ ಭಾಷೆಯ ಜನರನ್ನು ಕಂಡರೆ ಹಗೆಯೆಂದಲ್ಲ. ಮೇಡಮ್ ಸೋಫಿಯಾ ವಾಡಿಯಾ ಹಾಗೂ ಶ್ರೀ ವಾಡಿಯಾ, ಇವರು ಬೆಂಗಳೂರಲ್ಲಿ 'ಪಿ.ಇ.ಎನ್. ಸಭೆ ಕರೆದಾಗಲೆಲ್ಲಾ, ನಮ್ಮ ಮನೆಯಲ್ಲೂ ಒಂದು ಪಾರ್ಟಿ - ಉಪಹಾರ, ವಿಚಾರ ವಿನಿಮಯ. ಮುತ್ತಣ್ಣ ಹೇಳುವರು ''ಹೆಚ್ಚೇನೂ ಬೇಡ, ಒಂದು ಸಿಹಿ, ಒಂದು ಖಾರ, ಬಾಳೆಹಣ್ಣು ಬಿಸ್ಕತ್ತು, ಮತ್ತೆ ಕಾಫಿ'' ಇಷ್ಟಾದರೆ ಸಾಕು ಎಂದು. ಈ ಸಿಹಿ ಮುತ್ತಣ್ಣಾಗೆ ಬಹಳ ಇಷ್ಟವಾದ ಸಕ್ಕರೆಪೊಂಗಲು, ಅಥವಾ ಮತ್ತೇನೆ ಆಗಿರಬಹುದು - ಜಹಾಂಗೀರ ಜಿಲೇಬಿ ಮುಂತಾಗಿ, ಬಂದವರನ್ನೆಲ್ಲ ಆದರಿಸಿ, ತಿನ್ನಿಸುವುದಷ್ಟೇ ಮುತ್ತಣ್ಣಾ ಕೆಲಸ. ಜೊತೆಯಲ್ಲಿ ತಿನ್ನೋಣವೆಂದು ಚೂರು ತಿಂದರೂ, ಅವರಿಗೆ ತಲೆನೋವು ಸಿದ್ಧ.

ಹಾಗೆಯೇ ತಾವೊಂದು ನಾಟಕ ಬರೆದರೆ, ಅಲ್ಲದೆ ತಮ್ಮ ಸ್ನೇಹಿತರ್‍ಯಾರಾದರೂ ಹತ್ತು ಜನಕ್ಕೆ ಓದಿ ಹೇಳಬೇಕೆಂದು ಇಷ್ಟಪಟ್ಟರೆ, ನಮ್ಮ ಮನೆಯಲ್ಲಿ ಅದೊಂದು ಸಣ್ಣ ಸಭೆ, ಉಪಹಾರ ಉಂಟು. ಹೀಗೆ ಕನ್ನಡ ಬರೆಯುವವರು, ಓದುವವರು, ಉತ್ತೇಜನ ಪಡೆಯುವವರು, ಎಲ್ಲರಿಗೂ ನಮ್ಮ ಮನೆಯಲ್ಲಿ ಸುಸ್ವಾಗತ. ನಮ್ಮ ತಾಯಿಯವರು ಈ ಯಾವ ಮಾತಿಗೂ - ಅಷ್ಟೇ ಏಕೆ, ಮಾಸ್ತಿಯವರ ಯಾವ ಮಾತಿಗೂ - ಇಲ್ಲ ಎಂದದ್ದು ನಾವು ಕಾಣೆವು.

ನಮ್ಮ ಮನೆಯಲ್ಲಿ ಊಟವದ್ದೇ ಒಂದು ಮೋಜು. ಊಟದ ಮನೆಯಲ್ಲಿ ಒಂದು ಸಾಲಲ್ಲಿ, ನಾವೆಲ್ಲ ಹೆಣ್ಣು ಮಕ್ಕಳು - ಎದುರು ಸಾಲಿನಲ್ಲಿ ನಮ್ಮ ಚಿಕ್ಕಪ್ಪಂದಿರು, ಓದುವ ಹುಡುಗರು ಎಲ್ಲ ಕೂಡುವರು. ಮಧ್ಯೆ ಮುತ್ತಣ್ಣ. ಪಕ್ಕದಲ್ಲಿ ಯಾರಾದರೂ ಗೆಳೆಯರು ಯಾವಾಗಲೂ ಉಂಟು. ಇವರಿಗಿದಿರಾಗಿ ದೇವರ ಮಂಟಪ. ನಾವ್ಯಾರಾದರೂ ನಮ್ಮ ತಾತನ ಮನೆಗೆ ಹೋದಾಗಲೋ, ಇಲ್ಲ ನಮ್ಮ ಚಿಕ್ಕಮ್ಮನ ಮಕ್ಕಳು ಯಾರಾದರೂ ನಮ್ಮಲ್ಲಿ ಬಂದಾಗಲೋ, ನಮ್ಮ ಸಾಲಿನಲ್ಲೇ ಅಷ್ಟೇಮಣೆ ಅಷ್ಟೇ ತಟ್ಟೆ ಇದ್ದರೂ ಇರಬಹುದು, ಕಡಿಮೆ ಹೆಚ್ಚು ಆಗಬಹುದು, ಇದು ಮುತ್ತಣ್ಣಾಗೆ ತಿಳಿಯುವುದೇ ಇಲ್ಲ ಎಂದು ನಮ್ಮೆಲ್ಲರ ಎಣಿಕೆ.

ಸದ್ದಿಲ್ಲದೆ ಊಟ. ಮಾತಾಡಿದರೆ ಅದು ನಮ್ಮ ತಂದೆ ಅವರ ಸ್ನೇಹಿತರ ನಡುವೆಯೇ. ಹೀಗೆ ಕುಳಿತು ಊಟ ಮಾಡುವಾಗ, ಯಾರಿಗೇ ಆಗಲಿ ಒಂದು ಹೋಳು ಹೆಚ್ಚು, ಒಂದು ಮಿಳ್ಳೆ ತುಪ್ಪ ಕಡಿಮೆ ಆಗಬಾರದು. ಇವರಾರಿಗೂ ಬಡಿಸದೆ ಇದ್ದ ಪಲ್ಯವನ್ನೋ ಫಲಹಾರವನ್ನೋ ಮುತ್ತಣ್ಣಾವರಿಗೆ ಬಡಿಸಲಾಗದು. ಅಷ್ಟು ಕಟ್ಟುನಿಟ್ಟು.

ಈ ನಿಯಮದಲ್ಲಿ, ಹತ್ತು ಜನರ ಮಧ್ಯೆ ಹನ್ನೊಂದನೆಯವರಾಗಿ ಬೆಳೆದ ಮಕ್ಕಳು ನಾವು. ನಾವು, ಬೇರೆಬೇರೆ ಮನೆಗಳ ಜನರನ್ನು ನೋಡಿದಾಗ, ಅಲ್ಲಿ ಅವರು ಮಕ್ಕಳು - ಸೊಸೆಯರಲ್ಲಿ ಭೇದಭಾವ ಮಾಡಿದಾಗ, ಬಚ್ಚಿಟ್ಟೋ ಮುಚ್ಚಿಟ್ಟೋ ತಿಂದಾಗ, ನಮಗೆ ಅಚ್ಚರಿಯೇ ಆಗುವುದು. ತಮ್ಮ ಮಕ್ಕಳನ್ನು ಹೊಕ್ಕ ಮನೆಗಳಿಗೆ ಕಳಿಸಿಕೊಡುವಾಗ ಮುತ್ತಣ್ಣ ಹೇಳುವ ಬುದ್ಧಿಮಾತು ಇದು: ಜಾಣ ''ಯಾಗಿರಮ್ಮ, ನಿನ್ನನ್ನು ಜನ ಮೂಗಿಯೆಂದರೂ ತಪ್ಪಿಲ್ಲ, ಅತ್ತೆಯ ಮನೆಯ ಜನರೊಡನೆ ವಾದಕ್ಕೆ ನಿಲ್ಲಬೇಡ.''

ಮುತ್ತಣ್ಣ ನಮ್ಮನ್ನು 'ಲೇ, ಬಾರೇ ಹೋಗೆ' ಎಂಬ ರೀತಿಯಲ್ಲಿ ಮಾತಾಡಿಸಿದವರೇ ಅಲ್ಲ. ಅವರ ಬಾಯಿಂದ ''ಡೀ'' ಎಂದು ಬಂದಿತೆಂದರೆ ನಾವೇನೋ ಮಾಡಬಾರದ್ದು ಮಾಡಿದ್ದೇವೆ ಎಂದರ್ಥ. ಹಾಗವರು 'ಡೀ'' ಎಂದು ಗದರಿದರೆ ನಮಗೆ ಬಹಳ ಅಪಮಾನ. ಅಂದೆಲ್ಲ ಮುನಿಸಿಕೊಂಡೇ ಇರುತ್ತಿದ್ದೆವು. ನಮ್ಮ ಅರ್ಭಟ, ಜಗಳ ಕಚ್ಚಾಟ - ಮಕ್ಕಳೆಂದ ಮೇಲೆ ಇದ್ದೇ ಇರುತ್ತಲ್ಲ - ಇವೆಲ್ಲಾ ಮುತ್ತಣ್ಣ ಮನೆಯಲ್ಲಿಲ್ಲದಾಗಲೇ. ನಾವ್ಯಾವ್ಯಾವ ತರಗತಿ ಓದಿದೆವು. ಹೇಗ್ಹೇಗೆ ಓದಿ ಮುಗಿಸಿದೆವು ಇವೆಲ್ಲ ಮುತ್ತಣ್ಣಗೆ ಮುಟ್ಟುವುದು ನಮ್ಮ ತಾಯಿಯವರ ಮೂಲಕವೇ. ಅವರಿಂದಲೇ ನೇರವಾಗಿ ಬಹುಮಾನ ಪಡೆದವಳೆಂದರೆ ನನ್ನ ಕೊನೆಯ ತಂಗಿ ಶಾಂತಾ. ಅವಳಿಗೆ ಮುದ್ದು ಹೆಚ್ಚಾಯಿತೋ, ಲಕ್ಷ್ಯ ಕಡಿಮೆ ಆಯಿತೋ, ಅಂತೂ ಅವಳು ಬಡಪೆಟ್ಟಿಗೆ ಬಾಲಬೋಧೆ ಮುಗಿಸಲಿಲ್ಲ. ''ನೀನು ಬಾಲಬೋಧೆ ಮುಗಿಸಿದರೆ ನಿನಗೆ ಒಂದು ಪುಟ್ಟ ಬೆಳ್ಳಿ ಲೋಟ ಹಾಲು ಕುಡಿಯಲು'' ಎಂದರು ಮುತ್ತಣ್ಣ. ತಗೊಳ್ಳಿ! ಹತ್ತು ಹದಿನೈದು ದಿನಗಳಲ್ಲಿ ಮುಗಿಸಿಯೇ ಬಿಟ್ಟಳು: ಬೆಳ್ಳಿ ಲೋಟ ಗಿಟ್ಟಿಸಿಯೇ ಬಿಟ್ಟಳು.

ತಮ್ಮ ಮಕ್ಕಳು ಒಡವೆ ತೊಡವೆಗಳನ್ನು ಹಾಕಿಕೊಂಡು ಮಿರು ಮಿರುಗುವುದು ಎಂದರೆ, ಮುತ್ತಣ್ಣಾಗಾಗದು. ಲೋಯರ್ ಸೆಕೆಂಡರಿ ಪರೀಕ್ಷೆಗೆ ಓದುವಷ್ಟು ದೊಡ್ಡವರಾದಾಗಲೂ, ಎಂದರೆ ೮-೯ ವರ್ಷದ ಹುಡುಗಿಯರಾದಾಗಲೂ ನಮಗೆ ಒಡವೆಗಳೇ ಇಲ್ಲ. ಶಾಲೆಯಲ್ಲಿ ನಮ್ಮ ಗೆಳತಿಯರೆಲ್ಲ ನಾಲ್ಕು ನಾಲ್ಕು ಜೋಡಿ ಚಿನ್ನದ ಬಳೆಗಳು, ವಜ್ರದ ಓಲೆಗಳು ಎರಡೆಳೆ ನಾಕೆಳೆ ಸರಗಳು, ಇವನ್ನೆಲ್ಲಾ ಹಾಕಿಕೊಂಡು ಬರುವರು. 'ನಿಮ್ಮ ತಂದೆ ಅಷ್ಟು ದೊಡ್ಡ ಕೆಲಸದಲ್ಲಿದ್ದಾರೆ. ನಿವ್ಯಾಕೆ ಏನೂ ಮಾಡಿಸಿಕೊಂಡಿಲ್ಲ' ಎಂದು ಕೇಳುವರು. ನಾವು ಅವರಿಗೆ ಅದೆಲ್ಲ ಇಷ್ಟವಿಲ್ಲ ಎನ್ನುವೆವು. 'ಒಡವೆ ಬೇಕೇನಮ್ಮ' - ಎಂದು ಮುತ್ತಣ್ಣ ನಮ್ಮನ್ನು ಕೇಳಿದಾಗ ಕೂಡ ಬೇಡ ಬೇಡ ಎನ್ನುವೆವು ಬಿಂಕದಿಂದ. ಮದುವೆ ನಿಶ್ಚಯವಾದಾಗಲೇ ಒಡವೆಗಳುನಮ್ಮದೆಂದೂ ನಮಗೆ ಬಂದದ್ದು.

ನಮ್ಮ ಮನೆಯ ಹಿರಿಯ ಮೊಮ್ಮಗ ರಾಮಭದ್ರ. ಈ ಮಗು ನಂದಗೋಕುಲದ ಗೋಪಿಯರ ಮಧ್ಯೆ ಬೆಳೆದ ಕೃಷ್ಣನಂತೆ ನಮ್ಮೆಲ್ಲರ ಮಡಿಲಲ್ಲಿ ಬೆಳೆದವನು. ಮುಂದಿನ ವರ್ಷದಲ್ಲಿ ಮೇ, ಜೂನ್, ಜುಲೈ ತಿಂಗಳಲ್ಲಿ ಇನ್ನು ಮೂರು ಮೊಮ್ಮಕ್ಕಳು ಹುಟ್ಟಿದರು. ಇವರಲ್ಲಿ ಒಂದು ಮಗುವಂತೂ ಬಹಳ ಸೂಕ್ಷ್ಮ. ಕಾಡ್‌ಲಿವರ್ ಎಣ್ಣೆ ಮೈಗೆಲ್ಲ ಸವರಿ, ಬಿಸಿಲಲ್ಲಿ ಮಲಗಿಸಿ, ಸ್ನಾನ ಮಾಡಿಸಬೇಕು. ಮಕ್ಕಳಿಗೆಂದು ನೋಡಿಕೊಳ್ಳಲು ಆಯಾ ಒಬ್ಬಾಕೆಯನ್ನು ನೇಮಿಸಿಕೊಂಡಿದ್ದರು. ಹೀಗೆ ಮನೆಯ ಅನುಕೂಲಕ್ಕೆ, ಬಂದು-ಹೋಗುವ ಜನರ ಮನ್ನಣೆಗೆ ಅಮ್ಮ ಏನೇ ಮಾಡಲಿ, ಅವಕ್ಕೆಲ್ಲ ಮುತ್ತಣ್ಣ ಅಸ್ತು ಎನ್ನುವರು.

ಮುತ್ತಣ್ಣನ ಮೊಮ್ಮಕ್ಕಳೆಲ್ಲಾ ಓದು ಬರಹ ಕಲಿತದ್ದು ಇಲ್ಲೇ. ಒಬ್ಬಿಬ್ಬರು ದೆಹಲಿ ಅಲಹಾಬಾದ್, ಅಂತ ದೂರ ಇದ್ದವರಷ್ಟೆ ತಮ್ಮ ಕ್ಕೆ ಮಕ್ಕಳನ್ನು ಜೊತೆಗಿಟ್ಟು ಕೊಂಡಿದ್ದರು. ಈ ಮಕ್ಕಳು ತಮ್ಮ ತಂದೆ - ತಾಯಿ ಊರೂರು ಸುತ್ತುತ್ತ ರಜದಲ್ಲಿ ಬಂದು ಹೋಗುತ್ತ ಇಲ್ಲಿ ಗವೀಪುರದ ನಮ್ಮ ಮನೆಯಲ್ಲಿ - ತಮ್ಮನ್ನು ಬಿಟ್ಟಿದ್ದೆವೆಂದು ಈ ಮನೆಗೆ H.Q. ಅಳ ಅಂತ ಹೆಸರಿಟ್ಟರು. ಹಾಗೆಯೇ ಇದು ಮುಖ್ಯ ಕಚೇರಿಯೂ ಹೌದು. ನಾವೆಲ್ಲ ಎಲ್ಲೆಂದಲೂ ನಮ್ಮ ತಾಯಿಯವರಿಗೆ ಕ್ಷೇಮ ಸಮಾಚಾರಕ್ಕೆ ಕಾಗದ ಬರೆದರೆ ಸಾಕು. ಆ ಸುದ್ದಿ ಮಿಕ್ಕೆಲ್ಲ ಅಕ್ಕ ತಂಗಿಯರಿಗೆ ಮತ್ತೆ ಮುತ್ತಣ್ಣಾಗೆ ಮುಟ್ಟುವುದು.

ಮುತ್ತಣ್ಣ ತಮ್ಮ ಮಕ್ಕಳೊಂದಿಗೆ ಪತ್ರ ವ್ಯವಹಾರ ಮಾಡಿದವರೇ ಅಲ್ಲ. ಹಾಗೇನಾದರೂ ಬರೆದರೆನ್ನಿ, ಅದೂ ಮೂರೇ ಸಾಲು :

ಸೌ. ವಿಜಯಮ್ಮನಿಗೆ ಆಶೀರ್ವಾದ.

ಗುರುತ ಹಾಕಿರುವ ಕಡೆ ರುಜುಮಾಡಿ ಕಳಿಸು. ಇತ್ಯಾದಿ.

- ಮುತ್ತಣ್ಣ.

ಇದನ್ನು ಕಳಿಸಿಕೊಡುವ ಕವರಿನಲ್ಲಿ ಒಂದು ವಿಳಾಸ ಬರೆದ ಕವರ್ರೂ ಇರುತ್ತದೆ. ಯಾವಾಗಲೂ, ಇಂಟು ಹಾಕಿದ ಕಡೆ ರುಜುಮಾಡಿ, ಅದೇ ಕವರಿನಲ್ಲಿಟ್ಟು ಕಳಿಸುವುದಷ್ಟೇ ನಮ್ಮ ಕೆಲಸ.

ನಾವಾರು ಮಂದಿಯೂ ಹೆಣ್ಣುಮಕ್ಕಳೇ ಆದೆವಲ್ಲ ಎಂದು, ಅವರೆಂದೂ ನೊಂದದ್ದಿಲ್ಲ. ನಮ್ಮಿಂದಾಗಿ ಎಷ್ಟೋ ಕಷ್ಟಗಳನ್ನು ಅನುಭವಿಸಿದರು; ಎಷ್ಟೋ ಅವಮಾನಗಳನ್ನು ಸಹಿಸಿಕೊಂಡರು; ಕೆಟ್ಟಮಾತುಗಳನ್ನು ಕೇಳಿದರು. ಇದರಿಂದಾಗಿ ಅವರೆಂದೂ ನಮ್ಮ ಮೇಲೆ ಕುಪಿತರಾದವರಲ್ಲ; ಬೇಸರಿಸಿದವರಲ್ಲ. ದೇವರಂತಹವರು ಮುತ್ತಣ್ಣ. ಯಾರೇ ಆಗಲಿ, ಯಾವ ಕಾರಣದಿಂದಾಗಲಿ, ಆಡಬಾರದ್ದನ್ನು ಆಡಲಿ, ಮಾಡಬಾರದ್ದನ್ನು ಮಾಡಲಿ, ನೋಡಿಯೂ ನೋಡದಂತೆ ಇದ್ದುಬಿಡುವರು. ಬಹಳ ಕೆಟ್ಟೆನಿಸಿದಾಗ ''ಶ್ರೀನಿವಾಸ'' - ''ಶ್ರೀನಿವಾಸ'' ಎಂದುಕೊಳ್ಳುವರು.

ಎಲ್ಲವೂ ಭಗವಂತನ ಇಚ್ಛೆಯೆಂದೇ ಮುತ್ತಣ್ಣನ ನಂಬಿಕೆ. ಇಂದು ಹೀಗಿರಬೇಕೆಂದು ಅವನಾಜ್ಞೆ, ನಾಳೆ ಹೇಗಿರಬೇಕಾಗಬಹುದು? ನಾಡಿದ್ದು? ಮತ್ತೇನು ದಾರಿಯೋ ಎಲ್ಲ ಅವನು ಬಿಟ್ಟ ದಾರಿ ಎಂದು ನಂಬುವರು. ಆ ದಾರಿ ಇವರಿಗೆ ಒಳಿತು.

ಮುತ್ತಣ್ಣ ತಮ್ಮ ಮನೆಯಲ್ಲಿ ಅತಿಥಿ, ಅಭ್ಯಾಗತರನ್ನು ಸತ್ಕರಿಸುವುದು ಅದೊಂದು ಚೆನ್ನ. ಒಂದೆರಡು ಅಂತಹ ಪ್ರಸಂಗಗಳನ್ನು ಹೇಳಿದರೆ ಮಾತ್ರ ಆ ಸುಖವನ್ನು ಎಲ್ಲರೂ ಅನುಭವಿಸಲು ಸಾಧ್ಯ.

ಅದೊಬ್ಬರು ಅಜ್ಜ - ಹಣ್ಣು ಹಣ್ಣು ಮುದುಕರು.

ಕಣ್ಣು ಕಾಣದು; ಕಿವಿ ಕೇಳದು. ಅವರಿಗೆ ಅವರ ಮಗ - ಸೊಸೆ ಮಾಡಿದ ಅದರ ಸಾಕಾಯಿತೇನೋ, ಒಂದು ಕೋಲು, ಒಂದು ಪಂಚೆ ಸಹಿತ ನಮ್ಮ ಮನೆಗೆ ಬಂದರು. ಇಂತಹ ಮುದುಕರನ್ನು ಕಂಡರೆ ಮುತ್ತಣ್ಣಾಗೆ ತಮ್ಮ ಸೇವೆ ಪಡೆಯದೆಯೇ ದೈವಧಾನರಾದ, ಈಗಿದ್ದಿದ್ದರೆ ಹೀಗಿದ್ದಿರಬಹುದಾದ, ತಮ್ಮ ತೀರ್ಥರೂಪರನ್ನು ಕಂಡಂತೆಯೇ ಆಗುವುದು.

''ಮಾಸ್ತಿ ಮನೆ ಇದೇನೇ?''

''ಹೌದು''

ಇಷ್ಟೊಂದು - ನಾವು ಯಾವಾಗಲೂ ಇಂತಹ ಯಾರೇ ಬಂದರೂ, ಮುತ್ತಣ್ಣನವರ ವರೆಗೆ ಬಿಡದೆ, ನಾವೆ. ಒಂದೋ ಎರಡೋ ರೂಪಾಯಿಕೊಟ್ಟು ಕಳಿಸಿಬಿಡುವೆವು. ಮುತ್ತಣ್ಣ ಇದ್ದಾಗಲೇ ಬಂದವರ ಅದೃಷ್ಟ. ಅವರು ಐದೋ - ಹತ್ತೋ ರೂಪಾಯಿಗಳಿಸುವರು. ಈ ಅಜ್ಜ ಕೊಂಚಕ್ಕೆ ಕದಲಲಿಲ್ಲ. ಮಾತಾಡುತ್ತಿರುವಾಗಲೇ ಮುತ್ತಣ್ಣ ಮಹಡಿಯಿಳಿದು ಬಂದರು. ಇನ್ನು ತೀರಿತು. ನಮ್ಮ ಕಾರುಬಾರೆಲ್ಲ ಅಲ್ಲಿ ಮುಕ್ತಾಯ. ಅಜ್ಜ ಏನೇನೋ ಬಹಳ ಹೊತ್ತು ಮಾತಾಡಿದರು. ಈ ಎಲ್ಲ ಮಾತಿನ ಪ್ರತಿಫಲವೆಂದರೆ, ಕ್ಲಬ್ಬಿಗೆ ಹೋಗುವಾಗ ಮುತ್ತಣ್ಣ - ''ಈ ತಾತ ಇನ್ನು ನಾಲ್ಕಾರು ದಿನ ನಮ್ಮಲ್ಲೇ ಉಳಿಯುವರಂತೆ, ನೀವೆಲ್ಲ ಮಕ್ಕಳು ಅವರನ್ನು ಚೆನ್ನಾಗಿ ನೋಡಿಕೊಳ್ಳೀಮ್ಮ'' ಎಂದದ್ದು.

ಅಜ್ಜ ತೀರ ಅಸಹಾಯ ಸ್ಥಿತಿಯಲ್ಲಿದ್ದರು. ಒಂದು ಹೆಜ್ಜೆ ಇಡಬೇಕಾದರೂ ಸಹ ಯಾರಾದರೂ ಕೋಲು ಹಿಡಿದು ಕರೆದೊಯ್ಯಬೇಕು. ಸ್ನಾನ - ಪಾನಾದಿಗಳು - ಕೈಕಾಲು ತೊಳೆಯಲು ಎಂದು ದಿನದಲ್ಲಿ ಹತ್ತಾರು ಬಾರಿ ಓಡಾಡುವರು. ಅದು ಹಾಗಿರಲಿ ಎಂದರೆ ಅದೇ ತರಹ ರಾತ್ರಿಯಲ್ಲೂ ಏಳುವರು. ಒಮ್ಮೆ ಎರಡು ಬಾರಿ ಗಂಡು ಹುಡುಗರು ಎದ್ದು ಹೋಗುವರು. ಆಮೇಲೆ ಅವರಿಗೆಲ್ಲ ನಿದ್ದೆ. ಮಧ್ಯರಾತ್ರಿಯಲ್ಲಿ ಎದ್ದರೆ ನಮ್ಮ ಚಿಕ್ಕಮ್ಮ ಅವರನ್ನು ಗೇಟಿನಾಚೆ ಕರೆದೊಯ್ಯಬೇಕು; ಕಾಯಬೇಕು; ಪುನಃ ಕರೆತರಬೇಕು. ಒಂದಲ್ಲ ನಾಲ್ಕಲ್ಲ, ಹತ್ತು ದಿನ ಈ ತೆರನಾಗಿ ನಡೆಯಿತು. ನಮಗೋ ಹೆದರಿಕೆ. ತಪರಾಕಿಗೆ ನಾಲ್ಕು ಬಿಗಿದು ಮೈಮೇಲಿದ್ದ ಒಡವೆಗಳನ್ನು ಆ ರಾತ್ರಿಯಲ್ಲಿ ದೋಚಿದರೆ? ಯಾರಾದರೂ ಮನೆ ಒಳಗೆ ನುಗ್ಗಿ ಬಚ್ಚಿಟ್ಟುಕೊಂಡರೆ? ಏನು ಗತಿ? ಹೀಗೆ ಯೋಚಿಸಿ ನಮ್ಮಜ್ಜಿಯನ್ನು ಛೂ ಬಿಟ್ಟೆವು. ಮಾರನೆ ದಿನ ಅಜ್ಜ ಮರಳಿ ತಮ್ಮ ಮಗನಲ್ಲಿಗೆ ತೆರಳಿದರು.

ಈಗ ಹೇಳುವ ವಿಚಿತ್ರ ನಡೆದಾಗ, ನಾನಿರಲಿಲ್ಲ. H.Q.ದಲ್ಲಿ ಆದರೆ ನಡೆದುದು ಹೀಗೆ. ಅದೊಂದು ದಿನ ಬೆಳಿಗ್ಗೆ ಆರುವರೆ ಗಂಟೆ. H.Q. ಮುಂದೆ Taxiಯೊಂದು ಬಂದು ನಿಂತಿತು. ಅದರಿಂದ ಠಾಕುಠೀಕಾದ ಒಬ್ಬಾತ, ತಮ್ಮ ಮನೆಯಾಕೆ ಮಗುವಿನ ಸಹಿತ ಇಳಿದರು. ''ಮಾಸ್ತಿ ಶ್ರೀನಿವಾಸರ ಮನೆ ಇದೇನೇ'' ಎಂದರು. ಹೌದು ಎಂದಳು ನನ್ನ ತಂಗಿ. ಹಾಸಿಗೆ ಟ್ರಂಕು ಸಹಿತ ಒಳಗೆ ಬಂದರು. ಆಕೆ ಬಹಳ ಸೊಗಸುಗಾತಿ. ಯಾರದು ಟ್ಯಾಕ್ಸಿಯಲ್ಲಿ ಎಂದು ನೋಡಲು ಬಂದ ನಮ್ಮ ತಾಯಿಯವರಿಗೆ, ಈ ದಂಪತಿಗಳನ್ನು ಕಂಡು ಏನೋ ಅನುಮಾನ ಆದರೂ ತಮ್ಮ ಪತಿಗೆ ತಿಳಿದವರೆಷ್ಟೋ ಮಂದಿ ತಮಗೆ ತಿಳಿಯದು; ಮತ್ತೆ ಪರಿಚಯವೂ ಇಲ್ಲ. ಹಾಗೆಯೇ ಆದರದಿಂದ ಕರೆದು ಡ್ರಾಯಿಂಗ್ ರೂಂನಲ್ಲಿ ಕೂರಿಸಿದರು. ಹಾಸಿಗೆ ಟ್ರಂಕು ಇದ್ದದ್ದು ನೋಡಿ ಮುಂದಿನ ಕೊಠಡಿಯನ್ನು ಬಿಟ್ಟುಕೊಟ್ಟರು. ನಮ್ಮ ಹುಡುಗರೆಲ್ಲಾ ಕಾಲೇಜು, ಹೈಸ್ಕೂಲುಗಳಲ್ಲಿ ಓದುತ್ತಲಿದ್ದವರು. ಈ ಎಳೆಯ ಮಕ್ಕಳ ಮುಂದೆ ಅರ್ಧ ನಗ್ನತೆ ತೋರುವ, ತೀರ ತೆಳ್ಳನೆಯ ನೈಲಾನ್ - ಪೈಲಾನ್ ಉಟ್ಟ ಈ ಹೆಂಗಸು, ಕುಲುಕಿ ಬಳುಕುವಳಲ್ಲಾ ಎಂದು ನನ್ನ ತಂಗಿಗೆ ಸಂಕೋಚ. ಮುತ್ತಣ್ಣ ಎದ್ದು ಬರುವತನಕ ಎಲ್ಲರೂ ಸುಮ್ಮನೆಯೇ ಇದ್ದರು. ಮುಖ ತೊಳೆದನಂತರ ಕಾಫಿ ತಿಂಡಿಯೂ ಆಯಿತು. ಮತ್ತಣ್ಣ ಬಂದವರು. ನಮಸ್ಕಾರ - ನಮಸ್ಕಾರ ಆಯಿತು. ಏನು ಮಾತಾಡಿದರೋ ಗೊತ್ತಿಲ್ಲ. ಈ ದಂಪತಿಗಳು ಮೂರು - ನಾಲ್ಕು ದಿನ ನಮ್ಮಲ್ಲಿರುವವರು ಎಂದಾಯಿತಂತೆ. ಮನೆಯಲ್ಲಾ ನೋಡುತ್ತೇವೆ ಎಂದರಂತೆ ನನ್ನ ತಂಗಿ ಜೊತೆಯಲ್ಲಿ. ಮಹಡಿ ಹತ್ತಿ ಎಲ್ಲಾ ಕಡೆ ನೋಡಿದರು. ನಮ್ಮ ತಂದೆಯವರ ಕೊಠಡಿಗೂ ಬಂದರು. ಆತ ಮಗುವನ್ನೆತ್ತಿಕೊಂಡು ಶಥಪಥ ಹಾಕುತ್ತಿದ್ದರು. ಆಕೆ ರೂಮಿನಲ್ಲಿದ್ದ ಈಗಲೂ ಅವೆಲ್ಲಾ ಅಲ್ಲಲ್ಲೆ ಇವೆ - ಕೆತ್ತನೆ ಕೆಲಸ Photographಗಳು ಎಲ್ಲವನ್ನೂ ನೋಡುತ್ತ ಇದ್ದರು. ಒಮ್ಮೆ ನನ್ನ ತಂಗಿ ಏಕೋ ಸ್ವಲ್ಪ ಹೊರಗೆ ಬಂದಾಗ, ಸದ್ದಿಲ್ಲದೆ ಮೇಜಿನ ಮೇಲಿದ್ದ ಬೀರುವಿನ ಬೀಗದ ಕೈ ತೆಗೆದು, ಬೀರುವನ್ನು ತೆಗೆಯಲು ಪ್ರಯತ್ನಿಸಿದ್ದಾರೆ. ಸದ್ದು ಕೇಳಿ ನನ್ನ ತಂಗಿ ಅರ್ಧದಲ್ಲೇ ಒಳಗೆ ಬಂದು - ಏನೋ ತಿಳಿಯದವಳಂತೆ ಆಯ್ತಲ್ಲವಮ್ಮ ನೋಡಿದ್ದು; ಬನ್ನಿ ಇನ್ನು ಕೆಳಗೆ ಹೋಗೋಣ'' ಎಂದಿದ್ದಾಳೆ. ದೈವವೇ ಅಂದು ನಮಗೆ ಸಹಾಯ. ಮುತ್ತಣ್ಣ ಹತ್ತಿರ ಅಧರ್ಮದ ಅಸತ್ಯದ ಒಂದು ತುಣುಕೇನಾದರೂ ಇದ್ದಿದ್ದರೆ ಅಂದು ನಮ್ಮ ಮನೆಯಲ್ಲಿ ದೋಚಿಹೋಗುತ್ತಿತ್ತೋ ಏನೋ ! ಹೀಗೆರಡು ದಿನ ಕಳೆಯಿತು. ಮೂರನೆಯ ದಿನ ನನ್ನ ತಂಗಿ ಮೆಲ್ಲಗೆ ''ಎಷ್ಟು ದಿನ ನಿಮ್ಮ ಕಾರ್ಯಕ್ರಮ ಎಲ್ಲೆಲ್ಲಿ ಹೋಗಿಬರುವಿರಿ? ಬೆಂಗಳೂರಿನಲ್ಲಿ ಎಷ್ಟು ದಿವಸದ ಕೆಲಸ ಇದೆ?'' ಎಂದೆಲ್ಲಾ ಕೇಳಿದಳಂತೆ ''ಏನೋ ಗೊತ್ತಿಲ್ಲ, ನಮ್ಮ ಯಜಮಾನರನ್ನು ಕರೆದು ಕೇಳಿ'' ಎನ್ನುವಳೊಮ್ಮೆ. ''ಮದ್ರಾಸಿನಿಂದ ಮನಿಯಾರ್ಡರ್ ಬರಬೇಕು'' ಎನ್ನುವಳೊಮ್ಮೆ. ಅಂದೆಲ್ಲ ಕಾದಿದ್ದಾಯಿತು. ಮಾರನೆಯ ದಿನವೂ ಕಾದರು ಮನಿಯಾರ್ಡರೂ ಇಲ್ಲ; ಏನೂ ಇಲ್ಲ.

ಮಾರನೆ ಬೆಳಗ್ಗೆ ಕುಲುಕುತ್ತ - ಬಳುಕುತ್ತ ಬಂದು ನಮ್ಮ ತಂದೆ ಡ್ರಾಯಿಂಗ್ ರೂಂನಲ್ಲಿದ್ದರೆ - ತಾನೂ ಅಲ್ಲೇ ಬಂದು ಕುಳಿತಳು ಆಕೆ. ಆತನೂ ಬಂದರು ಮಗುವಿನೊಡನೆ. ಏನೇನೋ ಮಾತಾಡುತ್ತಾ ತಮ್ಮ ಮಗುವಿಗೆ ಅಂದು ಮೊದಲ ಹುಟ್ಟಿದ ಹಬ್ಬ ಎಂದಿದ್ದಾರೆ. ಮುತ್ತಣ್ಣ ಬಂದು ನಮ್ಮ ತಾಯಿಯವರಿಗೆ ಹೇಳಿದರು ''ಇಂದು ಮನೆಯಲ್ಲಿ ಪಾಯಸ, ಮತ್ತೇನಾದರು ಸಿಹಿ ಮಾಡಿಬಿಡಿ. ಹಾಗೇ ಅಂಗಡಿಯಿಂದ ಮಗುವಿಗೆ ಒಳ್ಳೆಬಟ್ಟೆ ಒಂದು ಬೆಳ್ಳಿಲೋಟಾ ತಂದುಕೊಡಿ'' ಎಂದು. ನಮ್ಮ ತಾಯಿ ಅಡಿಗೆ ಮುಗಿಸಿ, ಅಂಗಡಿಗೂ ಹೋಗಿ ಬಂದರು. ಈ ತರುಣದಲ್ಲಿ ಈ ಹೆಂಗಸು ತನ್ನ ಮಗುವಿಗೆ ನೀರೆರೆಯುತ್ತೇನೆ ಎಂದಿದ್ದಾರೆ. ಬೆಳಿಗ್ಗೆಯೇ ಎಲ್ಲರ ಸ್ನಾನವೂ ಮುಗಿದಿದ್ದರಿಂದ ಬಚ್ಚಲ ಒಲೆಗೆ ಪುನಃ ಉರಿಹಾಕಬೇಕು. ಈ ಸುದ್ದಿ ನಮ್ಮಜ್ಜಿಗೆ ತಿಳಿಯಿತು. ''ಏನಿದು ಹುಡುಗಾಟ. ಗುರುತು -ಪರಿಚಯವಿಲ್ಲದ ಯಾರೋ ಗೂಂಡಾ ಅವನ ಹೆಂಡತಿ ಹೌದೋ ಅಲ್ಲದ ಒಂದು ಹೆಂಗಸು, ಮಗು ಬಂತೆಂದರೆ ಇಷ್ಟು ಮಾಡುವಿರಾ ನೀವೆಲ್ಲ. ತೀನ ಬರಲಿ ನಾನು ಹೇಳುತ್ತೇನೆ'' ಎಂದವರೇ ಬಚ್ಚಲು ಮನೆಗೆ ಹೋಗಿ ಬಾಗಿಲು ಹಾಕಿಕೊಂಡರು, ತಮ್ಮ ಸ್ನಾನಕ್ಕೆಂದು ಪುನಃ ನನ್ನ ತಂಗಿ ಹೋಗಿ ನೋಡಿದಾಗ ಬಚ್ಚಲು ಮನೆಯಲ್ಲಿನ ಪಾತ್ರೆಗಳೆಲ್ಲ ಬರಿದು !

ಮಧ್ಯಾಹ್ನ ಊಟದವೇಳೆಗೆ ಈ ಎರಡು - ಮೂರು ದಿನವೂ ಬಂದಾತ ಇಂದು ಬರಲಿಲ್ಲ. ಆಕೆ ರೇಗಿಕೊಂಡು ಎಲ್ಲರನ್ನು ಶಪಿಸುತ್ತ ಕೊಠಡಿಯಲ್ಲಿ ಬಾಗಿಲುಹಾಕಿ ಮಲಗಿದವರು ಏಳಲಿಲ್ಲ. ಮುತ್ತಣ್ಣನೂ ಕಾದು ಕಾದು ಸಾಕಾಗಿ ಊಟ ಮಾಡಿದರು. ಮನೆಯಲ್ಲಿ ಎಲ್ಲರ ಊಟವೂ ಇವರನ್ನು ಬಿಟ್ಟೇ ಆಯಿತು. ಎಲ್ಲೇ ಇದ್ದರೂ,

ಮೊದಲದಿನದ ಅನುಭವದಿಂದ ಮನೆಮಂದಿಯೆಲ್ಲಾ ಇವರ ಮೇಲೆ ಒಂದು ಕಣ್ಣಿಟ್ಟೇ ಇದ್ದರು. ನನ್ನ ತಂಗಿಯಂತೂ ಸರ್ಪಕಾವಲು. ನಾಲ್ಕು ಗಂಟೆಗೆ - ಸಂಜೆ - ನಮ್ಮ ಮನೆಯಲ್ಲಿ ಮಧ್ಯಾಹ್ನದ ಉಪಹಾರ ಸಿದ್ಧ ಮಾಡೋಣವೆಂದು ನನ್ನ ತಂಗಿ ಬಂದಳಂತೆ. ಹಾಲ್‌ನಲ್ಲಿ - ಡ್ರಾಯಿಂಗ್ ರೂಂನಲ್ಲೆಲ್ಲಾ ಒಂದು ಗಬ್ಬು ವಾಸನೆ ಏನಿದು ಏನಿದು ಎಂದು ಎಲ್ಲೆಲ್ಲೂ ಹುಡುಕಿದಳಂತೆ. ಏನೆಂದು ತಿಳಿಯಲೇ ಇಲ್ಲ. ಮುಂದಿನ ರೂಮಿನ ಬಾಗಿಲು ಮುಚ್ಚಿದ್ದು ಮುಚ್ಚಿದ ಹಾಗೆಯೇ ಇತ್ತು. ಆಗಲೇ ಕಾಲೇಜಿನಿಂದ ಬಂದ ನನ್ನ ತಂಗಿಯ ಮಗ ಧೈರ್ಯಮಾಡಿ ಬಾಗಿಲು ತಳ್ಳಿದ. ಒಳಗೆ ಇದ್ದ ನೋಟವನ್ನು ನೋಡಿ ಇವರಿಗೆಲ್ಲ ಎದೆ ಧಸಕ್ಕೆಂದಿತು. ಊಟದ ಪಾತ್ರೆಯೊಂದು; ಅದರ ಬೇರೆ ಬೇರೆ ಬಟ್ಟಲುಗಳೆಲ್ಲ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ಶಾಕಾಹಾರವಲ್ಲದ ಏನೇನೋ ಊಟಗಳು ಅಲ್ಲೆಲ್ಲಾ ಬಿದ್ದಿವೆ. ಹೇಗೆ ಒಪ್ಪ ಓರಣ ಮಾಡುವುದೋ ತಿಳಿಯಲಿಲ್ಲ. ಅಲ್ಲಿ ನಿದ್ದೆಯ ಸೋಗು ಹಾಕಿ ಮಲಗಿದ್ದ ಆಕೆಯೂ ಇಲ್ಲ! ಅವರ ಮಗುವೂ ಇಲ್ಲ !! ಆತ ಮೊದಲೇ ಇಲ್ಲ !! ಯಾವಾಗಿತ ಬಂದರೋ; ಈ ವಿಚಿತ್ರ ಊಟ ಯಾವಾಗ ತಂದರೋ; ಅರ್ಧರ್ಧ ಉಂಡದ್ದನ್ನು ಬಿಟ್ಟು ಯಾವಾಗ ಗಾಡಿ ಬಿಟ್ಟರೋ ಭಗವಂತನೇ ಬಲ್ಲ. ಮನೆಯ ಸಾಮಾನೆಲ್ಲ ನೋಡಿ ಕೊಳ್ಳಿ ಎಂದ ನಮ್ಮ ಹುಡುಗ. ಸದ್ಯ ಏನೂ ಹೋಗಿರಲಿಲ್ಲ.

ಇವಿಷ್ಟು ಸಮಾಚಾರ ಹೊತ್ತು, ಮದ್ರಾಸಿನಲ್ಲಿ ಅವರ ಮನೆ ಎಲ್ಲಿ ಎಂದು ವಿಚಾರಿಸು ಎಂದು ನನಗೆ ಪತ್ರ ಬಂದಿತು. ಆ ಹೆಸರಾಂತ ರಸ್ತೆಯಲ್ಲಿ ಆ ನಂಬರಿನ ಮನೆಯೇ ಇಲ್ಲ. ಆತನ ಹೆಸರನ್ನೇ ಯಾರೂ ಕೇಳಿ ಅರಿಯರು, ಆಕೆಯಂತೂ ಯಾರಿಗೂ ಗೊತ್ತಿಲ್ಲ. ಇನ್ನು ಕೂಲಂಕಷವಾಗಿ ವಿಚಾರಿಸಿದ್ದರಲ್ಲಿ ಆತ ತಾನು ಹೇಳಿಕೊಂಡಂತೆ ಲಾಯರಲ್ಲ ! ಆಕೆ ಆತನ ಹೆಂಡತಿಯಲ್ಲ !! ಆ ಮಗು ಅವರಿಬ್ಬರದಲ್ಲ !!! ಇಷ್ಟು ನಾನು ಬೆಂಗಳೂರಿಗೆ ತಿಳಿಸಿದೆ. ಮುತ್ತಣ್ಣಾಗೆ ಇದು ತಿಳಿದಾಗ ''ಪಾಪ, ಏನೋ ಗ್ರಹಚಾರ'' ಎಂದರಂತೆ.

ನಮ್ಮ ಹುಡುಗಿ ಒಂದು ಸಲ ಆರೇಳು ಆಟಗಳಲ್ಲಿ ಗೆದ್ದು ಎಲ್ಲಾದರಲ್ಲೂ ಮೊದಲ ಸ್ಥಾನ ಪಡೆದಿದ್ದಳು. ಆದರೆ ಶಾಲೆಯಲ್ಲಿ ಅವಳಿಗೆ ಆ ವರ್ಷ ಬಹುಮಾನವಾಗಿ ಕೊಟ್ಟದ್ದು ಒಂದು ಪುಟ್ಟ ಫೌನ್‌ಟನ್ ಪೆನ್ನು ಮಾತ್ರ. ಹುಡುಗಿಗೆ ಮುಖ ಚಿಕ್ಕದಾಯಿತು. ಪ್ರಪಂಚವೇ ತನಗೆ ಅನ್ಯಾಯಮಾಡಿತು. ಎಂದವಳ ಎಣಿಕೆ. ಈ ಸುದ್ದಿ ಅಜ್ಜಿಯ ಮೂಲಕ ತಾತನಿಗೆ ಮುತ್ತಣ್ಣಾಗೆ ತಿಳಿಯಿತು. ಆಗವರೆಂದರು, ''ನಿನಗೆ ಬರಬೇಕಾದ ಮರ್ಯಾದೆ ಅಷ್ಟು ಜನರ ಮಧ್ಯೆ ನಿನ್ನ ಸ್ಕೂಲಿನ ಪರ ನೀನು ಮೊದಲ ಸ್ಥಾನ ಗಳಿಸಿದೆಯಲ್ಲ ಆಗಲೇ ಬಂದುಬಿಟ್ಟಿತು. ಮೊದಲ ಬಹುಮಾನ ಬೆಲೆಯ ಮೇಲೆ ನಿರ್ಧರಿಸುವುದು ಸರಿಯಲ್ಲ. ಸಣ್ಣದೊಂದು ಗುಂಡುಸೂಜಿ ಕೊಟ್ಟರೂ ಅದು ಮೊದಲ ಬಹುಮಾನವೇ'' ಎಂದು.

ನಮ್ಮ ತಾಯಿ ಈ ಎಲ್ಲದರಲ್ಲೂ ನಮ್ಮ ಮುತ್ತಣ್ಣಾಗೆ ಅರ್ಧಾಂಗಿ; ಈ ಎಲ್ಲ ಕಾರುಬಾರು ನಡೆಸುವವರು ಮುತ್ತಣ್ಣ. ನಮ್ಮ ತಾಯಿ ತೀರಿಕೊಂಡದ್ದು ಇವರಿಗೆ ಬಹು ದೊಡ್ಡ ಆಘಾತವೇ. ತಮ್ಮಮ್ಮ ತೀರಿಕೊಂಡಂದು, ''ಇದುವರೆಗೆ ನಾನು ಮಗುವಿನಂತಿದ್ದೆ, ಇಂದಿನಿಂದ ಮುದುಕನಾಗಿಬಿಟ್ಟೆ'' ಎಂದರು. ನಮ್ಮ ತಾಯಿ ತೀರಿಕೊಂಡಂದು ''ಆಸ್ಪತ್ರೆಯಿಂದ ಗುಣವಾಗಿ ಬರುವೆ ಎಂದು ಕಳಿಸಿದೆ. ಕೈ ಬೆರಳ ಸಂದಿನಿಂದ ನುಸುಳಿ ಹೋಗಿಬಿಟ್ಟರಲ್ಲಮ್ಮ'' ಎಂದು ಒದ್ದಾಡಿದರು.

ಇಂತಹ ದುಃಖದಲ್ಲಿಯೂ ನಾವಾರೂ ಕಣ್ಣೀರಿಟ್ಟು ಗೋಳಾಡುವುದು ಮುತ್ತಣ್ಣಾಗೆ ಇಷ್ಟವಿಲ್ಲ. ಅದು ಸಂಸ್ಕೃತಿಯಲ್ಲ. ತಾವೂ ಹಾಗೇ ಮಾರನೆದಿನ ಬಂದ ತಮ್ಮ ಸ್ನೇಹಿತರನ್ನೆಲ್ಲಾ ತಾವೇ ಸಂತಯಿಸಿದರು. ಇಂದಿಗೂ ಯಾರೇ ಬಂದರೂ ನಮ್ಮ ಮನೆಯಲ್ಲಿ ಎಲ್ಲ ಕೆಲಸಕಾರ್ಯಗಳೂ ಎಂದಿನಂತೆ ನಡೆಯುತ್ತ ಇರುವುದನ್ನು ನೋಡಬಹುದು. ಈಗೊಬ್ಬ ಮರಿಮಗ ಇದ್ದಾನೆ ಮುತ್ತಣ್ಣಾಗೆ, ಅವನು Great-Grand-Son ಹುಟ್ಟಿ ತಮ್ಮನ್ನು Great ಮಾಡಿದ ಎನ್ನುತ್ತಾರೆ. ಮುತ್ತಣ್ಣ.

ಈ ಮುತ್ತಣ್ಣ, ನಿಮಗಾಗಿ, ನಮಗಾಗಿ, ಎಲ್ಲರಿಗಾಗಿ ನೂರ್ಕಾಲ ಬಾಳಿ, ತಮ್ಮ ಆಶೀರ್ವಾದ ನಮ್ಮನಮಗೆ ನೀಡುತ್ತಿರಲಿ ಎಂದು ಆ ಶ್ರೀನಿವಾಸನಲ್ಲಿ ಪ್ರಾರ್ಥಿಸುತ್ತೇನೆ.

ಕೃಪೆ : ಶ್ರೀನಿವಾಸ

## ಅಗಲಿಕೆ

### ಡಾ। ಹಾ.ಮಾ.ನಾ. ಇನ್ನಿಲ್ಲ

ನವೆಂಬರ್ ತಿಂಗಳ 10ರಂದು ರಾತ್ರಿ ಕನ್ನಡದ ಹಿರಿಯ ಸಾಹಿತಿಯರಾದ ಡಾ। ಹಾ.ಮಾ.ನಾ. ಅವರು ಮೈಸೂರಿನಲ್ಲಿ ನಮ್ಮೆಲ್ಲರಿಂದ ಅಗಲಿದರು ಎಂದು ತಿಳಿಸಲು ವಿಷಾದಿಸುತ್ತೇವೆ.

ಹಾರೋಗದ್ದೆ ಮಾನಪ್ಪ ನಾಯಕರು ಮೈಸೂರು ವಿ.ವಿ.ಯಿಂದ ಬಿ.ಎ. ಆನರ್ಸ್ ಪದವಿಯನ್ನು ಪಡೆದು ತುಮಕೂರಿನ ಪ್ರಥಮ ದರ್ಜೆಯ ಕಾಲೇಜಿನಲ್ಲಿ ಅಧ್ಯಾಪಕರಾದರು. ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದರು. ಉನ್ನತ ವ್ಯಾಸಂಗದಲ್ಲಿ ಆಸಕ್ತಿ ಇದ್ದ ಇವರು ಮುಂದಕ್ಕೆ ಇಂಡಿಯಾನಾ ವಿಶ್ವವಿದ್ಯಾನಿಲಯದಲ್ಲಿ ಪಿ.ಎಚ್.ಡಿ. ಪದವಿ ಪಡೆದು, ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಅಧ್ಯಾಪಕರಾಗಿ ಮುಂದಕ್ಕೆ ಇವರು ಕುವೆಂಪು ಅಧ್ಯಯನ ಸಂಸ್ಥೆಯ ನಿರ್ದೇಶಕ ಮತ್ತು ಕೇರಳದ ಮಹಾತ್ಮಾಗಾಂಧಿ ವಿ.ವಿ.ಯ ಕುಲಪತಿಯಾಗಿ ಹಾಗೂ ಗುಲ್ಬರ್ಗಾ ವಿ.ವಿ.ಯ ಕುಲಪತಿಗಳಾಗಿ ಸೇವೆಸಲ್ಲಿಸಿದ್ದಾರೆ.

ಅಂಕಣ ಮತ್ತು ವಿಚಾರ ಪೂರಿತ ಲೇಖನಗಳಿಗೆ ಹೆಸರಾಂತ ಡಾ। ಹಾ.ಮಾ.ನಾ. ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಬದುಕಿನುದ್ದಕ್ಕೂ ಸರಳತೆ, ಶಿಸ್ತು ಮತ್ತು ಸ್ವಚ್ಛತೆಯನ್ನು ಅನುಸರಿಸಿಕೊಂಡು ಬಂದ ಡಾ। ಹಾ.ಮಾ.ನಾ. ಕನ್ನಡಿಗರ ಮೆಚ್ಚುಗೆ ಮತ್ತು ಪ್ರೀತಿಗೆ ಪಾತ್ರರಾಗಿದ್ದರು. ಕಳೆದ ವರ್ಷದ ಸಾಲಿನಲ್ಲಿ ಮೈಸೂರು ಅಸೋಸಿಯೇಷನ್ನಿನ ಬಂಗಾರಹಬ್ಬದ ದತ್ತಿ ಉಪನ್ಯಾಸ ಮಾಲೆಯಲ್ಲಿ ಡಾ। ಹಾ.ಮಾ.ನಾ. ಅವರು ತಮ್ಮ ಉಪನ್ಯಾಸಗಳನ್ನು ನೀಡಿದ್ದು, ಮುಂಬೈ ಕನ್ನಡ ಪ್ರೇಮಿಗಳ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದೆ.

ಡಾ। ಹಾ.ಮಾ.ನಾ. ಅವರ ಅಗಲಿಕೆ ಇಂದ ಕನ್ನಡ ಸಾಹಿತ್ಯ ಜಗತ್ತಿಗೆ ತುಂಬಲಾರ ದಂತಹ ನಷ್ಟವಾಗಿದೆ.

ನಾಟಕ ವಿಮರ್ಶೆ

# ಕರುಣಾರಸ ಮಡುಗಟ್ಟಿದ ಬೆಂದ ಕಾಳೂರು

''ನಾಟಕ, ನಾಟ್ಯ ಪ್ರಪಂಚ, ಅದು ಕವಿ ಪ್ರತಿಭೆಯಿಂದ ನಿರ್ಮಿತವಾದದ್ದು; ನಟರ ಚಾತುರ್ಯದಿಂದ ಪ್ರದರ್ಶಿತವಾದದ್ದು. ಕಾವ್ಯ ನಾಟಕಗಳಿಂದ ದೊರೆಯುವ ಸುಖವು ವಿಷಯ ಸುಖವಲ್ಲ; ಅದು ಭಾವನಾ ಲಭ್ಯವಾದದ್ದು. ಚಿತ್ತವಿಶ್ರಾಂತಿಯೇ ಅದರ ಮುಖ್ಯ ಲಕ್ಷಣ. ರಸಾಸ್ವಾದ ಕಾಲದಲ್ಲಿ ಮನಸ್ಸು ಲೌಕಿಕವಾದ ಕ್ಲೇಶಕಾರ್ಪಣ್ಯಾದಿಗಳನ್ನು ಮರೆತು ಅಪೂರ್ವವೂ ಸಂಪೂರ್ಣವೂ ಆದ ವಿಶ್ರಾಂತಿಯನ್ನು ಪಡೆಯುತ್ತದೆ. ಕರುಣರಸದ ಅನುಭವದಲ್ಲೂ ಈ ವಿಶ್ರಾಂತಿ ಉಂಟೇ ಉಂಟು. ಆದ ಕಾರಣವೇ ಅದು ಆನಂದಮಯ. ಕರುಣರಸದ ಅನುಭವ ಕಾಲದಲ್ಲಿ ಸಾಮಾಜಿಕನ ಕಣ್ಣು ಹನಿಗೂಡುವುದು'' ಎನ್ನುತ್ತದೆ. ಭಾರತೀಯ ಕಾವ್ಯ ಮೀಮಾಂಸೆ. ಮೊನ್ನೆ ಮಾಸ್ತಿ ಉತ್ಸವದಲ್ಲಿ ರಂಗದ ಮೇಲೆ ಬಂದ ಬೆಂದ ಕಾಳೂರು ನಾಟಕ ಪ್ರೇಕ್ಷಕರನ್ನು ಹಿಡಿದಿಡುವಲ್ಲಿ ಯಶಸ್ಸು ಕಂಡಿದೆ.

'ಬೆಂದ ಕಾಳೂರು' ಮಾಸ್ತಿ ಅವರ ಚೆನ್ನಮ್ಮ ಕಥೆಯ ರೂಪಾಂತರ. ಇದನ್ನು ನಾಟಕವನ್ನಾಗಿ ಪರಿವರ್ತಿಸಿ ಆಡಿತೋರಿಸಿದವರು. ಡಾ. ಮಂಜುನಾಥ್, ಮೈಸೂರು ಅಸೋಸಿಯೇಷನ್ ಲಲಿತ ಕಲಾ ವಿಭಾಗದ ಮಿತ್ರರು. ಅತ್ಯಂತ ಪರಿಣಾಮ ಕಾರಿಯಾಗಿ ಇದನ್ನು ಅಭಿನಯಿಸಿ ತೋರಿಸಿದರು. ಶೋಕವೇ ಈ ನಾಟಕದ ಸ್ಥಾಯಿ ಭಾವ. ಇದು ಕರುಣಾರಸ ಪ್ರಧಾನವಾದ ನಾಟಕ. ಸಂಪಿಗೆ ಹಳ್ಳಿಯಿಂದ ಬೆಂಗಳೂರಿಗೆ ಬಂದ ಕುಟುಂಬವೊಂದು ದುರ್ಗತಿಗೀಡಾದುದನ್ನು ಈ ನಾಟಕ ಚಿತ್ರಿಸುತ್ತದೆ. ಇದು ಚೆನ್ನಮ್ಮನ ಸಂಸಾರದ ಗೋಳಿನ ಕತೆಯೂ ಹೌದು. ಆಕೆ ಈ ನಾಟಕದ ಕಥಾ ನಾಯಕಿ. ಸೋತು ಗೆದ್ದವಳು. ರಾಮಯ್ಯ ಅವಳ ಗಂಡ. ಈತ ಬೆಂಗಳೂರಿನ ಒಂದು ಗಿರಣಿಯ ಕಾರ್ಮಿಕ. ಮೇಸ್ತ್ರಿ ಈ ನಾಟಕದ ಖಳನಾಯಕ. ಮೇಸ್ತ್ರಿಯ ಗೆಳೆತನವನ್ನು ಮಾಡಿದ ರಾಮಯ್ಯ ಕೆಟ್ಟ ಚಾಳಿಗಳನ್ನೆಲ್ಲ ಅಭ್ಯಾಸ ಮಾಡಿಕೊಂಡು ಕೊನೆಗೆ ದೇವಾಲಯದ ಹಣ ದುರುಪಯೋಗ ಮಾಡಿ ಕಟ್ಟಿಕೊಂಡ ಹೆಂಡತಿಯನ್ನು ಕೂಲಿಗೆ ಹಚ್ಚಿ ಅವಳನ್ನು ಗತಿ ಗೋತ್ರವಿಲ್ಲದಂತೆ ಮಾಡಿ ಮುಂದೊಂದು ದಿನ ಪೋಲೀಸರ ಗುಂಡಿಗಾಹುತಿಯಾಗುತ್ತಾನೆ. ಗಂಡ ಮಾಡಿದ ಹಣಕಾಸಿನ ಅವ್ಯವಹಾರದಿಂದಾಗಿ ಚೆನ್ನಮ್ಮ ಮುಂದೆ ಜೈಲು ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಏನೆಲ್ಲ ಕನಸುಗಳನ್ನು ಕಟ್ಟಿಕೊಂಡು ಬೆಂಗಳೂರಿಗೆ ಬಂದ ಚೆನ್ನಮ್ಮನ ಬದುಕು ಮುರಾಬಟ್ಟೆಯಾಗುತ್ತದೆ. ಅಂತ್ಯದಲ್ಲಿ ನೋವಿನ ಕಂತೆಯನ್ನು ಹೊತ್ತು ಆಕೆ ಊರ ಹಾದಿ ಹಿಡಿಯುತ್ತಾಳೆ.

ಚೆನ್ನಮ್ಮನದು ಇಲ್ಲಿ ದಿಟ್ಟ ಪಾತ್ರ. ಆಕೆ ಅನುಭವಿಸಿದ ನರಕಯಾತನೆ, ನೋವುಗಳಿಗೆ ಲೆಕ್ಕವಿಲ್ಲ. ಅಳುನುಂಗಿ ನಗನಗಲು ಪ್ರಯತ್ನಿಸಿ ಸೋತು ದಿಕ್ಕಿಲ್ಲದವಳಾಗುತ್ತಾಳೆ. ಆಕೆ ಬದುಕಿನುದ್ದಕ್ಕೂ ಎಲ್ಲಿಯೂ ರಾಜಿಮಾಡಿ ಕೊಂಡವಳಲ್ಲ. ಕಟ್ಟಿಕೊಂಡವನ ಮಾನಕಾಯುವ ಕೆಲಸವನ್ನು ಚೆನ್ನಮ್ಮ ಮೊದಲಿನಿಂದಲೂ ಮಾಡಿಕೊಂಡು ಬಂದವಳು. ಸುಳ್ಳಾಡುವ, ಮೋಸ, ವಂಚನೆ, ದೊಂಗಿತನಗಳನ್ನು ಆಕೆ ಕಂಡು ಕೇಳಿ ಅರಿಯದ ಜೀವ. ಆಕೆಯದು ಇಲ್ಲಿ ಅಪ್ಪಟ ಹಳ್ಳಿಯ ಮುಗ್ಧೆಯ ಪಾತ್ರ. ಚೆನ್ನಮ್ಮ ಶಾಲೆಯ ಮೆಟ್ಟಿಲು ಹತ್ತಿದವಳಲ್ಲ. ಆದರೆ ಸಂದರ್ಭ ಬಂದಾಗ ಆಕೆ ತೆಗೆದುಕೊಳ್ಳುವ ನಿರ್ಧಾರ ಕಲಿತವರನ್ನು ನಾಚಿಸಬಲ್ಲದು. ತನ್ನ ನೂರಾರು ಕಷ್ಟ ಕಾರ್ಪಣ್ಯಗಳನ್ನು ಹೆತ್ತವರ ಮುಂದೆ ತೋಡಿಕೊಂಡು ಅವರಿಗೂ ಚಿಂತೆ ಅಂಟಿಸಿದವಳಲ್ಲ. ಗಂಡನೆಂಬ ಪ್ರಾಣಿಯ ಸ್ವಭಾವವನ್ನು ತಿದ್ದಲು ನಿರಂತರವಾಗಿ ಪ್ರಯತ್ನಿಸುತ್ತಾಳೆ. ಅದು ಅಸಾಧ್ಯವಾದಾಗ ಆತ್ಯಂತಿಕವಾಗಿ ತನ್ನ ದಾರಿಯನ್ನು ಕಂಡುಕೊಳ್ಳುತ್ತಾಳೆ. ಜೀವನ ಶಾಲೆಯಲ್ಲಿ ಆಕೆ ಕಲಿತದ್ದು ಅಪಾರ.

ನಾಟಕದ ಕೊನೆಯಲ್ಲಿ ರಾಮಯ್ಯ ಬಂದು ಕ್ಷಮೆ ಕೇಳಿ; ಮನೆಗೆ ಬಾ, ಹೊಸ ಬದುಕನ್ನು ಆರಂಭ ಮಾಡೋಣವೆಂದು ಕೇಳಿದಾಗ ಚೆನ್ನಮ್ಮ ''ಗಂಡ ಹೆಂಡಿರನ್ನು ಬಿಡಬಹುದು. ಹೆಂಡರು ಗಂಡನ್ನು ಬಿಡೋದು ಅಂತ ಉಂಟಾ. ಈಗ ನಾ ಏನೂ ವಲ್ಲಿ'' ಎಂದು ಎಲ್ಲದರ ಹಂಗು ಹರಿದುಕೊಳ್ಳುತ್ತಾಳೆ.

ಚೆನ್ನಮ್ಮ, ಹಳ್ಳಿಯಿಂದ ಬೆಂಗಳೂರಿಗೆ ಬಂದಿಳಿಯುವುದರೊಂದಿಗೆ ನಾಟಕ ಆರಂಭ ವಾಗುತ್ತದೆ. ಇಲ್ಲಿಂದಲೇ ಆಕೆಯ ನೋವಿನ ಕತೆ ಬಿಚ್ಚಿಕೊಳ್ಳುತ್ತದೆ. ಚೆನ್ನಮ್ಮನಾಗಿ ನಟಿಸಿದ 'ಸೌಮ್ಯ' - ಅವರು ಆ ಪಾತ್ರವನ್ನು ಮನಂಬುಗುವಂತೆ ಅಭಿನಯಿಸಿದ್ದಾರೆ. ಭಾವಾಭಿನಯ ಅತ್ಯಂತ ಆಪ್ತವಾಗಿತ್ತು. ಪ್ರಸ್ತುತ ನಾಟಕಕ್ಕೆ ಬೇಕಾದ ನಾಟಕೀಯತೆಯನ್ನು ಸಮರ್ಥವಾಗಿ ಬಿಂಬಿಸಿ ತಾವೊಬ್ಬ ಒಳ್ಳೆಯ ಪ್ರಬುದ್ಧ ನಟಿ ಎಂಬುದನ್ನು ಸಾಬೀತು ಪಡಿಸಿದ್ದಾರೆ. ಇಡೀ ನಾಟಕದ ಜೀವಂತಿಕೆಯನ್ನು ಕಾಯ್ದುಕೊಂಡು ಬರಲು ಅವರಿಗೆ ಸಾಧ್ಯವಾಗಿದೆ. ಈ ಇಡೀ ನಾಟಕದ ಸಾವಯದ



*ಬೆಂದಕಾಳೂರು ನಾಟಕದಲ್ಲಿ ಅರುಣ್, ಭಾರತಿ ಮತ್ತು ಸೌಮ್ಯ.*

ಸಂಬಂಧದ ಬಂಧ ಅಂಟಿಕೊಂಡಿರುವುದೇ ಚೆನ್ನಮ್ಮನ ಪಾತ್ರದಲ್ಲಿ ಇದನ್ನು 'ಸೌಮ್ಯ' ಅವರು ಸೈಸೈ ಎಂಬಂತೆ ನಿರ್ವಹಿಸಿದ್ದಾರೆ.

ಚೆನ್ನಮ್ಮನ ಗಂಡ ರಾಮಯ್ಯನದು ಒರಟು ಸ್ವಭಾವ. ವಿಲಾಸಿ ಪ್ರವೃತ್ತಿ. ಬೇಜವಾಬ್ದಾರಿ ಮನುಷ್ಯ ಇದನ್ನು ರಂಗನಾಥ ಆರ್. ಎಸ್. ಅವರು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಈ ನಾಟಕದ ಇನ್ನೊಂದು ಪಾತ್ರ ಮೇಸ್ತ್ರಿ ತಿರುಮಲಯ್ಯನದು. ನಾಟಕದೊಳಗಿನ ನಾಟಕದ ಸೂತ್ರಧಾರಿ ಆತ. ಮೇಸ್ತ್ರಿ ಈ ನಾಟಕದ ಖಳನಾಯಕನೆಂದರೂ ತಪ್ಪಿಲ್ಲ. ಮೇಸ್ತ್ರಿ ತಿರುಮಲಯ್ಯನಾಗಿ ನಟಿಸಿ ಮಿಂಚಿದವರು. ಹಿರಿಯ ನಾಟಕಕಾರ ಮಂಜುನಾಥಯ್ಯ. ಅವರಿಗೆ ಈ ಪಾತ್ರ ಹೇಳಿ ಮಾಡಿಸಿದಂತಿತ್ತು. ಅವರ ಮಾತುಕತೆ, ಹಾವಭಾವ, ಆಂಗಿಕ ಅಭಿನಯ, ಧ್ವನಿಯಲ್ಲಿನ

ಕಾಕು ಮೊದಲಾದ ಅಂಶಗಳಿಂದ ನಾಟಕಕ್ಕೆ ಮತ್ತಷ್ಟು ಕಳೆ ಬಂದಿತು. ಕಿರಿಯ ಕಲಾವಿದರು ಅವರಿಂದ ಕಲಿಯುವುದು ಸಾಕಷ್ಟಿದೆ. ನಾಟಕ ರಂಗದ ಸುದೀರ್ಘ ಅನುಭವವನ್ನು ಮಂಜುನಾಥಯ್ಯ ಅವರಿಲ್ಲಿ ಧಾರೆಯೆರೆದಿದ್ದಾರೆ ಎನಿಸಿತು. ನಾಟಕದ ಮೊದಲರ್ಧದಲ್ಲಿ ಗಮನ ಸೆಳೆದ ಇನ್ನೊಂದು ಪಾತ್ರ ಚೆನ್ನಮ್ಮನ ತಂಗಿ ಮಲ್ಲಿಯದು. ಮಲ್ಲಿಯಾಗಿ ನಟಿಸಿದ ಪ್ರಿಯಾಂಕ ಉತ್ತಮ ಬಾಲ ಕಲಾವಿದೆ. ಒಳ್ಳೆಯ ಮಾರ್ಗದರ್ಶನ ಸಿಕ್ಕರೆ ಆಕೆ ಭವಿಷ್ಯದಲ್ಲಿ ಒಳ್ಳೆಯ ನಟಿಯಾಗುವುದರಲ್ಲಿ ಸಂದೇಹವಿಲ್ಲ. ಮನಸ್ಸಿಗೆ ನಾಟುವ ಹಾಗೆ, ಪ್ರಬುದ್ಧ ಕಲಾವಿದರ ಹಾಗೆ ಆಕೆ ಈ ನಾಟಕದಲ್ಲಿ ನಟಿಸಿ ಪ್ರೇಕ್ಷಕರನ್ನು ಬೆರಗುಗೊಳಿಸಿದ್ದಾಳೆ. ಹಾಗೆ ನೋಡಿದರೆ ಬೆಂಡಕಾಳೂರು ನಾಟಕದ ಮೊದಲರ್ಧದ ನಡೆ, ಗತಿ ನಿಧಾನವಾಗಿ ತುಸು ಬೋರ್ ಹೊಡೆಸಿತು.



*ಮಿಲ್ ಕಾರ್ಮಿಕರನ್ನು ಸಂಘಹೊಂದಲು ಚೇತಾವನೆ ಮಾಡುತ್ತಿರುವ ಬೆಳ್ಳಿಯಪ್ಪನಾಗಿ ಪ್ರೊ. ಶ್ರೀನಿವಾಸ್ ಮತ್ತು ಇತರರು.*

ಇಲ್ಲೆಲ್ಲ ನಾಟಕಕ್ಕೆ ಕಳೆಯೇರಿಸಿದವರು ಚೆನ್ನಮ್ಮ ಹಾಗೂ ಮಲ್ಲಿಯಾಗಿ ನಟಿಸಿದವರೆಂಬುದನ್ನು ಯಾರೂ ಮರೆಯುವಂತಿಲ್ಲ.

ಕಾರ್ಮಿಕ ಸಂಘರ್ಷವೂ ಈ ನಾಟಕದಲ್ಲಿ ಚೆನ್ನಾಗಿ ಪಡಿಮೂಡಿದೆ. ಈ ನಿಟ್ಟಿನಲ್ಲಿ ಬೆಳ್ಳಿಯಪ್ಪನದು ಪ್ರಮುಖ ಪಾತ್ರ. ಈತ ಪಕ್ಕಾ ರಾಜಕಾರಣ ಮನುಷ್ಯ ಸೋಗು ಮಾತ್ರ ಜನಪರನೀತಿಯ ಕಾರ್ಮಿಕ ನಾಯಕನದು. ಸೊಂಪು ಆರಂಭಿಸಲು ಪ್ರೇರಣೆ ನೀಡಿ ತನ್ನ ಬೇಳೆ ಬೇಯಿಸಿಕೊಳ್ಳುವ ಈತ ನಮ್ಮ ವರ್ತಮಾನದ ಕಾರ್ಮಿಕರ ನಾಯಕರ ಝೆರಾಕ್ಸ್. ಕಾರ್ಮಿಕರು ಹೊಟ್ಟೆಗೆ ಹಿಟ್ಟಿಲ್ಲದೆ ಪರದಾಡುತ್ತಿದ್ದಾರೆ ಈತ ಸಿ.ಎಂ., ಪಿ.ಎಂ. ನಂದಿಬೆಟ್ಟ ಎಂದೆಲ್ಲ ಮಾತನಾಡುತ್ತಿರುತ್ತಾನೆ. ಕಾರ್ಮಿಕ ನಾಯಕರೇ ಹೇಗೆ ಕಾರ್ಮಿಕರ ಸಂಘಟನೆಗಳ ವಿಫಲತೆಗೆ, ಅವರ ಶೋಷಣೆಗೆ ಕಾರಣ ರಾಗುತ್ತಾರೆಂಬುದನ್ನು ನಾಟಕ ಚೆನ್ನಾಗಿ ತೋರಿಸಿಕೊಟ್ಟಿದೆ. ಬೆಳ್ಳಿಯಪ್ಪನ ಪಾತ್ರದಲ್ಲಿ ಪ್ರೊ. ಶ್ರೀನಿವಾಸರು ವಾಸ್ತವ ಸಂಗತಿಗಳಿಗೆ ಕನ್ನಡಿಹಿಡಿದಿದ್ದಾರೆ. ಅವರ ಅಭಿನಯವೂ ಸೊಗಸಾಗಿತ್ತು, ಇದಲ್ಲದೆ ಈ ನಾಟಕದಲ್ಲಿ ನಾಗಪ್ಪ (ಅಹಲ್ಯಾ ಬಲ್ಲಾಳ), ಮಾದವ್ವ (ಭಾರತಿ), ಕೃಷ್ಣ (ಅರುಣ್), ಸೋಮಣ್ಣ (ಶ್ರೀಧರ), ಮೊದಲಾದವರು ತಮ್ಮ ಅಭಿನಯಗಳ ಮೂಲಕ ನಮ್ಮ ಗಮನ ಸೆಳೆದರು. ನಾಟಕವೆಂಬುದು, ಅದರ ಯಶಸ್ಸು ಟೀಮ್‌ವರ್ಕ್ ಮೇಲೆ ನಿಂತಿದೆ ಎಂಬುದು ನಿಜವಾದರೂ ಅಲ್ಲಿ ವೈಯಕ್ತಿಕ ಪ್ರತಿಭೆಗಳನ್ನು ಕಡೆಗಣಿಸುವಂತಿಲ್ಲ.

ಈ ನಾಟಕದ ಪೂರ್ವಾರ್ಧದ ನಡೆ ಬಹಳ ನಿಧಾನವಾಗಿತ್ತು. ತುಸು ಬೇಸರತರಿಸುವಂತಿತ್ತು ಎಂದು ಆರಂಭದಲ್ಲೇ ಹೇಳಿದೆ. ಅದಕ್ಕೆ ತುಸು ವಿವರಣೆ ಅಗತ್ಯವೆನಿಸುತ್ತಿದೆ. ಸಣ್ಣಕತೆಯೊಂದನ್ನು ಹಿಗ್ಗಿಸಿ ಪೂರ್ಣಾವಧಿಯ ನಾಟಕವನ್ನಾಗಿ ಮಾಡಿದ್ದರಿಂದ ಹೀಗಾಗಿರುವ ಸಾಧ್ಯತೆಯಿದೆ. ಪೂರ್ವರಂಗಕ್ಕಿಂತ ಉತ್ತರರಂಗ ಮಾತ್ರ ಇಲ್ಲಿ ನಾಟ್ಯಾರ್ಥವನ್ನು ಕಟ್ಟುತ್ತದೆ. ಪೂರ್ವಾರ್ಧದ ನಡಿಗೆ ಆಮೆಗತಿಯಲ್ಲಿದ್ದರಿಂದ ಅದರ ಪರಿಣಾಮ ತುಸು ಸಡಿಲವಾದಂತಾಯಿತು. ಕೆಲವು ದೃಶ್ಯಗಳು ಪಾರದರ್ಶಕ ಪರದೆಯ ಹಿಂದೆಯೇ ಸಾಗುತ್ತದೆ. ಇಂದೊಂದು ಗಮನಾರ್ಹ ತಂತ್ರ. ನಾಟಕದ ದ್ವಿತೀಯಾರ್ಧದಲ್ಲಿ ನಿರ್ದೇಶಕರು ಈ ತಂತ್ರವನ್ನು ಔಚಿತ್ಯಪೂರ್ಣವಾಗಿ ಬಳಸಿಕೊಂಡಿದ್ದಾರೆ. ಇದನ್ನೇ ಆರಂಭದಲ್ಲಿ ತಂದು (ನೀರಿಗಾಗಿ ನಡೆಯುವ ಜಗಳ) ಹೀಗೆ ಒಂದೆರಡು ಸಂಗತಿಗಳನ್ನು ಪರದೆಯ ಹಿಂದೆ ಅಳವಡಿಸಿದ್ದರೆ ನಾಟಕ ಮತ್ತಷ್ಟು ಪರಿಣಾಮ ಕಾರಿಯಾಗುತ್ತಿತ್ತು. ಪಾನ ಕೂಟದಲ್ಲಿ ಹೆಣ್ಣೊಬ್ಬಳು ಕುಣಿಯುವ ದೃಶ್ಯವನ್ನು ಪರದೆಯ ಹಿಂದೆಯೇ ತಂದದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಇದೊಂದು ನಿರ್ದೇಶಕರ ಶ್ಲಾಘನೀಯ ಪ್ರಯೋಗ ಇಷ್ಟಾಗಿಯೂ ಈ ನಾಟಕದಲ್ಲಿ ಡಾ। ಮಂಜುನಾಥ್ ಅಳವಡಿಸಿದ ಸ್ಕ್ರೀನ್‌ಪ್ಲೇ ತಂತ್ರ, ತನ್ನ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತರಿಸಿಕೊಂಡಿದೆ. ಒಂದೇ ರಂಗದಲ್ಲಿ ಎಲ್ಲಾ ಮೂಲೆಗಳನ್ನು ನಾಟಕದ ಬೇರೆ ಬೇರೆ ದೃಶ್ಯಗಳು ಸ್ಥಾನ ಪಡೆದುಕೊಳ್ಳುತ್ತದೆ. ಬೆಳಕಿನ ಹಿನ್ನೆಲೆಯಲ್ಲಿ ಅವು ಹೆಜ್ಜೆ ಹಾಕುತ್ತವೆ. ನಿರ್ದೇಶಕರಿಲ್ಲಿ ಅದನ್ನು ಹಿಂಭಾಗ ಮುಂಭಾಗಕ್ಕೂ ವಿಸ್ತರಿಸಿದ್ದಾರೆ.

ನಾಟಕದ ಭಾವತೀವ್ರತೆಯನ್ನು ಹೆಚ್ಚಿಸಲು ಇಲ್ಲಿ ಸಂಗೀತವನ್ನು ಅಳವಡಿಸಿಕೊಳ್ಳಲಾಗಿತ್ತು. ಆಯ್ದುಕೊಂಡ ಮೇಳಗಾನಗಳು ಸೂಕ್ತವಾಗಿದ್ದವು. ಆದರೆ ಅವು ಸ್ವಲ್ಪ ಕಿರಿದಾಗಿದ್ದರೆ ಚೆನ್ನಿತ್ತು. ಉಳಿದಂತೆ ರಂಗದ ಮೇಲೆ ನಡೆದ ರಂಗಕ್ರಿಯೆ, ಬೆಳಕು, ರಂಗ ಶೃಂಗಾರ, ವಿನ್ಯಾಸ, ಧ್ವನಿಯ ಏರಿಳಿತ, ಅಭಿನಯ, ಔಚಿತ್ಯ ಪ್ರಜ್ಞೆ, ಪಾತ್ರಗಳ ಹಂಚಿಕೆ, ನಿರ್ವಹಣೆ, ಸಂಭಾಷಣೆ ಮೊದಲಾದ ವಿಭಾಗಗಳು ಸಮ್ಮಿಲನದಿಂದ ಶೋಕಭಾವವನ್ನು ಕೆರಳಿಸಿ. ಕರುಣಾರಸ ಮಡುಗಟ್ಟುವಂತೆ ಮಾಡಿದೆ. ರಂಗ ತಾಲೀಮಿನಲ್ಲಿಯೂ ಯಾವ ಕೊರತೆಯೂ ಕಾಣಲಿಲ್ಲ. ಇಲ್ಲೆಲ್ಲ ನಿರ್ದೇಶಕ ಡಾ. ಮಂಜುನಾಥರ, ಕಲಾವಿದರ ಶ್ರಮ ಎದ್ದು ಕಾಣುತಿತ್ತು.

ಕಳೆದ ಮೂರು ವರ್ಷಗಳ ಹಿಂದೆ ಇದೇ ನಾಟಕ ಕೃತಿ ರೂಪದಲ್ಲಿ ಬೆಳಕು ಕಂಡಿತು. ಅದನ್ನು ಓದಿ ಖುಷಿ ಪಟ್ಟಿದೆ. ಈಗ ಅದನ್ನು ರಂಗದ ಮೇಲೆ ನೋಡುವ ಅವಕಾಶವನ್ನು ಮೈಸೂರು ಅಸೋಸಿಯೇಷನ್‌ನ ಲಲಿತ ಕಲಾ ವಿಭಾಗದ ಮಿತ್ರರು ಕಲ್ಪಿಸಿಕೊಟ್ಟರು. ಈ ನಾಟಕದಲ್ಲಿ ಅವರ ಶ್ರಮ ಸಾರ್ಥಕವಾಗಿದೆ. ಅವರಿಗೆಲ್ಲ ನಮ್ಮ ಅಭಿನಂದನೆಗಳು. ಸಲ್ಲುತ್ತವೆ.

-- ಡಾ. ಜಿ. ಎನ್. ಉಪಾಧ್ಯ
ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ

# ಕರ್ನಾಟಕ ಸಾಂಸ್ಕೃತಿಕ ಪರಂಪರೆ - ೭

✍ ಸುಮಾ ದ್ವಾರಕನಾಥ್

**ಕಲಚೂರ್ಯರು :**

ಕಲ್ಯಾಣದ ಕಲಚೂರ್ಯರು ಬಹುಕಾಲ ಮಹಾ ಮಾಂಡಲಿಕರಾಗಿ ಆಳ್ವಿಕೆ ನಡೆಸಿದರೂ, ಸ್ವತಂತ್ರವಾಗಿ ರಾಜ್ಯಭಾರ ನಡೆಸಿದುದು ಬಹುಕಡಿಮೆ ಕಾಲ. ಕಲ್ಯಾಣದ ಚಾಲುಕ್ಯರ ಪ್ರಾಬಲ್ಯ ಇಳಿಮುಖವಾದಾಗ ಅವರೊಂದಿಗೆ ರಕ್ತ ಸಂಬಂಧ ಹೊಂದಿದ್ದ ಕಲಚೂರ್ಯರ ದೊರೆ ಬಿಜ್ಜಳ ಚಾಲುಕ್ಯರನ್ನು ಮೂಲೆಗೊತ್ತಿ ಸ್ವತಂತ್ರನಾಗಿ ಆಳ್ವಿಕೆ ನಡೆಸಿದನು. ಅವನ ಕಾಲ ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಮಹತ್ತರವಾದ ಬದಲಾವಣೆಯನ್ನು ಕಂಡ ಚಿರಸ್ಮರಣೀಯವಾದ ಕಾಲವಾಗಿದೆ. ವೀರಶೈವ ಧರ್ಮದಲ್ಲಿ ಮಹತ್ತರವಾದ ಕ್ರಾಂತಿಯನ್ನುಂಟು ಮಾಡಿದ ಬಸವಣ್ಣನವರು ಇವನ ಆಸ್ಥಾನದಲ್ಲಿ ಮಹಾಮಂತ್ರಿಯಾಗಿದ್ದರು. ಆದರೆ ಕೊನೆಗೆ ಕಲ್ಯಾಣದಲ್ಲಿ ನಡೆದ ಆಂತರಿಕ ಕಲಹದಿಂದ ಕಲಚೂರ್ಯರು ರಾಜಕೀಯವಾಗಿ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳಬೇಕಾಯಿತು.

ಕಟಚೂರಿಗಳು ಅಥವಾ ಕಲ ಚೂರಿಗಳು ಮೂಲತಃ ಬುಂದೇಲ ಖಂಡದ ಕಲಿಂಜರ (ಮಧ್ಯಭಾರತ)ದಲ್ಲಿ ಆಳುತ್ತಿದ್ದ ಕಲಚೂರಿ ವಂಶಸ್ಥರು ತಾವು ಯದು ಹಾಗೂ ಸಹಸ್ರಜಿತ್‌ನ ವಂಶಕ್ಕೆ ಸೇರಿದವರೆಂದು ಹೇಳಿಕೊಂಡಿರುವ ಇವರು ತಾವು ಹೈಹಯರೆಂದೂ ಚೇದಿ ಅರಸರೆಂದೂ ತಮ್ಮನ್ನು ಕರೆದುಕೊಂಡಿದ್ದಾರೆ. 'ಕಲಂಜರಿ ಪುರವರಾಧೀಶ್ವರ' ಎಂಬ ಬಿರುದನ್ನು ಹೊಂದಿರುವ ಇವರು ಕೊಂಕಣ, ಗುಜರಾತ್, ಮಾಳ್ವಗಳಲ್ಲಿ ಆಳುತ್ತಿದ್ದರು. ಕರ್ನಾಟಕದಲ್ಲಿ ತ್ರಿಪುರಿಯ ಕಲಚುರಿಗಳು ಬಾದಾಮಿಯ ಚಾಳುಕ್ಯರು, ರಾಷ್ಟ್ರಕೂಟರು ಹಾಗೂ ಕಲ್ಯಾಣದ ಚಾಳುಕ್ಯರ ಸಂಬಂಧಿಗಳಾಗಿದ್ದರು. ಇವರು ಶಿವೋಪಾಸಕರಾಗಿದ್ದರು. ಇವರನ್ನು ಶಾಸನಗಳಲ್ಲಿ 'ಮಹೇಶ್ವರ' ಎಂದು ಕರೆಯಲಾಗಿದೆ. 'ಸುವರ್ಣ ವೃಷಭ'ವು ಇವರ ಲಾಂಛನ.

ಕರ್ನಾಟಕಕ್ಕೆ ಬಂದು ನೆಲಸಿದ ಕಲಚೂರಿಗಳು ತಲಕಾಡು ನಾಡಿನ ಮಂಗಳವೇಡದಲ್ಲಿ ತಮ್ಮ ಆಳಿಕೆಯನ್ನಾರಂಭಿಸಿದರು. ಇವರೇ ಕರ್ನಾಟಕದ ಕಲಚೂರಿಗಳ ವಂಶಕ್ಕೆ ಮೂಲ ಪುರುಷರಾಗಿರಬೇಕು. ಅವರ ಇತಿಹಾಸ 'ಉಚಿತ'ನಿಂದ (ಕ್ರಿ.ಶ. 925) ಆರಂಭವಾಗುತ್ತದೆಯಾದರೂ 'ಜೋಗಮ'ನವರೆಗೂ ಅವರ ಬಗ್ಗೆ ಏನೂ ತಿಳಿಯುವುದಿಲ್ಲ. ಈ ಮಧ್ಯೆ ಬಿಜ್ಜರಸ, ಕನ್ನಮ ಮುಂತಾದವರು ಆಳಿದಂತೆ ಕಂಡು ಬರುತ್ತದೆ. ಕಲಚೂರಿಗಳಿಗೆ ಉನ್ನತ ಸ್ಥಾನ ದೊರಕಿದುದು ಜೋಗಮನ ಕಾಲದಲ್ಲಿ.

ಜೋಗಮ ಕಲ್ಯಾಣದ ಚಾಲುಕ್ಯರ ಸಾಮಂತನಾಗಿದ್ದು ಅವರ ರಾಜ್ಯ ವಿಸ್ತರಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದನು. ಇವನು ತನ್ನ ಮಗಳಾದ ಸಾವಳ ದೇವಿಯನ್ನು ಆರನೆಯ ವಿಕ್ರಮಾದಿತ್ಯನಿಗೆ ಧಾರೆಯೆರೆದುಕೊಟ್ಟು ತಾನು ಅವನ ಸಾಮಂತನಾಗಿ ಉಳಿದ. ಅವನ ಮಗನೇ ಪೆರ್ಮಾಡಿ ವಿಕ್ರಮಾದಿತ್ಯನು ತನ್ನ ಎರಡನೆಯ ರಾಣಿ ಚಂಡಲದೇವಿಯ ಮಗಳನ್ನು ಪೆರ್ಮಾಡಿಗೆ ಕೊಟ್ಟಿದ್ದನು. ಇವರ ಮಗನೇ ಬಿಜ್ಜಳ. ಪೆರ್ಮಾಡಿ ಕಲ್ಯಾಣದ ಚಾಲುಕ್ಯ ಅರಸ ಮೂರನೆಯ ಸೋಮೇಶ್ವರನ ದೌರ್ಬಲ್ಯವನ್ನು ಉಪಯೋಗಿಸಿಕೊಂಡು ಸ್ವತಂತ್ರನಾಗಲು ಹವಣಿಸಿದ್ದುಂಟು. ಆದರೆ ಅವನ ಕನಸು ಅವನ ಮಗ ಬಿಜ್ಜಳನಲ್ಲಿ ನನಸಾಯಿತು.

ಬಿಜ್ಜಳ : ಈ ವಂಶದ ಗಣ್ಯ ಅರಸನಾದ ಬಿಜ್ಜಳನು ಕಲ್ಯಾಣದಲ್ಲಿ ಸಾಮ್ರಾಟನಾಗಿ ವಂಶದ ಖ್ಯಾತಿಗೆ ಕಾರಣನಾದನು. ಖ್ಯಾತ ಧಾರ್ಮಿಕ ಪ್ರವರ್ತಕರಾದ ಬಸವಣ್ಣನವರು ಈತನಲ್ಲಿ ಭಂಡಾರದ ಅಧಿಕಾರಿಗಳಾಗಿದ್ದರು.

ತೈಲನು ಕಾಕತೀಯ ಪ್ರೋಲನ ಕೈಯ್ಯಲ್ಲಿ ಪರಾಜಿತನಾಗಿ ಬಂಧಿತನಾದ. ಸಂಧಿ ಸಾಧಿಸಿ ಈತನು ಕಲ್ಯಾಣವನ್ನು ಗೆದ್ದು ೧೧೫೭ರಲ್ಲಿ ಸ್ವತಂತ್ರನಾದಂತೆ ತೋರುತ್ತದೆ. 'ಹೂಲಿ' ಶಾಸನವು ಬಿಜ್ಜಳನನ್ನು 'ಮಹಾರಾಜಾಧಿರಾಜ' 'ಪರಮೇಶ್ವರ' ಎಂದೆಲ್ಲ ಕರೆದಿದೆ. ಬಿಜ್ಜಳ ಚಾಲುಕ್ಯ ಸಾಮ್ರಾಜ್ಯದ ಉತ್ತರಾಧಿಕಾರಿಯಾಗಿ 'ತ್ರಿಭುವನ ಮಲ್ಲ'; 'ಭುಜಬಲ ಚಕ್ರವರ್ತಿ', 'ಕಲಚೂರಿ ಚಕ್ರವರ್ತಿ' ಮುಂತಾದ ಪ್ರಶಸ್ತಿಗಳಿಸಿ ಸಾಮ್ರಾಟನೇ ಆದನು.

ಬಿಜ್ಜಳನು ಸಮರ್ಥ ಆಡಳಿತಗಾರ. ಎಲ್ಲ ಮಾಂಡಲಿಕರನ್ನು ತನ್ನ ಹತೋಟಿಯಲ್ಲಿಟ್ಟುಕೊಂಡು ಅನೇಕ ಸುಧಾರಣೆಗಳನ್ನು ತಂದನು. ಇವನ ಕಾಲದಲ್ಲಿ ವೀರಶೈವ ಧರ್ಮದ ಪುನರುಜ್ಜೀವನ ಕಾರ್ಯ ನಡೆಯಿತು. ಬಸವಣ್ಣನವರು ಈ ಕಾಲದಲ್ಲಿ ರಾಜಕೀಯ ಕ್ಷೇತ್ರದಲ್ಲಿ ಪ್ರಾಮುಖ್ಯಕ್ಕೆ ಬಂದರೂ ಧಾರ್ಮಿಕ ಕ್ಷೇತ್ರದಲ್ಲಿ ಪವಾಡವನ್ನೇ ನಡೆಸಿದರು. ಬಾಗೇವಾಡಿಯಲ್ಲಿ ಮಾದರಸ ಎಂಬ ದಂಪತಿಗಳಿಗೆ ಜನಿಸಿದ ಇವರು ಬಿಜ್ಜಳನ ಆ ಸ್ಥಾನದಲ್ಲಿ ಕರಣಿಕನ ಸ್ಥಾನದಿಂದ ಮಹಾ ಮಂತ್ರಿಯ ಸ್ಥಾನಕ್ಕೆ ಏರಿದರು. ಸಾಮಾಜಿಕ, ಧಾರ್ಮಿಕ ಕ್ಷೇತ್ರದಲ್ಲಿ ಸ್ವತಂತ್ರ ವಿಚಾರ ಕ್ರಾಂತಿ ನಡೆಸಿದರು. ಸಾಹಿತ್ಯ ಮತ್ತು ಜನಸಾಮಾನ್ಯರ ಬದುಕಿನಲ್ಲಿ ನವಚೇತನವನ್ನು ತುಂಬಿದರು. ಬಸವಣ್ಣನವರ ವ್ಯಕ್ತಿತ್ವದಿಂದ ಆಕರ್ಷಿತರಾದ ಭಕ್ತಾದಿಗಳು ಭಾರತದ ಅನೇಕ ಭಾಗಗಳಿಂದ ಕಲ್ಯಾಣಕ್ಕೆ ಆಗಮಿಸಿದರು. ಜನಪ್ರಿಯವಾಗುತ್ತಿದ್ದ ಅವರ ವ್ಯಕ್ತಿತ್ವದ ಬಗ್ಗೆ ಕೆಲವರು ಅಸೂಯೆಗೊಂಡು, ಅಂತರ್ಜಾತೀಯ ವಿವಾಹ ನಡೆಸಿದರೆಂದು ಅವರನ್ನು ದೂರಿದರು. ಪ್ರಜೆಗಳಲ್ಲಿ ಅಧಿಕಗೊಳ್ಳುತ್ತಿದ್ದ ಅವರ ಜನ ಪ್ರಿಯತೆಯನ್ನು ನೋಡಿ ಹೆದರಿದ ಬಿಜ್ಜಳ ಆಗ್ರಹಗೊಂಡ. ಇದರಿಂದ ಖಿನ್ನ ಮಾನಸ್ಕರಾದ ಬಸವಣ್ಣನವರು ಅಧಿಕಾರ ತ್ಯಜಿಸಿ ಕಪ್ಪಡಿ ಅಥವಾ ಕೂಡಲ ಸಂಗಮ ಸೇರಿದರು. ಕೊನೆಗೆ ಅಲ್ಲಿನ ಸಂಗಮೇಶ್ವರನಲ್ಲಿ (ಕ್ರಿ.ಶ. 1167ರಲ್ಲಿ) ಐಕ್ಯವಾದರು ಎಂದು ಹೇಳಲಾಗಿದೆ. ಇದಾದ ನಂತರ ರಾಜನ ಬೆಂಬಲಿಗರಿಗೂ ಮತ್ತು ಶಿವ ಭಕ್ತರಿಗೂ ನಡುವೆ ರಕ್ತ ಕ್ರಾಂತಿಯಾಯಿತು. ಕ್ರಾಂತಿಯಲ್ಲಿ ಬಿಜ್ಜಳ ಕೊಲ್ಲಲ್ಪಟ್ಟನೆಂದು ಪುರಾಣಗಳು, ಸಾಹಿತ್ಯ ತಿಳಿಸುತ್ತವೆಯಾದರೂ ಇದರಲ್ಲಿ ಸತ್ಯಾಂಶಕಾಣದು.

ಬಿಜ್ಜಳನಿಗೆ, ಸೋಮೇಶ್ವರ, ಸಂಕಮ, ಆಹವ ಮಲ್ಲ, ಸಿಂಘಣ ಎಂಬ ನಾಲ್ಕು ಮಂದಿ ಗಂಡು ಮಕ್ಕಳೂ ಇಬ್ಬರು ಕನ್ನೆಯರೂ ಇದ್ದರು. ಇವನ ಮೊದಲ ಮಗ ಸೋಮೇಶ್ವರನ ನಂತರ ಕ್ರಮವಾಗಿ ಮೂವರು ತಮ್ಮಂದಿರೂ ರಾಜ್ಯವಾಳಿದರು. ೧೧೮೪ರ ಸುಮಾರಿಗೆ ಕಲ್ಯಾಣದ ಚಾಲುಕ್ಯರ ಕೊನೆಯ ಅರಸ ನಾಲ್ಕನೆಯ ಸೋಮೇಶ್ವರನು ಕಲಚೂರ್ಯರಿಂದ ಸಿಂಹಾಸನವನ್ನು ಕಿತ್ತುಕೊಂಡನು. ಆದರೆ ಇವನು ಆಳಿದ್ದು ಕೇವಲ ಆರು ವರ್ಷಗಳ ಕಾಲ. ಅಷ್ಟರಲ್ಲಿ ಏಳಿಗೆಗೆ ಬಂದ ದೇವಗಿರಿಯ ಸೇವುಣರೂ, ದ್ವಾರಸಮುದ್ರದ ಹೊಯ್ಸಳರೂ ಪ್ರಬಲರಾದಂತೆ ಕಲಚೂರಿ ವಂಶ ೧೧೮೮ರ ಹೊತ್ತಿಗೆ ಅಳಿದು ಹೋಯಿತು.

ಕಲಚೂರಿಗಳ ಆಳ್ವಿಕೆ ಕೇವಲ ಕಾಲು ಶತಮಾನದ್ದಾದರೂ, ಕರ್ನಾಟಕದ ಹಾಗೂ ದಕ್ಷಿಣ ಭಾರತದ ಇತಿಹಾಸದಲ್ಲಿ ಮಹತ್ವಪೂರ್ಣದ್ದಾಗಿದೆ. ವೀರಶೈವರ ಪುನರುದ್ಧಾರ, ವಚನ ಸಾಹಿತ್ಯದ ಸೃಜನೆ ಈ ಕಾಲದಲ್ಲಾಯಿತು. ಇದು ಕನ್ನಡನಾಡಿಗೆ ಕಲಚೂರಿಗಳಿಂದ ಸಂದ ಅಪೂರ್ವ ಕಾಣಿಕೆಯೆಂದು ಹೇಳಬಹುದು.

**ದೇವಗಿರಿಯ ಸೇವುಣರು (ಯಾದವರು)**

ಸೇವುಣರು ಅಥವಾ ದೇವಗಿರಿಯ (ಇಂದಿನ ಮಹಾರಾಷ್ಟ್ರದಲ್ಲಿರುವ ದೌಲತಾಬಾದ್) ಯಾದವರು ಮೊದಮೊದಲಿಗೆ ರಾಷ್ಟ್ರಕೂಟರ ಮತ್ತು ಕಲ್ಯಾಣ ಚಾಲುಕ್ಯರ ಮಾಂಡಲಿಕರು. ೧೨ನೆಯ ಶತಮಾನದ ಅಂತ್ಯದಲ್ಲಿ ಅವರು ಸ್ವಂತಂತ್ರ ಪ್ರಭುತ್ವ ಪಡೆದರು. ೧೪ನೆಯ ಶತಮಾನದ ಆದಿಯವರೆಗೆ ಆಳಿದರು. ಸುಮಾರು ಮೂರು ಶತಮಾನಗಳ ಇವರ ಅಸ್ತಿತ್ವ ದೆಹಲಿ ಸುಲ್ತಾನ ಸಾಮ್ರಾಜ್ಯ ದಕ್ಷಿಣ ಭಾರತದ ಕಡೆ ವಿಸ್ತರಿಸದಂತೆ ಪ್ರತಿಬಂಧಕ ಶಕ್ತಿಯಾಗಿದ್ದಿತು.

'ಚತು ವರ್ಗ ಚಿಂತಾ ಮಣಿ' ಸಂಸ್ಕೃತದ ಗ್ರಂಥದ ಕರ್ತೃ ಹೇಮಾದ್ರಿ ಪಂಡಿತನ ಪ್ರಕಾರ ಸೇವುಣರು ಮೂಲತಃ ಮಥುರಾದವರು. ಅನಂತರ ದ್ವಾರಕಾದಲ್ಲಿ ನೆಲಸಿದ್ದು ನಂತರ ದಕ್ಷಿಣ ದೇಶಕ್ಕೆ ಬಂದರು. ಅವರ ದಾಖಲೆಗಳು ಅವರನ್ನು 'ದ್ವಾರವತೀ ಪುರವರಾಧೀಶ್ವರ' ಅಥವಾ ದ್ವಾರಕಾದ ಒಡೆಯರೆಂದು ಕರೆಯುತ್ತವೆ. ಇವರ ಮೂಲ ಪುರುಷನಾದ ದೃಢಪ್ರಹರ ದ್ವಾರಕಾದ ಅರಸು ಸುಬಾಹುವಿನ ಎರಡನೆಯ ಮಗನೆಂದು ಹೇಳಲಾಗಿದೆ. ಅವನು ಶ್ರೀನಗರದಿಂದ ಆಡಳಿತ ನಡೆಸುತ್ತಿದ್ದ ಅವನ ಮಗ ಸೇವುಣಚಂದ್ರನಿಂದ ಈ ವಂಶಕ್ಕೆ ಹೆಸರು ಬಂದಿದ್ದು. 'ಸದ್ಗುಣ' ಎಂಬ ಸಂಸ್ಕೃತ ಶಬ್ದದ ಪ್ರಾಕೃತರೂಪ 'ಸೇ ಉಣ' ಇರಬೇಕೆಂದು ಡಾ। ಶ್ರೀನಿವಾಸ್ ರಿತ್ತಿಯವರು ಅಭಿಪ್ರಾಯಪಡುತ್ತಾರೆ.

ಆರ್. ಜಿ. ಭಂಡಾರ್ಕರ್ ಮುಂತಾದವರ ವಾದದ ಪ್ರಕಾರ ಸೇವುಣರು ಮರಾಠಿಗರು ನಾಸಿಕ್ ಮತ್ತು ಅಹಮದ್ ನಗರ್ ಜಿಲ್ಲೆಗಳಲ್ಲಿ ಅವರು ತಮ್ಮ ರಾಜಕೀಯ ಚಟುವಟಿಕೆಗಳನ್ನು ಆರಂಭಿಸಿದ ರೆಂಬುದೇ ಅವರ ವಾದ. ಆದರೆ ಸೇವುಣ ದೇಶ ಎಂದು ಪರಿಚಿತವಾದ ನಾಸಿಕ ಅಹ್ಮದ್ ನಗರ ಪ್ರದೇಶಕ್ಕೆ ಸೇರಿದ ಸೇವುಣರು ಕನ್ನಡಿಗರೆಂದು ಭಾವಿಸಲು ಸಾಕಷ್ಟು ಆಧಾರಗಳಿವೆ. ಈ ಪ್ರದೇಶವು ಆ ಕಾಲದಲ್ಲಿ ಕನ್ನಡ ನೆಲವೇ ಆಗಿತ್ತೆಂಬ ಬಗೆಗೆ ಸಂದೇಹವಿಲ್ಲ. ಅವರ ಶಾಸನಗಳಲ್ಲಿ ಬಹು ಪಾಲು ಕನ್ನಡ ಶಾಸನಗಳೇ. ಕೆಲವೊಂದು ಕನ್ನಡ ಭಾಷೆ, ನಾಗರೀ ಲಿಪಿಯಲ್ಲಿ ಇವೆ. (ಅವರ ಯಾವ ಶಾಸನವೂ ಮರಾಠಿ ಭಾಷೆಯಲ್ಲಿ ಇಲ್ಲ. ಅವರ ಕೊನೆಯ ದಿನಗಳಲ್ಲಿ ಮಾತ್ರ ಕೆಲವು ಶಾಸನಗಳಲ್ಲಿ ಮರಾಠಿ ಪ್ರಾರ್ಥನಾ ಭಾಗಗಳಿವೆ) ಅವರ ಕೆಲವು ಆರಂಭದ ನಾಣ್ಯಗಳಲ್ಲಿ ಕನ್ನಡ ಬರಹಗಳನ್ನೇ ಕೆತ್ತಿರುವರೆಂದು ಡಾ. ಓ. ಪಿ. ವರ್ಮ ಹೇಳಿದ್ದಾರೆ. ಇದರಿಂದ ಕನ್ನಡವೇ ಅವರ ಆಡಳಿತ ಭಾಷೆಯಾಗಿತ್ತೆಂದು ತಿಳಿಯಬಹುದು.

ಚಾಲುಕ್ಯ ಸಾಮ್ರಾಜ್ಯ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಸೇವುಣರು ಅವರ ಸಾಮಂತ ರಾಗಿದ್ದರು. ಮುಂದೆ ಕಳಚೂರ್ಯ ವಂಶದ ಬಿಜ್ಜಳ ಮತ್ತು ಅವನ ಮಕ್ಕಳ ಅನಂತರ ತಾವೇ ಕರ್ನಾಟಕಕ್ಕೆ ಸಾರ್ವಭೌಮರಾಗುವ ಪ್ರಯತ್ನಗಳನ್ನು ಕೈಕೊಂಡರು. ಆದರೆ ಈ ವೇಳೆಗಾಗಲೇ ದಕ್ಷಿಣದಲ್ಲಿ ಪ್ರಬಲರಾಗುತ್ತಿದ್ದ ಹೊಯ್ಸಳರು ಇದಕ್ಕೆ ಪ್ರಬಲ ವಿರೋಧಿಗಳಾಗಿ ಅದನ್ನು ತಡೆದರು. ಈ ಎರಡು ವಂಶಗಳಿಗೂ ನಿರಂತರವಾಗಿ ಸ್ಪರ್ಧೆ ಮತ್ತು ಅದರ ಪರಿಣಾಮವಾಗಿ ನಡೆಯುತ್ತಿದ್ದ ಯುದ್ಧಗಳು ದೇಶವನ್ನು ಒಂದು ರೀತಿಯಲ್ಲಿ ದುರ್ಬಲಗೊಳಿಸಲು ಕಾರಣವಾದುವು. ಮುಂದೆ ಮುಸ್ಲಿಮರ ಧಾಳಿಗೆ ಇದು ಅನುಕೂಲಕರವಾಗಿ ಪರಿಣಮಿಸಿತು.

ಚಾಲುಕ್ಯ ವಂಶದ ಕೊನೆಯ ದೊರೆ ನಾಲ್ಕನೇ ಸೋಮೇಶ್ವರನನ್ನು ಭಿಲ್ಲಮನು ಸೋಲಿಸಿದ ಘಟನೆಯಿಂದ ಈ ವಂಶದ ಪ್ರಭಾವ ಪ್ರಬಲವಾಗಲು ಕಾರಣವಾಯಿತು. ಭಿಲ್ಲಮನ ನಂತರ (೧೧೭೩ - ೧೧೯೨) ಜೈತುಗಿ ( ೧೧೯೨ -೧೨೦೦) ಸಿಂಘಣ ೧೨೦೦-೧೨೪೭) ಇವರು ರಾಜರಾಗಿ ಸೇವುಣ ರಾಜ್ಯವನ್ನು ವಿಸ್ತರಿಸಲು ಕಾರಣರಾದರು. ಈ ಮೂವರೂ ಈ ವಂಶದ ಪ್ರಸಿದ್ಧ ದೊರೆಗಳು. ದಕ್ಷಿಣ ದಲ್ಲಿ ಹೊಯ್ಸಳರೊಡನೆ ಅನೇಕ ಯುದ್ಧಗಳನ್ನು ನಡೆಸಿದರು. ಅವರನ್ನು ಹಿಮ್ಮೆಟ್ಟಿಸುವುದರಲ್ಲಿ ವಿಫಲರಾದರೂ ಸಹ ತಮ್ಮ ರಾಜ್ಯವನ್ನು ಸುಭದ್ರಗೊಳಿಸುವುದರಲ್ಲಿ ಯಶಸ್ವಿಗಳಾದರು. ಈ ರಾಜರುಗಳ ದಕ್ಷ ನೇತೃತ್ವದಲ್ಲಿ ಉತ್ತರ ಭಾರತದ ಕಡೆಗೂ ಸೇವುಣರ ಸೈನ್ಯ ನುಗ್ಗಿ ತನ್ನ ಪರಾಕ್ರಮವನ್ನು ಪ್ರಕಟಿಸುವಂತಾಯಿತು.

ಸಿಂಘಣನ ನಂತರ ಕೃಷ್ಣ (೧೨೪೭-೧೨೬೧) ಮಹಾದೇವ (೧೨೬೧-೧೨೭೦) ರಾಮಚಂದ್ರ (೧೨೭೧-೧೩೧೨) ಇವರು ಕ್ರಮವಾಗಿ ಆಳಿದರು. ಅನಂತರ ಈ ವಂಶದ ಪ್ರಭಾವ ಇಳಿಮುಖವಾಗಿ ಬಹುಶಃ ೧೩೧೮ರ ವೇಳೆಗೆ ಕೊನೆಗೊಂಡಿತೆಂದು ಹೇಳಬಹುದು.

**ಆಡಳಿತಕ್ರಮ :** ಅವರ ಬಗ್ಗೆ ಮಾಹಿತಿ ನೀಡಬಲ್ಲ ಸು. ೪೫೦ ಶಾಸನಗಳು ದೊರೆತಿದ್ದರೂ ಆಡಳಿತ ಕುರಿತು ಹೇಳುವುವು ಕೆಲವು ಮಾತ್ರ. ಅರಸನಿಗೆ ರಾಜ್ಯಾಡಳಿತದಲ್ಲಿ ನಿಕಟವರ್ತಿಯಾದ ಅಂಗವೆಂದರೆ ಮಂತ್ರಿ ಮಂಡಲ. ರಾಜ್ಯ ವಿಸ್ತಾರಕ್ಕೆ ತಕ್ಕಂತೆ ಮಂತ್ರಿಗಳ ಸಂಖ್ಯೆಯು ನಿಗದಿಯಾಗುತ್ತಿದ್ದಿತು.

ಸೇವುಣರ ರಾಜ್ಯ ವಿಷಯ, ಮಂಡಲ ನಾಡು, ದೇಶ, ಕಂಪಣ ಎಂಬ ಭಾಗಗಳಿಂದ ಕೂಡಿದ್ದಿತು. ವಿಷಯ, ರಾಜ್ಯಗಳು ದೊಡ್ಡ ಭೌಗೋಳಿಕ ವಿಭಾಗಗಳಾಗಿದ್ದು 'ಸರ್ವಾಧಿಕಾರಿಗಳು' ಎಂಬ ಉನ್ನತ ಅಧಿಕಾರಿಗಳ ಅಧೀನದಲ್ಲಿದ್ದಂತೆ ಕಂಡು ಬರುತ್ತದೆ. ರಾಜ್ಯದ ಬೊಕ್ಕಸಕ್ಕೆ ಸಂದಾಯ ವಾಗುತ್ತಿದ್ದ ಭೂಕಂದಾಯವನ್ನು 'ಸಿದ್ದಾಯ'ವೆಂದು ಕರೆಯುತ್ತಿದ್ದರು.

**ಧರ್ಮ :** ಆಶ್ರಮ ಧರ್ಮಗಳು ಪ್ರಚಾರದಲ್ಲಿದ್ದುವು. ಬ್ರಹ್ಮ ಯಜ್ಞ ಶ್ರಾದ್ಧ ಇತ್ಯಾದಿ ಧಾರ್ಮಿಕ ವಿಧಿಗಳು ಆಚರಣೆಯಲ್ಲಿದ್ದವು. ಶೈವ ಮತ್ತು ವೈಷ್ಣವ ಧರ್ಮಗಳು ಪ್ರಮುಖ ಧರ್ಮಗಳಾಗಿದ್ದರೂ 'ಕಾಳಾಮುಖ' ಶೈವರ ಪ್ರಭಾವ ಹೆಚ್ಚಿದ್ದಿತು. ಈ ಕಾಲದಲ್ಲಿ 'ಮಹಾನುಭಾವ' ಎಂಬ ಪಂಥ ವೈಷ್ಣವರಲ್ಲಿ ಹುಟ್ಟಿಕೊಂಡಿತು. ಅವರ ಪ್ರಥಮ ಪ್ರವರ್ತಕ ಚಕ್ರಧರ. ಪಂಢರಪುರದ ವಿಠಲ ಪಂಥವು ಸೇವೆ ಸಿಂಘಣನ ಕಾಲದಲ್ಲಿ ಬೆಳೆಯಿತು. ಜ್ಞಾನ ದೇವನು ಈ ಪಂಥದವರ ಪೈಕಿ ಪ್ರಮುಖನಾಗಿದ್ದನು.

**'ಶಿಕ್ಷಣ':** ಸೇವುಣ ಅರಸರು ವಿದ್ಯಾಪಕ್ಷ ಪಾತಿಗಳಾಗಿದ್ದು ಅದರ ಊರ್ಜಿತಕ್ಕಾಗಿ ವಿಶೇಷ ಪ್ರೋತ್ಸಾಹ ನೀಡಿದ್ದರು. ಸಂಸ್ಕೃತ, ಮರಾಠಿ, ಮತ್ತು ಕನ್ನಡ ಸಾಹಿತ್ಯ ವಿಶೇಷವಾಗಿ ಬೆಳೆಯಿತು. ಅಗ್ರಹಾರ, ಬ್ರಹ್ಮಪುರ, ಘಟಿಕಾಸ್ಥಾನ ಮತ್ತು ಮಠಗಳು ವಿದ್ಯಾ ಕೇಂದ್ರಗಳಾಗಿದ್ದುವು. ಅಗ್ರಹಾರಗಳಿಗೆ ದಾನ ನೀಡಿದರೆ ಪುಣ್ಯಬರುವುದೆಂಬ ನಂಬಿಕೆ ಇದ್ದಿತು. ಅಗ್ರಹಾರಗಳಲ್ಲಿ ನೆಲಸಿದ ಬ್ರಾಹ್ಮಣರು ವಿದ್ಯಾರ್ಜನೆಗಾಗಿ ಶ್ರಮಿಸುತ್ತಿದ್ದರು. ಅರ್ಹ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿದ್ದರು. ಸಿಂಘಣನ ಕಾಲದಲ್ಲಿ ಜ್ಯೋತಿಷ್ಯ ವಿದ್ಯೆಯನ್ನು ಕಲಿಸಲು ಪ್ರತ್ಯೇಕವಾದ ಮಠವಿದ್ದಿತು. ಇದರ ಸ್ಥಾಪಕ ಖ್ಯಾತ ಜ್ಯೋತಿಷಿ ಚಂಗ ದೇವ

**ಸಾಹಿತ್ಯ :** ಈ ಕಾಲದಲ್ಲಿ ಸಂಸ್ಕೃತ ಮರಾಠಿ ಮತ್ತು ಕನ್ನಡ ಸಾಹಿತ್ಯದಲ್ಲಿ ಗಮನಾರ್ಹ ಪ್ರಗತಿಯಾಯಿತು. ಸಂಸ್ಕೃತ ಬರಹಗಾರರಲ್ಲಿ ಹೇಮಾದ್ರಿಯೇ ಪಂಡಿತ; 'ಚತುರ್ವರ್ಗ ಚಿಂತಾಮಣಿ' ಇವನ ಅಮೋಘ ಕೃತಿ. ಪೋಪ ದೇವನು 'ಮುಕ್ತಾ ಫಲ' ದಟೀಕಾ 'ಕೈವಲ್ಯ ದೀಪಿಕಾ' ಗ್ರಂಥವನ್ನೂ, ವಾಗ್ಭಟನ 'ಅಷ್ಟಾಂಗ ಹೃದಯ'ದ ಮೇಲೆ 'ಆಯುರ್ವೇದ ರಸಾಯನ' ಎನ್ನುವ ಟೀಕಾ ಗ್ರಂಥವನ್ನೂ ಬರೆದಿದ್ದಾನೆ. ಸೇವುಣ ಕೃಷ್ಣನ ಆಸ್ಥಾನದಲ್ಲಿ ಆಶ್ರಯ ಪಡೆದಿದ್ದ ಅಮಲಾನಂದನು

(ಪುಟ 19ಕ್ಕೆ)

# ರಾಜ್ಯೋತ್ಸವ ಪ್ರಶಸ್ತಿಗೆ ಪಾತ್ರವಾದ ಮೈಸೂರು ಅಸೋಸಿಯೇಶನ್

✍ ಡಾ. ಜಿ. ಎನ್. ಉಪಾಧ್ಯ

ಒಂದು ಸಂಸ್ಥೆಯನ್ನು ಆರಂಭಿಸುವುದೆಂದರೆ ಒಂದು ಸಂಸ್ಕೃತಿಯನ್ನು ವಿಸ್ತರಿಸುವುದೆಂದೇ ಅರ್ಥ. ಮುಂಬಯಿ ಒಂದು ವಾಣಿಜ್ಯ ಮಹಾನಗರ. ಇದು ಈ ರಾಷ್ಟ್ರದ ಆರ್ಥಿಕ ಆಗುಹೋಗುಗಳ ಕೇಂದ್ರ ಬಿಂದುವೂ ಹೌದು. ಈ ವಾಣಿಜ್ಯ ಮಹಾನಗರದಲ್ಲಿಯ ಕನ್ನಡ ಸಂಸ್ಕೃತಿಗೆ ತನ್ನದೇ ಆದ ಒಂದು ಚಾರಿತ್ರಿಕ ಮಹತ್ವವಿದೆ. ಕನ್ನಡಿಗರು ತಮ್ಮ ಸಾಂಸ್ಕೃತಿಕ ಅಸ್ಮಿತೆಯನ್ನು ಉಳಿಸಿಬೆಳೆಸಲು ಇಲ್ಲಿ ನಿರಂತರವಾಗಿ ಶ್ರಮಿಸುತ್ತಿರುವುದು ಶ್ಲಾಘನೀಯ ಅಂಶ.

ಮುಂಬಯಿಯಲ್ಲಿ ಕನ್ನಡವನ್ನು, ಕನ್ನಡ ಸಂಸ್ಕೃತಿಯನ್ನು ಪ್ರಾಮಾಣಿಕವಾಗಿ ಮುನ್ನಡೆಸುತ್ತಿರುವ ಪ್ರಮುಖ ಸಂಸ್ಥೆಗಳಲ್ಲಿ ಮೈಸೂರು ಅಸೋಸಿಯೇಶನ್‌ನದು ದೊಡ್ಡ ಹೆಸರು. ಕಳೆದ ಏಳು ದಶಕಗಳಲ್ಲಿ ಹಂತ ಹಂತವಾಗಿ ಅದು ಏರಿದ ಎತ್ತರ, ಗೈದ ಸಾಧನೆ ಇತರ ಸಂಸ್ಥೆಗಳಿಗೆ ಅನುಕರಣೀಯ ಅಂಶ. ಕರ್ನಾಟಕ ಸರಕಾರ ಕೊಡಮಾಡುವ ಪ್ರತಿಷ್ಠಿತ ರಾಜ್ಯೋತ್ಸವ ಪ್ರಶಸ್ತಿ ಈ ಬಾರಿ ಕನ್ನಡಿಗರ ಹೆಮ್ಮೆಯ ಸಂಸ್ಥೆಯಾದ ಮೈಸೂರು ಅಸೋಸಿಯೇಶನ್‌ಗೆ ಸಂದಿದೆ. ಶ್ರೇಷ್ಠ, ಸಕ್ರಿಯ ಹೊರನಾಡ ಕನ್ನಡ ಸಂಸ್ಥೆ ಎಂಬ ಕೀರ್ತಿಗೆ ಈ ಮೂಲಕ ಅದು ಭಾಜನವಾಗಿದೆ. ಮುಂದಿನ ವರ್ಷ ಅಮೃತ ಮಹೋತ್ಸವವನ್ನು ಆಚರಿಸಲಿರುವ ಈ ಸಂಸ್ಥೆಯ ಉತ್ಸಾಹವನ್ನು ಪ್ರಸ್ತುತ ಪುರಸ್ಕಾರ ಮತ್ತಷ್ಟು ಹೆಚ್ಚಿಸಿದೆ.

ಇವತ್ತು ಮುಂಬಯಿ ಮಹಾನಗರದ ಹೃದಯ ಭಾಗದಲ್ಲಿ, ಕಿಂಗ್ ಸರ್ಕಲ್ ಸಮೀಪದ ಭಾವುದಾಜಿ ರಸ್ತೆಯಲ್ಲಿ ತನ್ನದೇ ಆದ ನಿವೇಶನ, ಭವ್ಯ ಕಟ್ಟಡ, ಸುಸಜ್ಜಿತ ರಂಗಮಂದಿರ, ಗ್ರಂಥಾಲಯ, ಒಳಾಂಗಣ ಕ್ರೀಡಾ ಸೌಲಭ್ಯ ಮೊದಲಾದ ಆಧುನಿಕ ಸೌಕರ್ಯಗಳೊಂದಿಗೆ ಈ ಸಂಸ್ಥೆ ಕನ್ನಡಿಗರನ್ನು ತನ್ನೆಡೆಗೆ ಆಕರ್ಷಿಸುತ್ತಿದೆ. ಈ ಸಂಸ್ಥೆಯ ಇತಿಹಾಸದ ಪುಟಗಳನ್ನು ಮಗುಚುತ್ತಾ ಹೋದರೆ ಅದೊಂದು ರೋಚಕ ಅನುಭವ. ಅಲ್ಲಿ ಎರಡು-ಮೂರು ತಲೆಮಾರುಗಳ ನೋವು ನಲಿವುಗಳ ಪರಿಚಯ ನಮಗಾಗುತ್ತದೆ. ನಾಲ್ಕು ಮಂದಿ ಸೇರಿ ಸಾಂಘಿಕ ಮನೋಭಾವದಿಂದ ದುಡಿದರೆ ಏನನ್ನೂ ಮಾಡಬಹುದು ಎಂಬುದಕ್ಕೆ ಮೈಸೂರು ಅಸೋಸಿಯೇಶನ್ ಒಂದು ಉತ್ತಮ ನಿದರ್ಶನ.

ಮೈಸೂರಿನಿಂದ ವಿವಿಧ ಕಾರಣಗಳಿಗಾಗಿ ಮುಂಬಯಿಗೆ ಬಂದ ಕೆಲವು ಆಸಕ್ತ ಮಿತ್ರರೆಲ್ಲ ಸೇರಿ 1926ರಲ್ಲಿ ಈ ಸಂಸ್ಥೆಗೆ ನಾಂದಿ ಹಾಡಿದರು. ಮಾತುಂಗ ರೈಲ್ವೆ ನಿಲ್ದಾಣದ ಬಳಿಯ ಬಾಡಿಗೆ ಮನೆಯೊಂದರಲ್ಲಿ ಈ ಸಂಸ್ಥೆ ಕಾರ್ಯಾರಂಭ ಮಾಡಿತು. ಕ್ರಮೇಣ ಮುಂಬಯಿಗೆ ನೌಕರಿ ಹುಡುಕಿಕೊಂಡು ಬಂದವರಿಗೆ, ಮನೆಯಿಂದ ದೂರವಿದ್ದವರಿಗೆ ಆಪ್ತವಾದ ಸ್ಥಳವಾಗಿ ಬೆಳೆಯತೊಡಗಿತು. ಮೊದಮೊದಲು ಆಟ, ಊಟ, ವಾರ್ಷಿಕೋತ್ಸವಗಳಿಗೆ ಸೀಮಿತವಾಗಿದ್ದ ಕಾರ್ಯಕ್ರಮಗಳು ಸದಸ್ಯತ್ವ ಬೆಳೆದಂತೆ ವೈವಿಧ್ಯಮಯವಾಗಿ ರೂಪುಗೊಂಡವು.

1934ರಲ್ಲಿ ಮುಂಬಯಿ ಮಹಾನಗರ ಪಾಲಿಕೆಯಿಂದ ಒಂದು ನಿವೇಶನವನ್ನು ಪಡೆದುಕೊಳ್ಳುವಲ್ಲಿ ಈ ಸಂಸ್ಥೆ ಯಶಸ್ಸು ಕಂಡಿತು. ಸ್ವಂತ ಜಾಗವೇನೋ ಸಿಕ್ಕಿತು. ಆದರೆ ಕಟ್ಟಡ ಕಟ್ಟಲು ಹಣವೆಲ್ಲಿಂದ ತರುವುದು? ಆ ದಿನಗಳು ಈಗಿನಂತಿರಲಿಲ್ಲ, ಆಣೆ. ಪಾವಾಣೆಗೆ ಬೆಲೆಯಿದ್ದ ಸಂದರ್ಭ. ಹಾಗೆಂದು ಸದಸ್ಯರು ಕೈ ಕಟ್ಟಿ ಕುಳಿತುಕೊಳ್ಳುವಂತಿರಲಿಲ್ಲ. ಧನ ಸಂಗ್ರಹ ಯುದ್ಧ ಆರಂಭವಾಯಿತು. ದಾನಿಗಳ ಮನ ಕರಗಿತು. 1935ರಲ್ಲಿ ಇಂದಿನ ಮೈಸೂರು ಅಸೋಸಿಯೇಶನ್ ಕಟ್ಟಡಕ್ಕೆ ಕೆಸರ್ಗಲ್ಲು ಹಾಕಲಾಯಿತು. ವಾಣಿ ವಿಲಾಸ ಮೆಮೋರಿಯಲ್ ಹಾಲ್ ನಿರ್ಮಾಣವಾಯಿತು. ಕ್ರಮೇಣ ಸಂಸ್ಥೆಯ ಜನಬಲ ಧನಬಲ ಹೆಚ್ಚಿತು. 1940-41ರಲ್ಲಿ ಈ ಕಟ್ಟಡದ ಮೊದಲ ಮಹಡಿ ಸಿದ್ಧವಾಯಿತು. 90ರ ದಶಕ ಮೈಸೂರು ಅಸೋಸಿಯೇಷನ್‌ನ ಇತಿಹಾಸದಲ್ಲಿ ಒಂದು ಪರ್ವಕಾಲ. ಇಂದಿನ ಬಹುಮಹಡಿಯ ಭವ್ಯ ಕಟ್ಟಡ ತಲೆಯೆತ್ತಿ ನಿಂತದ್ದು ಈ ಹಂತದಲ್ಲೇ. ಸಂಪೂರ್ಣ ವಾತಾನುಕೂಲಿಯಾದ 300 ಆಸನಗಳುಳ್ಳ ಅಚ್ಚುಕಟ್ಟಾದ ಸಭಾಗೃಹ ಮುಂಬಯಿ ಕನ್ನಡಿಗರ ಹೆಮ್ಮೆಯ ಪ್ರತೀಕ.

ಮೈಸೂರು ಅಸೋಸಿಯೇಷನ್ ಸಂಗೀತ, ನಾಟಕ, ಕ್ರೀಡೆ, ಸಾಹಿತ್ಯ, ಧಾರ್ಮಿಕ, ಲಲಿತ ಕಲೆ, ಶಿಕ್ಷಣ ಹೀಗೆ ಹತ್ತಾರು ಕ್ಷೇತ್ರಗಳಿಗೆ ಗಣನೀಯವಾದ ಕೊಡುಗೆಯನ್ನು ನೀಡಿದೆ. ಕನ್ನಡ ಶಿಕ್ಷಣಕ್ಕೆ ಬೇಕಾದಷ್ಟು ಸವಲತ್ತನ್ನು ನೀಡಿದೆ; ನೀಡುತ್ತಿದೆ. ಎನ್.ಕೆ.ಇ.ಎಸ್. ಶಾಲೆಯ ಅಭಿವೃದ್ಧಿಯಲ್ಲಿ ಈ ಸಂಘದ್ದು ಸಿಂಹಪಾಲಿದೆ. ಕಾಲಕಾಲಕ್ಕೆ ಸಾಹಿತ್ಯ ಪರಿಚಾರಿಕೆ ಕಾರ್ಯಕ್ರಮಗಳನ್ನು ಅದು ನಡೆಸಿಕೊಂಡು ಬರುತ್ತಿದೆ. ಸಂಸ್ಥೆಯ ಬಂಗಾರ ಹಬ್ಬದ ನೆನಪಿಗೆ ಮುಂಬಯಿ ವಿಶ್ವವಿದ್ಯಾಲಯದಲ್ಲಿ ದತ್ತಿ ನಿಧಿಯೊಂದನ್ನು ಸ್ಥಾಪಿಸಿ ಕನ್ನಡ ವಿಭಾಗದ ಮೂಲಕ ಅರ್ಥಪೂರ್ಣ ಕಾರ್ಯಕ್ರಮಗಳನ್ನು ಮುಂಬಯಿ ಕನ್ನಡಿಗರಿಗೆ ಅದು ಉಣಬಡಿಸಿದೆ. ಈ ಮಾಲಿಕೆಯಲ್ಲಿ ಈಗಾಗಲೇ ಶಿವರಾಮ ಕಾರಂತ, ಕೀರ್ತಿನಾಥ ಕುರ್ತಕೋಟಿ, ಚಂದ್ರಶೇಖರ ಕಂಬಾರ, ಯು. ಆರ್. ಅನಂತ ಮೂರ್ತಿ, ಡಾ. ಎಂ. ಎಂ. ಕಲಬುರ್ಗಿ, ಸೂರ್ಯನಾಥ ಕಾಮತ್, ಡಾ. ಜಿ. ಎಸ್. ಶಿವರುದ್ರಪ್ಪ, ಡಾ. ಹಾ.ಮಾ.ನಾ. ಮೊದಲಾದವರು ತಮ್ಮ ವಿದ್ವತ್‌ಪೂರ್ಣ ಪ್ರಬಂಧಗಳನ್ನು ಮಂಡಿಸಿದ್ದಾರೆ. ಇದಲ್ಲದೆ ಕನ್ನಡ ಮರಾಠಿ ಸಂಬಂಧವನ್ನು ಬಲಗೊಳಿಸುವ ಅನೇಕ ಕೆಲಸಗಳನ್ನು ಇದು ಮಾಡಿದೆ. ಕನ್ನಡ ಮರಾಠಿ ಕಲಾತ್ಮಕ ಸಿನಿಮಾಗಳ ಪ್ರದರ್ಶನ, ಕನ್ನಡ ಮರಾಠಿ ಸಂತ ಸಾಹಿತ್ಯ ಸಂಗೀತ ಕಾರ್ಯಕ್ರಮಗಳನ್ನು ನಡೆಸಿ ಈ ಎರಡು ಸಂಸ್ಕೃತಿಗಳನ್ನು ಮತ್ತಷ್ಟು ಹತ್ತಿರ ತಂದಿದೆ. ಹೊರನಾಡು ಒಳನಾಡು ಎಂಬ ಭೇದವಿಲ್ಲದೆ ಪ್ರತಿಭಾವಂತ ಯುವ ಕಲಾವಿದರನ್ನು ಗುರುತಿಸಿ ಬೆಳಕಿಗೆ ತರುವ ಕೆಲಸವನ್ನು ಅಸೋಸಿಯೇಷನ್ ಸದ್ದಿಲ್ಲದೇ ನಡೆಸಿಕೊಂಡು ಬರುತ್ತಿದೆ.

ತನ್ನ ಚಟುವಟಿಕೆಯನ್ನು ತಿಳಿಸಲು, ಸದಸ್ಯರ ವಾಚನಾಭಿರುಚಿಯನ್ನು ಹೆಚ್ಚಿಸಲು ಮೈಸೂರು ಅಸೋಸಿಯೇಷನ್ ಕಳೆದೆರಡು ದಶಕಗಳಿಂದ ನೇಸರು ಎಂಬ ತಿಂಗಳೋಲೆಯನ್ನು ಪ್ರಕಟಿಸುತ್ತಿದೆ. ಸಾಹಿತ್ಯಕವಾಗಿ ಮೌಲಿಕವಾದ ಬರಹಗಳು ಇಲ್ಲಿ ಬೆಳಕು ಕಂಡಿವೆ ಎಂಬುದು ಗಮನಾರ್ಹ ಸಂಗತಿ. ಅನೇಕ ಯುವ ಲೇಖಕರನ್ನು ಲೋಕ ಮುಖಕ್ಕೆ ಪರಿಚಯಿಸಿದ್ದು ಈ ಪತ್ರಿಕೆಯ ಇನ್ನೊಂದು ಸಾಧನೆ.

### ಕನ್ನಡ ರಂಗಭೂಮಿಗೆ ಕಾಯಕಲ್ಪ

ಮುಂಬಯಿಯಲ್ಲಿ ಕನ್ನಡ ರಂಗಭೂಮಿಯನ್ನು ಜೀವಂತವಾಗಿಡುವಲ್ಲಿ ಮೈಸೂರು ಅಸೋಸಿಯೇಶನ್‌ನ ಮಿತ್ರರು ನಿರಂತರವಾಗಿ ಶ್ರಮಿಸುತ್ತಾ ಬಂದಿದ್ದಾರೆ. ಈ ಸಂಸ್ಥೆಯ ರಂಗಭೂಮಿಗೂ ಆರೇಳು

ದಶಕಗಳ ಸುದೀರ್ಘ ಇತಿಹಾಸವಿದೆ. ಕಟ್ಟಡ ನಿರ್ಮಾಣಕ್ಕೆ ಧನ ಸಂಗ್ರಹ ಮಾಡಲು ಅನೇಕ ನಾಟಕಗಳನ್ನು ಪ್ರದರ್ಶಿಸಿ ಜನಮನ್ನಣೆಗೆ ಪಾತ್ರರಾಗಿದ್ದಾರೆ. ಕನ್ನಡದ ಹಿರಿಯ ನಾಟಕಕಾರರಾದ ಟಿ.ಪಿ.ಕೈಲಾಸಂ, ಆರ್. ನಾಗೇಂದ್ರರಾವ್ ಮೊದಲಾದ ಹಿರಿಯರ ಮಾರ್ಗದರ್ಶನ, ಆಶೀರ್ವಾದವೂ ಈ ಸಂಸ್ಥೆಗೆ ದೊರಕಿದೆ ಎಂಬುದು ಉಲ್ಲೇಖನೀಯ ಅಂಶ. ನಾಟಕವೆಂದರೆ ಮೂಗುಮುರಿಯುತ್ತಿದ್ದ, ಅದು ಹೆಣ್ಣುಮಕ್ಕಳಿಗೆ ಹೇಳಿಸಿದ್ದಲ್ಲ ಎಂಬ ಅಭಿಪ್ರಾಯವಿದ್ದ ಕಾಲದಲ್ಲಿ ಈ ಸಂಘದ ಕಲಾವಿದೆಯರು ನಾಟಕಗಳಲ್ಲಿ ಭಾಗವಹಿಸಿ ಸೈ ಸೈ ಎನಿಸಿಕೊಂಡರಂತೆ. ಶಾರದಮ್ಮಾ ನಾರಾಯಣ ಸ್ವಾಮಿ, ಕುಂತಿ ದುಗ್ಗಪ್ಪಯ್ಯ, ಸೀತಮ್ಮಾ ರಾವ್, ಎಂ.ಆರ್.ಕೆ. ಮೂರ್ತಿ, ನಾರಾಯಣ ಸ್ವಾಮಿ, ಡಾ. ಮಂಜುನಾಥ ಮೊದಲಾದವರ ಸಾಧನೆ ಸಣ್ಣ ಪ್ರಮಾಣದ್ದೇನಲ್ಲ. ಬಾಡಿಗೆ ಕಟ್ಟಡದಲ್ಲಿ ಕಾರ್ಯ ಆರಂಭಿಸಿದ ಈ ಸಂಸ್ಥೆ ಇಂದು ಸಮೃದ್ಧವಾಗಿ ಬೆಳೆದುನಿಂತಿದೆ. ಅಮೃತ ಮಹೋತ್ಸವಕ್ಕೆ ಸಜ್ಜಾಗುತ್ತಿದೆ. ಈ ಸಂಸ್ಥೆಯ ಏಳ್ಗೆಗೆ ಶ್ರಮಿಸಿದ ಶ್ರಮ ಸಂಸ್ಕೃತಿಯ ವಿವರಗಳನ್ನು ಈಗಲಾದರೂ ಒಂದೆಡೆ ಕಲೆಹಾಕುವ ಕೆಲಸವನ್ನು ಮೈಸೂರು ಅಸೋಸಿಯೇಶನ್ ತುರ್ತಾಗಿ ಮಾಡಬೇಕು. ಇಲ್ಲವಾದಲ್ಲಿ

ಎಲೆಹೂವು ಮರ ಚಿಗುರು ಮಾತ್ರ ಪ್ರತ್ಯಕ್ಷ
ಅದನೆತ್ತಿ ನಿಲ್ಲಿಸಿದಾ ಬೇರು ಅದೃಶ್ಯ !

ಎಂಬ ಕವಿವಾಣಿಯಂತಾಗುತ್ತದೆ. ಮೂವತ್ತಕ್ಕಿಂತ ಹೆಚ್ಚು ನಾಟಕಗಳನ್ನು ಬರೆದು ಆಡಿಸಿ ಮುಂಬಯಿ ಕನ್ನಡ ರಂಗಭೂಮಿಯ ಚಟುವಟಿಕೆಯನ್ನು ತೀವ್ರಗೊಳಿಸಿದ ಇತಿಹಾಸ ಈ ಸಂಸ್ಥೆಗಿದೆ.

ಕೆಲವರಿಗಷ್ಟೇ ಸೀಮಿತವಾಗಿದ್ದ, ಮೈಸೂರು ಅಸೋಸಿಯೇಷನ್ ಇಂದು ಎಲ್ಲ ಕನ್ನಡಿಗರಿಗೂ ಸದಸ್ಯತ್ವದ ಅವಕಾಶ ಕಲ್ಪಿಸಿದೆ. ಒಂದು ಮನೆಯ ವಾತಾವರಣವನ್ನು ಈ ಸಂಸ್ಥೆ ಇಂದಿಗೂ ಉಳಿಸಿಕೊಂಡು ಬಂದಿದೆ. ಕೂಡಿ ದುಡಿದು ಹಂಚಿ ತಿನ್ನುವ, ಸಹಕಾರ ಪದ್ಧತಿಗೆ ಒಂದು ಮೇಲ್ಪಂಕ್ತಿಯನ್ನು ಇಲ್ಲಿನ ಸದಸ್ಯರು ಹಾಕಿಕೊಟ್ಟಿದ್ದಾರೆ. ಶಿಸ್ತು, ಅಚ್ಚುಕಟ್ಟುತನ, ಸಮಯ ಪ್ರಜ್ಞೆಯನ್ನು ಮೈಗೂಡಿಸಿಕೊಂಡು ಕಾರ್ಯನಿರತರಾಗಿರುವ ಮೈಸೂರು ಅಸೋಸಿಯೇಷನ್‌ನ ಎಲ್ಲಾ ಸದಸ್ಯರನ್ನು ನಾವಿಲ್ಲಿ ಅಭಿನಂದಿಸಲೇ ಬೇಕು. ●

**ಕರ್ನಾಟಕ ಸಾಂಸ್ಕೃತಿಕ ಪರಂಪರೆ - ೭**

*(ಪುಟ 17ರಿಂದ)*

ಸಂಸ್ಕೃತದಲ್ಲಿ 'ವೇದಾಂತ ಕಲ್ಪತರು' ಎಂಬ ಕೃತಿ ರಚಿಸಿದ್ದಾನೆ. ಕೃಷ್ಣನ ಸೇನಾನಿ ಜಲ್ಹಣ ಪಂಡಿತ 'ಸೂಕ್ತಿ ಮುಕ್ತಾವಳಿ' ಎಂಬ ಸಂಸ್ಕೃತ ಸೂಕ್ತಿಗಳ ಸಂಗ್ರಹವನ್ನು ರಚಿಸಿದ್ದಾನೆ. 'ಘನ ವೇದಾಂತಿ', ಸಂಖ್ಯಾ ತತ್ವಗಳಲ್ಲಿ ನಿಷ್ಣಾತನಾದ ಭಾಸ್ಕರಾಚಾರ್ಯನಿಗೆ ''ಸರ್ವಜ್ಞ'' ಮತ್ತು 'ವಿದ್ಯಾಸದ' ಎಂಬ ಬಿರುದುಗಳಿದ್ದವು. ಇವನ ಮೊಮ್ಮಗ ಅನಂತ ದೇವ ಜ್ಯೋತಿಷ್ಯಾಸ್ತ್ರದಲ್ಲಿ ಪಾರಂಗತನಾಗಿದ್ದನು. ಇವನು ವರಹಾ ಮಿಹಿರನು 'ಬೃಹಜಾತಕದ ಮೇಲೆ ಟೀಕೆ ಬರೆದಿರುವನು. ಸಿಂಘಣ ಆಸ್ಥಾನದಲ್ಲಿದ್ದ ಶಾರ್ಙ್ಗ (ಸಾರಂಗ) ದೇವನು 'ಸಂಗೀತ ರತ್ನಾಕರ ' ಎಂಬ ಗ್ರಂಥವನ್ನು ರಚಿಸಿದನು. ಇದು ಸಂಗೀತದಲ್ಲಿ ಲಭ್ಯವಾಗಿರುವ ಗ್ರಂಥಗಳಲ್ಲೆಲ್ಲಾ ಬೃಹತ್ತಾದುದಾಗಿದೆ. ಇದರಲ್ಲಿ ಒಟ್ಟು ೭ ಅಧ್ಯಾಯಗಳಿವೆ. ಆದ್ದರಿಂದ ಈ ಗ್ರಂಥಕ್ಕೆ 'ಸಪ್ತಾಧ್ಯಾಯ' ಎಂಬ ಹೆಸರೂ ಇದೆ. ಈ ಗ್ರಂಥದ ಮೇಲೆ ಕೇಶವ ಭೂಪಾಲ ಮತ್ತು ಕಲ್ಲಿನಾಥರು ಸಂಸ್ಕೃತದಲ್ಲಿ ಟೀಕೆಗಳನ್ನು ಬರೆದಿರುವರು. ಇದೇ ಅರಸನ ಆಶ್ರಯದಲ್ಲಿ ಕಮಲಭವನೆಂಬ ಕನ್ನಡ ಕವಿ 'ಶಾಂತೇಶ್ವರ ಪುರಾಣ'ವನ್ನು ರಚಿಸಿದನು. ಇದು ಮರಾಠಿ ಸಾಹಿತ್ಯದಲ್ಲಿ ಒಂದು ಶ್ರೇಷ್ಠ ಕೃತಿಯಾಗಿದೆ. ಉಪನಿಷತ್ತಿನ ತತ್ವಸಾರವನ್ನು ಒಳಗೊಂಡಿರುವ 'ಅಮಿತಾನುಭವ' ಇವನ ಮತ್ತೊಂದು ಕೃತಿ ಮರಾಠಿಯಲ್ಲಿ ರಚಿತವಾದ ಮತ್ತೊಂದು ಉತ್ತಮ ಗ್ರಂಥ ಮಹಿಮಾಭಟ್ಟನ 'ಲೀಲಾ ಚರಿತ್ರ'.

ಸೇವುಣರ ಕಾಲದಲ್ಲಿ ಹೆಚ್ಚಾಗಿ ಕನ್ನಡ ಕೃತಿಗಳು ಬರಲಿಲ್ಲವಾದರೂ ಕನ್ನಡ ಶಾಸನಗಳ ದೃಷ್ಟಿಯಿಂದ ನೋಡಿದರೆ ಇವರ ಕೊಡುಗೆ ಗಮನಾರ್ಹವಾದುದೆಂದೇ ಹೇಳಬೇಕು. ಅವರ ಶಾಸನಗಳು ಬಹುಪಾಲು ಕನ್ನಡದಲ್ಲಿವೆ. ಕೆಲವು ಶಾಸನಗಳಂತೂ ಪುಟ್ಟಕಾವ್ಯದಂತಿವೆ.

ಕಲೆ ಮತ್ತು ವಾಸ್ತು ಶಿಲ್ಪ : ಸೇವುಣರ ದೇವಾಲಯಗಳು ಕಲ್ಯಾಣ ಮತ್ತು ಗುಜರಾತಿನ ಚಾಲುಕ್ಯರ ದೇವಾಲಯಗಳನ್ನು ಹೋಲುತ್ತವೆ ಘನಪಂಡಿತನಾಗಿದ್ದ ಹೇಮಾದ್ರಿ, ದೇವಾಲಯಗಳನ್ನು ಕಟ್ಟಿಸಿದ್ದಾನೆ. ಅವುಗಳ ನಿರ್ಮಾಣದಲ್ಲಿ ಇವನು ಅಳವಡಿಸಿದ ಹೊಸ ಮಾದರಿಯನ್ನು 'ಹೇಮಾಂಡ ಪಂತಿ' ದೇವಾಲಯಗಳೆಂದು ಕರೆಯುತ್ತಾರೆ. ಇವುಗಳ ಹೊರಗೋಡೆಗಳಲ್ಲಿ ಹೆಚ್ಚಿನ ಕೆತ್ತನೆಗಳಿಲ್ಲ. ಕಟ್ಟಿದ ದೊಡ್ಡ ಕಲ್ಲುಗಳನ್ನು ಉಪಯೋಗಿಸಿ ಗಚ್ಚು ಇತ್ಯಾದಿ ಯಾವುದೇ ಕೂಡಿಸುವ ವಸ್ತುವಿಲ್ಲದೆ ಈ ದೇವಾಲಯಗಳು ನಿರ್ಮಿತವಾಗಿವೆ. ಇವರ ದೇಗುಲಗಳು ಏಕಶಿಲಾಸ್ತಂಭಗಳಿಂದ ಕೂಡಿದವು. ಅವರ ಕೆಲವು ಗುಡಿಗಳಲ್ಲಿ ಉತ್ತರಕ್ಕೆ ಶಿಖರಗಳಿದ್ದು ಅವುಗಳ ಮೇಲೆ ಎದ್ದು ತೋರುವ ಸುಳಿವು ಪಟ್ಟಿಗಳು ಉದಗ್ರವಾಗಿರುತ್ತವೆ. ಈ ವರ್ಗಕ್ಕೆ ಸೇರಿದ ಗುಡಿಗಳ ಉತ್ತಮ ಉದಾಹರಣೆಗಳೆಂದರೆ ಬೀದರ ಜಿಲ್ಲೆಯಲ್ಲಿರುವ ನೀಲಾಂಗ ದೇವಸ್ಥಾನ ಮತ್ತು ನಾಗಪೂರದ ಬಳಿಯ 'ರಾಮಟೇಕ್‌ಗುಡಿ'. ಸೇವುಣರ ಕಾಲದ ದೇವಾಲಯಗಳಲ್ಲಿ - ಡಂಬಳದ ದೊಡ್ಡ ಬಸವನಗುಡಿ, ಚವಡಿಯ ಬ್ರಹ್ಮೇಶ್ವರ ಗುಡಿ, ನರಗುಂದದ ದಂಡೇಶ್ವರ ಗುಡಿ, ಸೂಡಿಯ ಜೋಡು ಕಳಸದ ಗುಡಿ, ಲಕ್ಕುಂಡಿಯ ಕಾಶಿ ವಿಶ್ವೇಶ್ವರನ ದೇವಾಲಯ, ತಿಳಿವಳ್ಳಿಯ ಶಾಂತೇಶ್ವರ ದೇವಾಲಯ, ಥಾನಾ ಜಿಲ್ಲೆಯ ಅಂಬರನಾಥ ದೇವಾಲಯ, ನಾಸಿಕ್ ಜಿಲ್ಲೆಯ ಗೋಂದೇಶ್ವರ ದೇವಾಲಯ ಪ್ರಮುಖವಾದುವು.

ಹೀಗೆ ಶೈವ ಮತ್ತು ವೈಷ್ಣವ ಧರ್ಮಗಳನ್ನು ಸಮಾನ ಭಾವನೆಯಿಂದ ಕಂಡರು. ಕರ್ನಾಟಕ ಸಂಸ್ಕೃತಿಯ ಸಮನ್ವಯ ದೃಷ್ಟಿಯನ್ನು ಎತ್ತಿ ಹಿಡಿದು ಉದಾತ್ತ ಆದರ್ಶಗಳನ್ನು ರೂಢಿಸಿಕೊಂಡು ಬಂದ ರಾಜವಂಶಗಳಲ್ಲಿ ಸೇವುಣರೂ ಪ್ರಮುಖರಾಗಿ ಪರಿಣಮಿಸಿದ್ದಾರೆ.

Bangalore
21st November, 2000

Dear Sir,

Congratualations for the greatest honors given by Karnataka, Rajyotsava Prashasti. I was thrilled to be over that news on D D Bangalore News. I didn't have the phone numbers of the Association and thereby I couldn't phone you.

I was in Bombay for one week to attend a Seminar on 10th, 11th, 12th on the same days you had Masti Utsav. But I still managed to come to the Association on 11th and saw the drama. It was too good. But for you and Manjunathan Association would not have achieved and also for all the troubles you have taken, selfless service you have rendered, to bring up the Association to this level. My Sincere best wishes to you all. Please inform all those who helped you in this venture. God bless you all.

**(V. K. Murthy)**

# ಡಾ. ಗಿರಿಜಾ ಶಾಸ್ತ್ರಿ ಅವರ 'ಕಥಾ ಮಾನಸಿ' - ಒಂದು ಸಮೀಕ್ಷೆ

✍ ರಮಾಮಣಿ

ಡಾ.ಗಿರಿಜಾ ಶಾಸ್ತ್ರಿಯವರು "ಆಧುನಿಕ ಕನ್ನಡ ಕಥಾ ಸಾಹಿತ್ಯ - ಒಂದು ಸ್ತ್ರೀವಾದಿ ಅಧ್ಯಯನ" ಮಹಾಪ್ರಬಂಧವನ್ನು ತಮ್ಮ ಪಿ.ಎಚ್.ಡಿ. ಪದವಿಗಾಗಿ ಡಾ. ತಾಳ್ತಜೆ ವಸಂತ್ ಕುಮಾರ್‌ರವರ ಮಾರ್ಗದರ್ಶನದಲ್ಲಿ ಬರೆದು ಮುಂಬೈ ವಿಶ್ವವಿದ್ಯಾಲಯಕ್ಕೆ **1994**ರಲ್ಲಿ ಒಪ್ಪಿಸಿದ್ದರು. ಪರೀಕ್ಷಕರು ಅದನ್ನು ಮೌಲಿಕ ಸಂಶೋಧನೆ ಎಂದು ಪರಿಗಣಿಸಿದ್ದಲ್ಲದೆ ಪ್ರಕಟಣೆಗೆ ಅರ್ಹವಾದ ಕೃತಿ ಎಂದೂ ಶಿಫಾರಸ್ಸು ಮಾಡಿದ್ದರು. ಅದು ಈ ಸಹಸ್ರಮಾನದ ಆರಂಭದಲ್ಲಿ ವಿಶ್ವವಿದ್ಯಾಲಯದ ಧನ ಸಹಾಯ ಆಯೋಗದಿಂದ ಅನುದಾನಿತ ಕೃತಿಯಾಗಿ 'ಕಥಾಮಾನಸಿ' ಎಂಬ ಹೆಸರಿನಿಂದ ಪರಿಷ್ಕೃತಗೊಂಡು ಮುಂಬೈ ವಿಶ್ವವಿದ್ಯಾಲಯದಲ್ಲಿ ಸಾಹಿತ್ಯ ಪ್ರಕಾಶನದ ಮೂಲಕ ಏಪ್ರಿಲ್ **12**ರಂದು ಬಿಡುಗಡೆ ಹೊಂದಿತು. ಡಾ. ಎಚ್. ಎಸ್. ಶ್ರೀಮತಿ (ಹಂಪಿ, ಮಹಿಳಾ ಅಧ್ಯಯನ ವಿಭಾಗದ ನಿರ್ದೇಶಕಿ) ಈ ಕೃತಿಗೆ ಮುನ್ನುಡಿ ಬರೆದು ಹಾರೈಸಿದರೆ, ವಿಭಾಗದ ಮುಖ್ಯಸ್ಥ ತಾಳ್ತಜೆಯವರು ಬೆನ್ನುಡಿ ಬರೆದು ಹಾರೈಸಿದ್ದಾರೆ.

ಕಥೆ ಎನ್ನುವುದು ಸಾಮಾನ್ಯವಾಗಿ ಮಕ್ಕಳ ಹಂತದಿಂದ ಮುದುಕರವರೆಗೂ ಆಸಕ್ತಿ ಮೂಡಿಸುವ ಅಂಶ. ಸಣ್ಣ ಕಥೆಗಳ ಮೂಲವನ್ನು ವಡ್ಡಾರಾಧನೆಯ ಕಾಲದಿಂದಲೇ ಮೂಡಿ ಬಂದಿರುವುದನ್ನು ಎಲ್ಲರೂ ನೆನಪು ಮಾಡಿಕೊಳ್ಳಬಹುದು. ಇಂಥ ದೀರ್ಘ ಪರಂಪರೆಯನ್ನುಳ್ಳ ಸಣ್ಣ ಕಥೆಯ ಬಗ್ಗೆ ಕಾದಂಬರಿ ಪ್ರಕಾರಕ್ಕೆ ಹೋಲಿಸಿದರೆ ನಡೆದಿರುವ ಅಧ್ಯಯನ ಬಹಳ ಕಡಿಮೆ. ಅತ್ಯಂತ ಜನಪ್ರಿಯ ಪ್ರಕಾರವಾದ ಈ ಸಾಹಿತ್ಯದ ಅಧ್ಯಯನ ಇಂದು ಹಲವಾರು ಆಯಾಮಗಳಲ್ಲಿ ನಡೆಯಬೇಕಾಗಿರುವುದನ್ನು ಈ ಕೃತಿ ಸೂಚಿಸುತ್ತದೆ. ಈಗ ತಾನೇ ಭಾರತೀಯ ಸಂದರ್ಭದಲ್ಲಿ ಸಾಹಿತ್ಯ ಪ್ರಕಾರವೊಂದರ ಮೂಲಕ ಇದುವರೆಗೆ ನಡೆದು ಬಂದಿರುವ ಸ್ತ್ರೀ ಪ್ರಜ್ಞೆಯನ್ನು ಗುರುತಿಸುವುದು ಈ ಅಧ್ಯಯನದ ಮೂಲ ಉದ್ದೇಶವೆಂದು ಲೇಖಕಿ ಹೇಳಿದ್ದಾರೆ.

ಈ ಕೃತಿಯಲ್ಲಿನ ಅಧ್ಯಾಯಗಳ ಮೂಲಕ ನಾಲ್ಕು ಪ್ರಮುಖ ಘಟ್ಟಗಳ (ನವೋದಯ, ಪ್ರಗತಿಶೀಲ, ನವ್ಯ, ನವ್ಯೋತ್ತರ) ಕತೆಗಾರರಲ್ಲಿ ಅವರು ಸೃಷ್ಟಿಸಿರುವ ಗ್ರಾಮೀಣ ಸುಶಿಕ್ಷಿತ ಸ್ತ್ರೀ ಪಾತ್ರಗಳು, ಅವುಗಳ ಬಗೆಗಿನ ಪುರುಷ ಪಾತ್ರಗಳ ನಿಲುವು, ಸ್ತ್ರೀಯರ ಸಮಸ್ಯೆಗಳಿಗೆ ಅವಳನ್ನು ಹೊಣೆಯಾಗಿಸುವ ಬಗೆಗೆ ಸ್ತ್ರೀ, ಪುರುಷ ಹಾಗೂ ಅನೈತಿಕ ಸಂಬಂಧಗಳ ಬಗೆಗೆ ತಳೆಯುವ ದೃಷ್ಟಿಕೋನ ಮುಂತಾದ ಪ್ರಮುಖ ವಿಚಾರಗಳನ್ನು ಕಾಲಮಾನದ ಮನೋಧರ್ಮಕ್ಕೆ ತಕ್ಕಂತೆ ಚರ್ಚಿಸಲಾಗಿದೆ. ಜೊತೆಗೆ ನಮ್ಮ ಕತೆಗಾರ್ತಿಯರೇ ಸೃಷ್ಟಿಸಿದ ಸ್ತ್ರೀ ಪಾತ್ರಗಳು, ಅವರ ಕೌಟುಂಬಿಕ ನೆಲೆ, ಅದರ ಹಿಂದಿರುವ ಪ್ರಭಾವ, ಪ್ರೇರಣೆ, ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ನೆಲೆಯಲ್ಲಿ ಪುರುಷ ಮೌಲ್ಯಗಳನ್ನು, ಸಿದ್ಧ ಮಾದರಿಗಳನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಪ್ರಶ್ನೆ ಮುಂತಾದುವುಗಳನ್ನು ಇಲ್ಲಿ ಲೇಖಕಿ ಚರ್ಚಿಸಿದ್ದಾರೆ.

ಮಹಿಳೆಯ ಅಸ್ತಿತ್ವದ ಬಗ್ಗೆ ಪುರುಷನಿಗಿರುವ ದುರ್ಲಕ್ಷ್ಯವನ್ನು ಹೇಳುತ್ತಾ "ಮಹಿಳೆಯ ಬಗ್ಗೆ ಅಧ್ಯಯನ ಮಾಡುವುದೆಂದರೆ ಉಪಯೋಗವಿಲ್ಲದ 'ನಿಷ್ಪ್ರಯೋಜಕವಾದ' 'ಹಾಸ್ಯಾಸ್ಪದ ' ಕೆಲಸವೆಂದು ಕಾಣುವ ಅವರ ಮನೋಭಾವವನ್ನು ನಿರ್ಭಿಡೆಯಿಂದ ಖಂಡಿಸಿದ್ದಾರೆ. ಇನ್ನೂ ಮುಂದುವರೆದು ಮಹಿಳೆ ಮತ್ತು ಅವಳ ಸ್ವಭಾವಗಳು ಲಾಗಾಯ್ತಿನಿಂದಲೂ ಪುರುಷರ ದೃಷ್ಟಿಕೋನದಿಂದ ರೂಪಿಸಲ್ಪಟ್ಟಿವೆ; ಪರಿಣಾಮವಾಗಿ ಅವಳ ಇರುವಿಕೆ ಹಾಗೂ ಅವಳನ್ನು ಕಾಣಿಸುವಿಕೆಯ ನಡುವಿನ ಅಗಾಧ ಅಂತರವನ್ನು ಈ ಕೃತಿಯಲ್ಲಿ ಗುರುತಿಸಲಾಗಿದೆ.

ಸ್ತ್ರೀವಾದದ ಕಲ್ಪನೆ ಮೂಲತಃ ಪಾಶ್ಚಾತ್ಯರದು. ಭಾರತೀಯರಿಗಿಂತ ಹಳೆಯದಾದ ಸ್ತ್ರೀವಾದದ ಇತಿಹಾಸವನ್ನು ಮೊದಲನೆಯ ಅಧ್ಯಾಯದಲ್ಲಿ ದೀರ್ಘವಾಗಿ ಚರ್ಚಿಸಲಾಗಿದೆ.

ಭಾರತೀಯನೆಲೆಗೆ ಬಂದಾಗ ಸ್ತ್ರೀವಾದ ಇನ್ನೂ ಶೈಶವಾವಸ್ಥೆಯಲ್ಲಿರುವುದನ್ನು ಗಮನಿಸುತ್ತಾ ಅದರ ಜಾಗೃತಿಯನ್ನು ಮೂರು ನೆಲೆಗಳಲ್ಲಿ ಹೀಗೆ ಗುರುತಿಸುತ್ತಾರೆ (1) ಆಧುನಿಕ ವಿದ್ಯಾಭ್ಯಾಸ (2) ಸಾಮಾಜಿಕ ಸುಧಾರಣೆ (3) ಹಾಗೂ ಸ್ತ್ರೀ ಮತದಾನಕ್ಕಾಗಿ ಭಾರತದಲ್ಲಿ ಮಹಿಳೆಯರ ಹೋರಾಟ.

ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟಿಶರ ಸಂಪರ್ಕದಿಂದ ಬ್ರಹ್ಮ ಸಮಾಜ, ಆರ್ಯ ಸಮಾಜ ಮುಂತಾದುವು ಹೆಣ್ಣು ಮಕ್ಕಳ ಏಳಿಗೆಗಾಗಿ ಶ್ರಮಿಸಿದುದನ್ನು ಲೇಖಕಿ ನೆನಪಿಸಿಕೊಳ್ಳುತ್ತಾರೆ. ಮೊದಲ ಹಂತದಲ್ಲಿ ಪಂಡಿತ ರಮಾಬಾಯಿ, ಶ್ರೀಮತಿ ಜ್ಯೋತಿ ಬಾಫುಲೆ, ಸರೋಜಿನಿ ನಾಯ್ಡು ಇವರುಗಳ ನೇತೃತ್ವದಲ್ಲಿ ಸಾಮುದಾಯಿಕ ನೆಲೆಯಲ್ಲಿ ಮಹಿಳಾ ಸಂಘ, ಸಂಸ್ಥೆಗಳು ಚಳುವಳಿಯನ್ನು ಮುಂದುವರಿಸಿರು ವುದನ್ನು ಕಾಣಬಹುದು.

ಕನ್ನಡದ ನೆಲೆಗೆ ಬಂದಾಗ ನಂಜನ ಗೂಡು ತಿರುಮಲಾಂಬ ಮೊದಲ ಬರಹಗಾರ್ತಿಯಾಗಿ, ಬಹುಮುಖಿ ಪ್ರತಿಭಾನ್ವಿತರಾಗಿ ಮಿಂಚಿರುವುದು ತಿಳಿಯುತ್ತದೆ. ಕಲ್ಯಾಣಮ್ಮ, ಶ್ಯಾಮಲಾದೇವಿಯವರ ಬರಹಗಳಲ್ಲಿ ಭಾರತೀಯಾ ಸ್ತ್ರೀವಾದಕ್ಕೆ ಸಂದ ಕೊಡುಗೆಯನ್ನು ಚರ್ಚಿಸಲಾಗಿದೆ. ತಮ್ಮೆಲ್ಲ ಮಿತಿಗಳಿಂದಲೂ ಈ ಕಥೆಗಾರ್ತಿಯರು ಪ್ರಾಮಾಣಿಕವಾಗಿ ಜೀವನಕ್ಕೆ ಸ್ಪಂದಿಸಿರುವುದನ್ನು ಕಾಣಬಹುದು.

ಮೊದಲ ಘಟ್ಟದ ನವೋದಯ ಕಾಲದ ಕಥೆಗಾರರು ಐತಿಹಾಸಿಕ ಕಥೆಗಳಲ್ಲಿ ಹೆಣ್ಣನ್ನು ವೈಭವೀಕರಣದ ನೆಲೆಯಲ್ಲೂ, ಸಾಮಾಜಿಕ ಕಥೆಗಳಲ್ಲಿ ವಾಸ್ತವದ ನೆಲೆಯಲ್ಲೂ ಕಂಡ ಪ್ರಯೋಗದ ದೃಷ್ಟಿಯನ್ನು ಇಲ್ಲಿ ಗಮನಿಸಲಾಗಿದೆ. ನವೋದಯ ಕಂಡ ಸ್ತ್ರೀ ಮಾದರಿಗಳೆಂದು (1) ಸುಕುಮಾರ, ಮಾನವೀಯ, ಸುಶಿಕ್ಷಿತ, ಕೆಳವರ್ಗ, ತ್ಯಾಗಶೀಲೆಯರ ಲೋಕಗಳಾಗಿ ವಿಂಗಡಿಸಿ ಇಲ್ಲಿ ಚರ್ಚಿಸಿದ್ದಾರೆ.

ನವೋದಯ ಲೇಖಕಿಯರ ಸ್ವಭಾವ ಜನ್ಯವಾದ ಸಹಜ ಸಂವೇದನೆಯನ್ನು ಸಾವಿತ್ರಮ್ಮ, ಶ್ಯಾಮಲಾದೇವಿ, ಕೊಡಗಿನ ಗೌರಮ್ಮ ಮುಂತಾದವರ ಕಥೆಗಳಲ್ಲಿ ಕಂಡಿದ್ದಾರೆ. ಈ ಘಟ್ಟದ ಲೇಖಕಿಯರ ಸಾಹಿತ್ಯಾಭಿವ್ಯಕ್ತಿಯು ಮಾಧ್ಯಮಕ್ಕೆ ಅನೇಕ ಮಿತಿಗಳಿದ್ದೂ ಸಮಾನಾಂತರ ನಿಲುವುಗಳನ್ನು ಬೀಜ ರೂಪದಲ್ಲಿ ಗುರುತಿಸಿದ್ದಾರೆ.

ಪ್ರಗತಿಶೀಲ ಘಟ್ಟದಲ್ಲಿ ಅನಕೃ, ನಿರಂಜನ, ಕಟ್ಟೀಮನಿ, ತ.ರಾ.ಸು. ಮುಂತಾದವರ ಸಾಧನೆಗಳನ್ನು ತಮ್ಮ ದೃಷ್ಟಿಕೋನದಿಂದ ನೋಡಿ ಹೆಣ್ಣಿನ ವಿವಿಧ ಸಮಸ್ಯೆಗಳ ಆಯಾಮಗಳನ್ನು ಪರಿಚಯಿಸುತ್ತಲೇ ಅಂತರಂಗದ ತಾಪಮಾನಗಳೊಂದಿಗೆ ಹೆಣ್ಣು ಶೋಷಣೆಯ ವಸ್ತುವಾಗುವುದನ್ನು ಕಾಣುತ್ತಾರೆ.

ಈ ಕಾಲದ ಸೀಮಿತ ಸ್ತ್ರೀ ಲೋಕದ ಕತೆಗಾರ್ತಿಯರಾಗಿ ತ್ರಿವೇಣಿ, ಸುಶೀಲ ಕೊಪ್ಪರ, ಅನುಪಮಾ ನಿರಂಜನ, ವಾಣಿ ಮುಂತಾದವರು ಕೌಟುಂಬಿಕ ಮೌಲ್ಯಗಳ ದ್ವಂದ್ವ ನೀಡಿರುವುದನ್ನು ಕಾಣಬಹುದು. ಇವರುಗಳ ಕಥೆಗಳಲ್ಲಿ ಸಾಮಾಜಿಕ ಪರಿವರ್ತನೆಯನ್ನು ಮೇಲ್ಸ್ತರದಲ್ಲಿ ಗ್ರಹಿಸಿರುವ ಸೂಕ್ಷ್ಮತೆಯನ್ನು ಲೇಖಕಿ ಗುರುತಿಸಿದ್ದಾರೆ.

ನವ್ಯದ ನಿಲುವಿನಲ್ಲಿ ಸ್ತ್ರೀ ವ್ಯಕ್ತಿತ್ವದ ವಿಭಿನ್ನ ಆಯಾಮಗಳ ವಿವಿಧ ಮಗ್ಗುಲುಗಳ ಶೋಧ ನಡೆದಿದೆ. ಪರಂಪರೆಯ ಗಟ್ಟಿ ಬೆನ್ನೆಲುಬನ್ನು ಹೊಂದಿದ್ದ ನವೋದಯ ಲೇಖಕರು ಚಿತ್ರಿಸಿದ ಸ್ತ್ರೀ ಗೂ ಅದರ ಬಗ್ಗೆ ನಿಷ್ಠುರ ಆತ್ಮ ಮೂಲಭೂತ ಅಂತರವಿರುವುದನ್ನು ಇಲ್ಲಿ ಗುರುತಿಸಲಾಗಿದೆ. ಇದನ್ನು ಯು. ಆರ್. ಅನಂತಮೂರ್ತಿ, ಶಾಂತಿನಾಥ ದೇಸಾಯಿ, ಚಿತ್ತಾಲರು, ಲಂಕೇಶರ ಕಥೆಗಳ ಮೂಲಕ ಚರ್ಚಿಸಲಾಗಿದೆ.

ನವ್ಯಕತೆಗಾರ್ತಿಯರ ಸ್ವ ಪ್ರಜ್ಞಾ ಲೋಕದಲ್ಲಿ ರಾಜಲಕ್ಷ್ಮಿ, ವೀಣಾ ಶಾಂತೇಶ್ವರ, ವೈದೇಹಿ ಇವರುಗಳ ಕಥೆ, ಕುಟುಂಬ, ತಾಯ್ತನದ ವೈಭವೀಕರಣ ಹೆಣ್ಣಿನ

## ವರದರಾಜ ಆದ್ಯ ಸ್ಮಾರಕ ಪ್ರಶಸ್ತಿಗೆ ಅರ್ಜಿ ಆಹ್ವಾನ

ಕರ್ನಾಟಕ ಸಂಘ ಮಾಟುಂಗ ಇದರ ಮಾಜಿ ಅಧ್ಯಕ್ಷ ದಿ| ವರದರಾಜ ಆದ್ಯ ಅವರ ಸ್ಮರಣಾರ್ಥ ಸಂಘವು ಪ್ರತಿ ವರ್ಷ ಕೊಡಮಾಡುವ ವರದರಾಜ ಆದ್ಯ ಸ್ಮಾರಕ ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. 1989ರಿಂದ ಸಂಘವು ಈ ಪ್ರಶಸ್ತಿಯನ್ನು ಕೊಡಲು ಪ್ರಾರಂಭಿಸಿದ್ದು, ಕನ್ನಡ ಮರಾಠಿ ಭಾಷೆಗಳ ಸಾಹಿತ್ಯ, ಸಾಂಸ್ಕೃತಿಕ ಸೌಹಾರ್ದ ಮತ್ತು ಬಾಂಧವ್ಯವನ್ನು ಸಮೃದ್ಧಗೊಳಿಸುವಲ್ಲಿ ರಚನಾತ್ಮಕ ಸಾಧನೆ ಮಾಡಿದ ವ್ಯಕ್ತಿಗೆ ಅಥವಾ ಸಂಸ್ಥೆಗೆ ಇದನ್ನು ಕೊಡಲಾಗುವುದು.

10,000 ರೂ. ನಗದು ಪ್ರಶಸ್ತಿ ಪತ್ರಗಳನ್ನು ಹೊಂದಿದ ಈ ಪ್ರಶಸ್ತಿಯನ್ನು ಕೊಡುವಾಗ ವ್ಯಕ್ತಿಯ ಅಥವಾ ಸಂಸ್ಥೆಯ ಹಿಂದಿನ ಎರಡು ವರ್ಷಗಳ ಸಾಧನೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. 2000ನೇ ಸಾಲಿನ ಪ್ರಶಸ್ತಿಗಾಗಿ 1998ಮತ್ತು 1999ನೇ ಸಾಲಿನ ಈ ಕ್ಷೇತ್ರದಲ್ಲಿ ವಿಶೇಷ ಸೇವೆ ಸಲ್ಲಿಸಿದವರನ್ನು ಪರಿಗಣಿಸಲಾಗುವುದು. ಆಸಕ್ತರು ಬಿಳಿ ಹಾಳೆಯಲ್ಲಿ ತಮ್ಮ ವಿವರಗಳನ್ನು ಮತ್ತು ಅದಕ್ಕೆ ಪೂರಕ ವಿವರ (ಪುರಾವೆ)ಗಳೊಂದಿಗೆ ಡಿಸೆಂಬರ್ 31, 2000ದ ಒಳಗಾಗಿ ಸಂಘದ ಈ ಕೆಳಗಿನ ವಿಳಾಸಕ್ಕೆ ತಲುಪುವಂತೆ ಕಳುಹಿಸಬೇಕಾಗಿ ಸಂಘವು ಪ್ರಕಟಣೆಯೊಂದರಲ್ಲಿ ತಿಳಿಸಿದೆ.

Hon. Gen. Secretary,
**KARNATAKA SANGHA,**
Off. T.H. Kataria Marg, Mogal Lane,
Near Matunga Road Stn. (W), Mahim,
Mumbai-400 016

### ಮುಂಬಯಿಯಲ್ಲಿ ಕಾರಂತೋತ್ಸವ - 2000

ಸದಾನಂದರ ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನವು ಶಿವರಾಮ ಕಾರಂತರು ವಿವಿಧ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅವರು ಮಾಡಿ ತೋರಿಸಿದ ಕಾರ್ಯಗಳು ಸೃಜನಶೀಲ ಸಾಧನೆಗಳಾಗಿವೆ. ಬಹುಮುಖ ಪ್ರತಿಭಾ ಸಂಪನ್ನರಾದ ಅವರು ಯುಗ ಪುರುಷರೆಂದರೆ ಅತಿಶಯೋಕ್ತಿಯಲ್ಲ. ನುಡಿದಂತೆ ನಡೆದು ತೋರಿಸಿಕೊಟ್ಟ ಧೀಮಂತ ವ್ಯಕ್ತಿತ್ವ ಅವರದ್ದು ಎಂದು ಸೋಮಯ್ಯ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ| ಸಂಜೀವ ಶೆಟ್ಟಿ ಅವರು ಸದಾನಂದ ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನ ನೆರವೇರಿಸಿದ ಕಾರಂತೋತ್ಸವದಂದು ಮುಖ್ಯ ಅತಿಥಿ ಭಾಷಣಕಾರರಾಗಿ ಹೇಳಿದರು.

ಸದಾನಂದ ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನ ಮೊದಲಿನಂತೆ ಶಾಲಾ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಿದ್ದು ವಿಜೇತರಿಗೆ ಬಹುಮಾನಗಳನ್ನು ಡಾ| ಸಂಜೀವ ಶೆಟ್ಟಿಯವರು ವಿತರಿಸಿದರು. ಪ್ರತಿಷ್ಠಾನದ ವತಿಯಿಂದ ಡಾ| ವ್ಯಾಸರಾವ್ ನಿಂಜೂರ್ ಸ್ವಾಗತಿಸಿ ಪ್ರತಿಷ್ಠಾನದ ಚಟುವಟಿಕೆಗಳ ಬಗ್ಗೆ ತಿಳಿಸಿದರು. ಅತಿಥಿಗಳನ್ನು ಪ್ರಾ| ಶಿವ ಬಿಲ್ಲವರು ಪರಿಚಯಿಸಿದರೆ,

## ಸುತ್ತಮುತ್ತ

ಎಸ್. ಕೆ. ಸುಂದರ್‌ರವರು ವಂದಿಸಿದರು. ಈ ಸಂದರ್ಭದಲ್ಲಿ ಸದಾನಂದ ಸುವರ್ಣರ ನಿರ್ದೇಶನದಲ್ಲಿ 'ಬಾಲೆ ಬಂಗಾರ್' ನಾಟಕ ಪ್ರದರ್ಶನ ನಡೆಯಿತು.

### ಕ.ಸಾ.ಪ. ಮಹಾರಾಷ್ಟ್ರ ಘಟಕ ಹಾಗೂ ಡೊಂಬಿವಲಿಯ ಸಮಿತಿಗಳ ಕೃತಿ ಸಮೀಕ್ಷೆ

ಕನ್ನಡ ಸಾಹಿತ್ಯ ಪರಿಷತ್ತಿನ ಮಹಾರಾಷ್ಟ್ರ ಘಟಕದ ಅಧ್ಯಕ್ಷರಾದ ಡಾ. ಜಿ.ಡಿ. ಜೋಶಿಯವರು ಕರ್ನಾಟಕ ಸಂಘ ಡೊಂಬಿವಲಿ ವಾಚನಾಲಯ ಸಮಿತಿ ಹಾಗೂ ಮಹಾರಾಷ್ಟ್ರ ಘಟಕದ ಸಾಹಿತ್ಯ ಪರಿಷತ್ತಿನ ಸಂಯುಕ್ತ ಆಶ್ರಯದಲ್ಲಿ ನಡೆದ ಕೃತಿ ಸಮೀಕ್ಷೆ ಕಾರ್ಯಕ್ರಮದ ಅಧ್ಯಕ್ಷ ಸ್ಥಾನದಿಂದ ಮಾತನಾಡಿದರು. ಕೃತಿ ಸಮೀಕ್ಷೆಯ ಆವಶ್ಯಕತೆಯನ್ನು ಎತ್ತಿ ಹೇಳಿದರು.

ಸಂಘ ಹಾಗೂ ಪರಿಷತ್ತಿನ ಪದಾಧಿಕಾರಿಗಳಿಂದ ಕಾರ್ಯಕ್ರಮದ ಉದ್ಘಾಟನೆಯಾಗಿ ಶ್ರೀಮತಿ ಶುಭದಾ ಕುಲಕರ್ಣಿಯವರು ಪ್ರಾರ್ಥನೆಗೈದರು. ಅಭಿನವಕಾಳಿದಾಸರಾಗಿದ್ದ ದಿ| ಎಸ್. ವಿ. ಪರಮೇಶ್ವರ ಭಟ್ ಹಾಗೂ ಶ್ರೇಷ್ಠ ಅಂಕಣ ಸಾಹಿತಿ ಡಾ| ಹಾ ಮಾ.ನಾ. ರವರಿಗೆ ಆದರಾಂಜಲಿಯನ್ನು ಹರಿಸಲಾಯಿತು.

ಕಾರ್ಯಕ್ರಮದ ನಿರ್ವಾಹಕ ಆರ್. ಜೆ. ಕಾಲೇಜಿನ ಕನ್ನಡ ವಿಭಾಗ ಮುಖ್ಯಸ್ಥ ಡಾ| ಕೆ. ರಘುನಾಥರವರು ಕೃತಿಗಾರರನ್ನು, ಪ್ರಬಂಧಕಾರರನ್ನು ವೇದಿಕೆಯಲ್ಲಿದ್ದವರನ್ನು ಸಭೆಗೆ ಪರಿಚಯಿಸಿದರು. ತತ್ಪೂರ್ವದಲ್ಲಿ ಪ್ರಾಸ್ತಾವಿಕ ಹಾಗೂ ಸ್ವಾಗತ ಭಾಷಣ ಮಾಡಿದ ಕರ್ನಾಟಕ ಸಂಘದ ಅಧ್ಯಕ್ಷ ಡಾ| ಸಿ.ಜೆ. ಜಾಗೀರದಾರವರು ಎಲ್ಲರೂ ಒಂದೆಡೆ ಸೇರಿ ಮುಕ್ತ ಮನಸ್ಸಿನಿಂದ ವಿಷಯಗಳ ಚರ್ಚೆ ಮಾಡಲು ಅನುವು ಆಗುವಂತೆ ಕಾರ್ಯಕ್ರಮ ಸಂಯೋಜಿಸುವದು ಅವಶ್ಯ ಎಂದು ಹೇಳುತ್ತಾ ಸರ್ವರನ್ನೂ ಸ್ವಾಗತಿಸಿದರು. ಸಂಘದ ಕಾರ್ಯಾಧ್ಯಕ್ಷ ಶಂಕರ ಎಸ್. ಶೆಟ್ಟಿಯವರು ಅತಿಥಿ. ಪ್ರಬಂಧಕಾರರು ಹಾಗೂ ಕೃತಿಗಾರರಿಗೆ ಪುಷ್ಪ ಗೌರವ ನೀಡಿದರೆ ಕಾರ್ಯಕ್ರಮದ ಅಧ್ಯಕ್ಷ ಡಾ| ಜಿ.ಡಿ. ಜೋಶಿಯವರಿಗೆ ಡಾ| ಜಾಗೀರದಾರರು ಪುಷ್ಪಗೌರವ ನೀಡಿದರು.

ಕಾರ್ಯಕ್ರಮದಲ್ಲಿ ವಿದ್ಯಾಧರ ಮುತಾಲಿಕ ದೇಸಾಯಿಯವರ ಬಹುಮಾನಿತ ಕಥಾ ಸಂಕಲನ ಕೊಡಗನ ಕೋಳಿ ನುಂಗಿತ್ತ ಕೃತಿಯನ್ನು ಶ್ರೀಮತಿ ಲಕ್ಷ್ಮೀ ಜೋಶಿಯವರು ವಿಮರ್ಶೆ ಮಾಡಿದರು. ಜಯ ಕೆ. ಶೆಟ್ಟಿಯವರ ಕವನ ಸಂಕಲನ 'ಚಿನ್ನದ ಶಶಿ'ಯನ್ನು ಶ್ರೀಪತಿ ಚಂಪಾರವರು ವಿಮರ್ಶಿಸಿದ್ದರು. ಪ್ರಕಾಶರಾವ್ ಪಯ್ಯಾರ್‌ರವರ ನಾಟಕ ಕೃತಿಯನ್ನು ಸೀತಾರಾಮ ಶೆಟ್ಟಿಯವರು ಸಮೀಕ್ಷೆ ಮಾಡಿದರು. ವಿದ್ಯಾಧರ ಮುತಾಲಿಕ ದೇಸಾಯಿಯವರು ಡಾ| ಜಿ.ಡಿ. ಜೋಶಿಯವರ ಕನ್ನಡದ ಕಾರಣ...... ಪುರುಷರು ಕೃತಿಯನ್ನು ಸಮೀಕ್ಷೆ ಮಾಡಿದರು. ಅದೇ ರೀತಿ ಸೀತಾರಾಮ ಶೆಟ್ಟಿಯವರ ರೂಪಾಂತರವಾದ 'ಧೂಮಕೇತು' ನಾಟಕ ಕೃತಿಯನ್ನು ವಿಜಯಕುಮಾರ್ ಶೆಟ್ಟಿಯವರು ಸಮರ್ಪಿಸಿದರು.

ಕೊನೆಯಲ್ಲಿ ವಾಚನಾಲಯ ಸಮಿತಿಯ ಕಾರ್ಯಾಧ್ಯಕ್ಷ ವಿಜಯಕುಮಾರ ಶೆಟ್ಟಿಯವರು ಸರ್ವರನ್ನು ವಂದಿಸುತ್ತ ತಮ್ಮ ಮುಂದಿನ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಣೆ ಸಹ ಇರುವುದನ್ನೂ ಹಾಗೂ 1-12-2000ದಂದು ಸಾಹಿತ್ಯ ಪರಿಷತ್ತಿನ ದತ್ತಿ ಉಪನ್ಯಾಸ ಶ್ರೀ ಆದಿಶಕ್ತಿ ಕನ್ನಡ ಶಾಲೆಯಲ್ಲಿ, ಶ್ರೀ ಆದಿಶಕ್ತಿ ಕನ್ನಡ ಸಂಘದ ಸಹಯೋಗದೊಂದಿಗೆ ನಡೆಯಲಿರುವದನ್ನೂ ಪ್ರಕಟಿಸಿದರು.

### ಕಲಾ ಉತ್ಸವ ಮಾಸಿಕ ಪತ್ರಿಕೆಯ ಬಿಡುಗಡೆ

ಪ್ರಖ್ಯಾತ ಪತ್ರಕರ್ತ ಶ್ರೀ ಎಂ. ವಿ. ಕಾಮತ್ ಅವರು ಮುಂಬಯಿಯಿಂದ ಪ್ರಕಾಶಗೊಳ್ಳುತ್ತಿರುವ 'ಕಲಾಉತ್ಸವ' ಮಾಸ ಪತ್ರಿಕೆಯನ್ನು ಇತ್ತೀಚೆಗೆ ನಗರದ ಗೋರೆಗಾಂವ್ ಕರ್ನಾಟಕ ಸಂಘದ ಸಭಾಗೃಹದಲ್ಲಿ ಬಿಡುಗಡೆಗೊಳಿಸಿದರು.

ಶ್ರೀ ಕಾಮತ್ ಅವರು ಮಾತನಾಡುತ್ತ 'ಮಹಾನಗರ ಮುಂಬಯಿಯಲ್ಲಿ ಕನ್ನಡ ಸಂಸ್ಕೃತಿಯನ್ನು ಉಳಿಸಲು ಹೆಚ್ಚು ಹೆಚ್ಚು ಕನ್ನಡ ಪತ್ರಿಕೆಗಳು ಪ್ರಕಾಶನಗೊಳ್ಳುವ ಅಗತ್ಯವಿದೆ. ಇತರ ಭಾಷೆಯ ಪತ್ರಿಕೆಗಳಿಗೆ ಹೋಲಿಸಿದರೆ ಕನ್ನಡದಲ್ಲಿ ಕಲೆಗೆ ಮೀಸಲಾಗಿರಿಸಲ್ಪಟ್ಟ ಪತ್ರಿಕೆಗಳು ವಿರಳ, ಈ ನಿಟ್ಟಿನಲ್ಲಿ ಕಲಾ ಉತ್ಸವ ಯಶಸ್ವಿಯಾಗಿ ಕನ್ನಡಿಗರ ಮನೆಮಾತಾಗಲಿ'' ಎಂದು ಹೇಳುತ್ತಾ ತಾವು ಹಲವಾರು ವರ್ಷಗಳ ಹಿಂದೆ ಪ್ರಕಟಿಸಿದ 'ನುಡಿ' ಎಂಬ ಕನ್ನಡ ಪತ್ರಿಕೆಯನ್ನು ನೆನಪಿಸಿಕೊಂಡರು.

ಗೌರವ ಅತಿಥಿ ಮುಂಬಯಿ ಮಹಾನಗರದ ಮಾಜಿ ಉಪಮೇಯರ್ ಶ್ರೀ ಗೋಪಾಲ ಶೆಟ್ಟಿಯವರು ಮುಂಬಯಿಯ ಕನ್ನಡ ಮಾತೃಭಾಷೆಯ ನಾಗರಿಕರು ತನ್ನತನ ಉಳಿಸಿಕೊಳ್ಳುವುದು ತಮ್ಮ ಆದ್ಯಕರ್ತವ್ಯವೆಂದು ಭಾವಿಸಬೇಕು, ಎಂದು ಹೇಳುತ್ತಾ 'ಕಲಾಉತ್ಸವ'ವು ಕನ್ನಡಿಗರ ಹಬ್ಬವಾಗಲಿ, ಸಂಪಾದಕ ಪಯ್ಯಾರು ಪ್ರಕಾಶರಾವ್ ಅವರೊಂದಿಗೆ ಮುಂಬಯಿ ಕನ್ನಡಿಗರು ಬೆಂಬಲಕ್ಕೆ ಇದ್ದಾರೆ ಎಂದು ಹೇಳಿದರು.

ಪತ್ರಿಕೆಯ ಸಂಪಾದಕ ಪಯ್ಯಾರು ಪ್ರಕಾಶರಾವ್ ಅವರು ಪ್ರಸ್ತಾವಿಕವಾಗಿ ಮಾತನಾಡುತ್ತಾ ''ಮುಂಬಯಿಯಲ್ಲಿ ಕನ್ನಡಕ್ಕೆ ಭವಿಷ್ಯವಿಲ್ಲವೆಂದು ಹೇಳುವುದು ಸುಳ್ಳು, ಯಾವುದೇ ಒಂದು ಭಾಷೆಗೆ ತನ್ನದೇ ಆದ ಚೌಕಟ್ಟನ್ನು ಹಾಕಿ ಆ ಮಿತಿ ಒಳಗೆ ಉಳಿಯಬಾರದು, ಇಂದಿನ ಇಲೆಕ್ಟ್ರಾನಿಕ್ ಯುಗದಲ್ಲಿ ಭಾಷೆ ವಿಶ್ವವ್ಯಾಪ್ತಿಯನ್ನು ಪಡೆದಿದೆ, ಕಲೆಗೆ ಸಲ್ಲಬೇಕಾದ ಗೌರವ ಸಲ್ಲಿಸುವುದು, ಅಂತಹ ಮನೋವೃತ್ತಿಯನ್ನು ಸಾಮಾನ್ಯನಲ್ಲಿ ಮೂಡಿಸುವುದು ಪತ್ರಿಕೆಯ ಉದ್ದೇಶ ಎಂದು ಹೇಳಿದರು.

ಸಭೆಯ ಅಧ್ಯಕ್ಷತೆ ವಹಿಸಿದ ಕನ್ನಡ ಸಾಹಿತ್ಯ ಪರಿಷತ್ತು, ಮಹಾರಾಷ್ಟ್ರ ಘಟಕದ ಅಧ್ಯಕ್ಷ ಡಾ. ಜಿ.ಡಿ. ಜೋಶಿಯವರು ಮುಂಬಯಿಯಲ್ಲಿ ಕನ್ನಡ ಜನ ಜಾಗೃತಿಗೊಳಿಸಲು ಕನ್ನಡ ಸಂಸ್ಕೃತಿ ಉಳಿಸಲು ಪತ್ರಿಕೆ ಶ್ರಮಿಸಿ ಯಶಸ್ವಿಯಾಗಲಿ ಎಂದು ಶುಭ ಹಾರೈಸಿದರು.

"ಸಂಗೀತಪ್ರೇಮಿಗಳಿಗೊಂದು ಸಂತಸದ ಸುದ್ದಿ"!!

# ಗುರುಗುಹ ಗಾನ ವೈಭವ

ಮಹಾನ್ ವಾಗ್ಗೇಯಕಾರ ತ್ರಿಮೂರ್ತಿಗಳಲ್ಲಿ ಒಬ್ಬರಾದ ನಾದಜ್ಯೋತಿ ಮತ್ತು ಸ್ವಾಮಿ ದೀಕ್ಷಿತರ 480 ಕೃತಿ ರತ್ನಗಳ ಸಂಕಲನ "ಗುರುಗುಹ ಗಾನ ವೈಭವ" ಮೂರು ಭಾಗಗಳಲ್ಲಿ ಸಿದ್ಧವಾಗಿ ಕನ್ನಡದಲ್ಲಿ ಶೀಘ್ರವೇ ಪ್ರಕಟವಾಗುತ್ತಿದೆ. ವೈಣಿಕ -ಗಾಯಕ - ಗುರುಗುಹ ಮುತ್ತುಸ್ವಾಮಿ ದೀಕ್ಷಿತರು ಸಂಗೀತ, ಕಾವ್ಯ ನಾಟಕಾಲಂಕಾರಗಳಲ್ಲದೆ ಜ್ಯೋತಿಷ, ವೈದ್ಯ, ಮಂತ್ರ-ತಂತ್ರ ಶಾಸ್ತ್ರಗಳಲ್ಲೂ ಪರಿಣತರಾಗಿದ್ದರು. ಅವರ ಕೃತಿಗಳು ಇವೆಲ್ಲವುಗಳ ರಸಪಾಕಗಳು. ಶುದ್ಧ ಸಾಹಿತ್ಯ ಪಾಠ, ಸ್ವರಪ್ರಸ್ತಾರಗಳು ಎರಡು ಭಾಗಗಳಲ್ಲಿ ಹಾಗೂ ಅವುಗಳ ವಿಶೇಷಾರ್ಥಗಳು ಮೂರನೆಯ ಭಾಗದಲ್ಲಿ ಹಲವು ಆಕರ್ಷಕ ಚಿತ್ರಗಳನ್ನೊಡಗೂಡಿ, ಸುಂದರವಾಗಿ ಮುದ್ರಣವಾಗಿದೆ. ಈ ಗ್ರಂಥವು ಸಂಗೀತಾಸಕ್ತರಿಗೆ, ವಿದ್ವಾಂಸರಿಗೆ ಅತ್ಯುಪಯುಕ್ತ ಮತ್ತು ಸಂಗ್ರಾಹ್ಯ. ಇದು ಪ್ರತಿಷ್ಠಿತ 'ಶ್ರುತಿರಂಜನಿ' ಸಂಸ್ಥೆಯ ಹೆಮ್ಮೆಯ ಪ್ರಕಟಣೆಯೂ ಹೌದು.

ವೈಶಿಷ್ಟ್ಯಗಳು :-

(1) ಇಂತಹ ಪ್ರಕಟಣೆ ಕನ್ನಡದಲ್ಲಿ ಬಹುಶಃ ಇದೇ ಮೊದಲು. ನಾಡಿನ ಶ್ರೇಷ್ಠ ವಿದ್ವಾಂಸರಾದ ಪ್ರೊ. ಎಸ್. ಕೆ. ರಾಮಚಂದ್ರರಾಯರು ವಿದ್ವತ್ಪೂರ್ಣ ಮುನ್ನುಡಿಯನ್ನು ಬರೆದುಕೊಟ್ಟು ಆಶೀರ್ವದಿಸಿದ್ದಾರೆ.

(2) ಕೃತಿಗಳನ್ನು ಗಣೇಶ, ಸುಬ್ರಹ್ಮಣ್ಯ, ಶ್ರೀರಾಮ, ಹರಿ-ಕೃಷ್ಣ, ಶಿವ - ಶಿವೆ, ನವಗ್ರಹ, ಪಂಚಲಿಂಗ, ದೇವೀ ನವಾವರಣ, ಅಭಯಾಂಬಾ, ಬಾಲಾಂಬಾ, ಮೀನಾಕ್ಷೀ, ಶಾರದೆ, ಲಕ್ಷ್ಮೀ ಇತ್ಯಾದಿಯಾಗಿ ವಿಂಗಡಿಸಲಾಗಿದೆ.

(3) ಕೃತಿಗಳ ಶುದ್ಧ ಪಾಠ ಹಾಗೂ ಸ್ವರಪ್ರಸ್ತಾರಗಳನ್ನು ಶ್ರೀ ಆನಂದರಾಮ ಉಡುಪರು ದೊರೆತ ಎಲ್ಲ ಆಕರಗಳನ್ನು ಪರಿಶೀಲಿಸಿ 2 ಭಾಗಗಳಲ್ಲಿ ಸಿದ್ಧಗೊಳಿಸಿದ್ದಾರೆ. ಶುದ್ಧ ಸಾಹಿತ. ಮತ್ತು ಸ್ವರಪ್ರಸ್ತಾರ ಅವರ ಹಸ್ತಾಕ್ಷರಗಳಲ್ಲೇ ಅಚ್ಚಾಗಿದೆ.

(4) ಶ್ರೀವಿದ್ಯೆ, ಅದ್ವೈತ ವೇದಾಂತ, ಮಂತ್ರ-ತಂತ್ರ, ಜ್ಯೋತಿಷ್ಯ, ಭಾಷಾ ಪ್ರೌಢಿಮೆ ಎಲ್ಲವೂ ಮೈಗೂಡಿರುವ ದೀಕ್ಷಿತರ ಕೃತಿಗಳ, ವಿಶೇಷ ಸಂದರ್ಭ ಅರ್ಥ ವೈಶಾಲ್ಯಗಳನ್ನು ವಿದ್ಯಾಲಂಕಾರ, ಶಾಸ್ತ್ರ ಚೂಡಾಮಣಿ, ಸಂಗೀತಕಲಾರತ್ನ ವೇದಾಂತನಿಧಿ ಪ್ರೊ. ಸಾಲಿಗ್ರಾಮ ಕೃಷ್ಣ ರಾಮಚಂದ್ರರಾಯರು ಸಂಕ್ಷಿಪ್ತವಾಗಿ ಮೂರನೇಯಭಾಗದಲ್ಲಿ ಬರೆದಿದ್ದಾರೆ. ದೀಕ್ಷಿತರ ಕೃತಿಗಳ ಸಮಗ್ರ ಅಧ್ಯಯನಕ್ಕೆ ಪ್ರೊ. ರಾಯರು ಬರೆದಿರುವ ಪಾಂಡಿತ್ಯಪೂರ್ಣ ವ್ಯಾಖ್ಯಾನ. ಕೈದೀವಿಗೆಯಾಗುವುದರಲ್ಲಿ ಸಂದೇಹವಿಲ್ಲ.

(5) ಪ್ರೊ. ರಾಯರೇ ಬರೆದ ಅನೇಕ ರೇಖಾ ಚಿತ್ರಗಳನ್ನೂ ಅಲ್ಲಲ್ಲಿ ಸೇರಿಸಲಾಗಿದೆ. ಮೊದಲಿನ ಎರಡು ಭಾಗಗಳ ಕೊನೆಯಲ್ಲಿ ಕೃತಿಗಳು ರಚನೆಯಾದ ಸ್ಥಳ, ದೇವತೆ, ಇತ್ಯಾದಿ ಲಭಿಸಿದಷ್ಟು ವಿವರಗಳನ್ನು (ಟಿಪ್ಪಣಿಗಳು) ಕೊಡಿಸಿದೆ.

(6) ಮೂರೂ ಭಾಗಗಳು ಸೇರಿ ಸುಮಾರು 1250 ಪುಟಗಳನ್ನು ಮೀರುತ್ತವೆ. ಬೆಲೆ ರೂ. 675/-, ಗ್ರಾಹಕರ ಅನುಕೂಲಕ್ಕಾಗಿ 'ಆರ್ಡರ್ ಫಾರ್ಮ್' ಜತೆಗೆ ಇಡಲಾಗಿದೆ.

ಪ್ರಕಾಶಕರು : ಶ್ರುತಿ ರಂಜನಿ ಶಶಿಕಿರಣ ಗೃಹ ಸಂಕೀರ್ಣ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 055 ದೂರವಾಣಿ : 080 / 3341807

ಬೆಲೆ : ಎರಡು ಸಂಪುಟಗಳಿಗೆ ರೂ. 675/-

GOOD NEWS TO MUSIC LOVERS AND MUSICIANS!!

# GURUGUHA GANA VAIBHAVA

'Sruthi Ranjani' proudly presents "Guruguha Gana Vaibhava" a collection of 480 compositions of Nadajyothi Muthuswami Dikshithar. It is being published in Kannada, in three parts. Vainika-Gayaka-Guruguha Muthuswami Dikshithar, one among the celebrated trinity of Carnatic Classical Music was a composer of rare merit. Besides music, he was a Veena Player, a versatile Sanskrit scholar and a talented poet. His compositions depict a profound mastery over advaita Philosophy, Srividya, Astrology, Medicine and other ancient learning. His compositions are edited here with authentic versions of "Sahithya" and notations. Also included are some relevant line-drawings and pictures. The volumes are printed elegantly and needless to say that these "must find a place in the bookshelf of music lovers and musicians alike.

## OUTSTANDING FEATURES OF THIS VENTURE:

1. This is perhaps, the first of is kind in Kannada to incorporate all the presently available 480 compositions of this great Vaggeyakara. A versatile scholar, Prof. S. K. Ramachandra Rao, has blessed the work with his scholarly foreword, which, in itself is a study of Dikshithar's works.
2. Krithis have been arranged according to various deities, e.g. Ganesha, Subramanya, Rama, Hari-Krishna, Shiva, Parvathi, Navagraha, Panchalinga, Devinavavarana, Lakshmi, Saraswathi, Minakshi and so on.
3. Authentic versions of krithis and their notations have been edited in two parts and calligraphed in his own handwriting by Shri Ananda Rama Udupa.
4. Srividya, Advaitha Philosophy, manthra-thantra, Jyothisha, high flown Sanskrit are all the hallmarks of Dikshithar's compositions, portraying the ragabhava in the composer's inimitable style. The hidden meanings of the 'Sahithya' have been interpreted in a separate part three, by no less a person than Vidyalankara Shastra Choodamani, Vedanthanidhi, Prof. S. K. Ramachandra Rao. His scholarly notes will no doubt be a torch bearer to any comprehensive study of Dikshithar's music, in the years to come.
5. Prof. Rao's line-drawings have enhanced the beauty of the volumes. At the end of the first two parts short notes on the compositions, diety on whom composed, places, etc., have been added.

Published by

SRUTHI RANJANI

#303, Sasi Kiran Apartments, 18th Cross Road, Malleswaram, Bangalore-560 055 Phone : 080-3341807

Price Rs. 675/- for 2 volumes

Regn. No. 040015/86
Regn. No. TECH/47-202/MBI-2000
Date of Posting : 10-12-2000

# ಕರ್ನಾಟಕ ಸರ್ಕಾರ

## 45ನೇ ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು

ಕ

ರು

ನಾ

ಡು

ಸಿ

ರಿ

ನಾ

ಡು

"ನಾಡು ಮತ್ತು ನುಡಿ ಸೇವೆಗೈದ
ಸ್ಮರಣೀಯರೆಲ್ಲರಿಗೂ ನಮ್ಮೆಲ್ಲರ ನಮನಗಳು"

ಸಾಧಿಸಿದ್ದು ಬಹಳಷ್ಟು - ಸಾಧಿಸಬೇಕಾಗಿರುವುದು ಇನ್ನೂ ಬಹಳಷ್ಟು.

*ಕರ್ನಾಟಕ ವಾರ್ತೆ*

Edited, Printed & Published by M.A.N. Prasad, On behalf of the Mysore Association, Mumbai. Tel.: 402 46 47
Printed at Aarati Art Printers, Fort, Mumbai-400 001. * 266 33 61 / 266 59 38


# ಮಕ್ಕಳ ಕಾರ್ಯಕ್ರಮ ನಾಟಕ "ಗುಮ್ಮ"

ನವೆಂಬರ್ ತಿಂಗಳಲ್ಲಿ ಮಕ್ಕಳ ದಿನಾಚರಣೆ ಯನ್ನು ಆಚರಿಸಲಾಗುತ್ತದೆ. ಈ ವರ್ಷ ಮಕ್ಕಳ ದಿನಾಚರಣೆಯ ಅಂಗವಾಗಿ ಒಂದು ನೃತ್ಯ ಕಾರ್ಯಕ್ರಮ ಮತ್ತೆ ಒಂದು ನಾಟಕವನ್ನು ನಮ್ಮ ಪುಟಾಣಿಗಳು ನಡೆಸಿಕೊಟ್ಟರು. 25ನೇ ತಾರೀಖು ಶನಿವಾರ ಸಂಜೆ 7 ಘಂಟೆಗೆ ಕಾರ್ಯಕ್ರಮವು ಪ್ರಾರಂಭವಾಯಿತು. ಡಾ॥ ಮಂಜುನಾಥ್‌ರವರು ಕಾರ್ಯಕ್ರಮದ ಸಂಚಾಲಕರಾಗಿ ಕಲಾವಿದರ ಪರಿಚಯ ಮಾಡಿಕೊಟ್ಟರು. ಮೊದಲು ಕು॥ ಕ್ಷಮಾ ಉಪಾಧ್ಯ ಇವಳಿಂದ ಭರತ ನಾಟ್ಯವಾಯಿತು.



ಗುಮ್ಮದಲ್ಲಿ ಪಂಕಜ್, ಪೂರ್ಣಿಮಾ ಮತ್ತು ಇತರರು.

ಕ್ಷಮಾ ಉಪಾಧ್ಯಳಿಗೆ ನೃತ್ಯದಲ್ಲಿ ಆಸಕ್ತಿ, ಹೀಗಾಗಿ ಚಿಕ್ಕ ವಯಸ್ಸಿಗೆ ಚೆನ್ನಾಗಿ ಕಲಿತಿದ್ದಾಳೆ. 3-4 ವರ್ಷಗಳಿಂದ ರಾಜರಾಜೇಶ್ವರಿ ನೃತ್ಯ ಶಾಲೆಯಲ್ಲಿ ಗುರು ಕಲ್ಯಾಣ ಸುಂದರಂ ಅವರ ಮಾರ್ಗದರ್ಶನದಲ್ಲಿ ಅಭ್ಯಾಸ ಮಾಡುತ್ತಿದ್ದಾಳೆ. 3ನೇ ತರಗತಿಯಲ್ಲಿ ಓದುತ್ತಿರುವ ಕ್ಷಮಾ ಅನೇಕ ಚಟುವಟಿಕೆಗಳಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಾಳೆ.



ಗುಮ್ಮ ನಾಟಕದ ಮತ್ತೊಂದು ದೃಶ್ಯದಲ್ಲಿ ಪಂಕಜ್, ಪೂರ್ಣಿಮಾ, ಪ್ರಿಯಾಂಕ ದೇಸಾಯಿ ಮತ್ತು ಇತರರು.

ನೃತ್ಯದ ನಂತರ ಪುಟಾಣಿಗಳ ನಾಟಕ ನಡೆಯಿತು.

''ಗುಮ್ಮ'' ಗುಮ್ಮ.... ಎಂದರೆ ಏನು? ಯಾರೂ ಉತ್ತರಿಸಲಾಗದ ಪ್ರಶ್ನೆ. ಮಕ್ಕಳಿಗೆ ಹೆದರಿಸಲು ಬಳಸುವ ರೂಢಿಯಲ್ಲಿರುವ ಪದ, ಮಕ್ಕಳು ಗಲಾಟೆ ಮಾಡಿದಾಗ ಸಾಮಾನ್ಯವಾಗಿ ತಾಯಂದಿರು ಹೆದರಿಸಲು ಹೇಳುತ್ತಾರೆ. ''ಗುಮ್ಮನ ಕರಿತೀನಿ'' ಗುಮ್ಮಂಗೆ ಹಿಡಿಕೊಡ್ತೀನಿ''.... ಅಂತೆಲ್ಲಾ. ಆಗ ಮಕ್ಕಳಿಗೆ ಮಾನಸಿಕವಾಗಿ ಒಂದು ರೀತಿಯ ಭಯ ಆವರಿಸಿ ಸುಮ್ಮನಾಗುತ್ತವೆ. ಆದರೆ ಸ್ವಲ್ಪ ಬೆಳೆದ ಮಕ್ಕಳು ಗುಮ್ಮ ಅಂದ್ರೆ ಏನಮ್ಮಾ ಅಂತ ಕೇಳತ್ವೆ. ಅದಕ್ಕೆ ಉತ್ತರ ತಾಯಿ ಬಳಿ ಇಲ್ಲ. ಏನನ್ನು ತೋರಿಸಿ ''ಗುಮ್ಮ'' ಅನ್ನಬೇಕು, ಗುಮ್ಮದ ವರ್ಣನೆ ಹೇಗೆ? ಅನಾದಿಕಾಲದಿಂದಲೂ ಬಂದಿದೆ. ಈ ಗುಮ್ಮನ ಭೀತಿ. ಪುರಂದರದಾಸರ ಒಂದು ಪದದಲ್ಲಿ ''ಕೃಷ್ಣ'' 'ಯಶೋದೆ'ಗೆ ಹೇಳುತ್ತಾನೆ. ''ಗುಮ್ಮನ ಕರೆಯದಿರೆ ಅಮ್ಮ ನೀ''.... ಎಂದು. ಅಂದಿನಿಂದ ಇಂದಿನ ವರೆಗೂ 'ಗುಮ್ಮ' ಎಂದರೆ ಏನು ಎಂಬ ಪ್ರಶ್ನೆ.

ಆದರೆ ಗುಮ್ಮ ಅಂದರೆ ಏನೂ ಅಲ್ಲ. ಅದೊಂದು ಮಾನಸಿಕ ಭ್ರಮೆ ಎಂಬುದನ್ನು ಖ್ಯಾತ ನಾಟಕಕಾರ ಶ್ರೀ ಎ.ಎಸ್. ಮೂರ್ತಿ ಅವರು ತಮ್ಮ ''ಗುಮ್ಮ'' ನಾಟಕದ ಮೂಲಕ ತಿಳಿಸಿದ್ದಾರೆ. ನಾಟಕದಲ್ಲಿ ಬರುವ ಅಜ್ಜಿಯು ತನ್ನ ಮೊಮ್ಮಗನನ್ನು ಕಾಡುತ್ತಿರುವ ಗುಮ್ಮನ ಭ್ರಮೆಯನ್ನು, ಮನಸ್ಸಿನಲ್ಲಾವರಿಸಿರುವ ಭಯವನ್ನು ದೂರ ಮಾಡುತ್ತಾಳೆ. ನಂತರ ನಾಯಕ ಹರಿಯು ಧೈರ್ಯದಿಂದ ಉಸಿರಾಡುತ್ತಾನೆ.

ಡಾ॥ ಮಂಜುನಾಥರವರ ನೇತೃತ್ವದಲ್ಲಿ ಹಾಗೂ ಶ್ರೀಮತಿ ಸುಮಾ ದ್ವಾರಕನಾಥ್‌ರವರ ನಿರ್ದೇಶನದಲ್ಲಿ ನಾಟಕವು ಯಶಸ್ವಿಯಾಗಿ ಪ್ರಯೋಗಗೊಂಡಿತು.



ಗುಮ್ಮ ನಾಟಕ ಆಡಿದ ಪುಟಾಣಿಗಳು ಹಾಗೂ ನಿರ್ದೇಶಕಿ ಸುಮಾದ್ವಾರಕಾನಾಥ್‌ರೊಂದಿಗೆ.